# ಕರ್ನಾಟಕ ವಿಕಾಸ
# Karnataka Vikas

ಜನವರಿ 2020 January 2020




MGNREGAಗೆ ಸತತ 3ನೇ ಬಾರಿ ರಾಷ್ಟ್ರೀಯ ಪ್ರಶಸ್ತಿ.

## ಇಲಾಖೆಗೆ ರಾಷ್ಟ್ರೀಯ ಪ್ರಶಸ್ತಿಗಳ ಗರಿ



ಅತಿ ಹೆಚ್ಚು ತರಬೇತಿಗಾಗಿ ANSSIRDಗೆ ರಾಷ್ಟ್ರೀಯ ಪ್ರಥಮ ಪ್ರಶಸ್ತಿ

# ಕರ್ನಾಟಕ ವಿಕಾಸ 2020 ಕ್ಯಾಲೆಂಡರ್

## ಜನವರಿ 2020

| | | | | | |
|---|---|---|---|---|---|
| ಭಾನು | | 5 | 12 | 19 | 26 |
| ಸೋ | | 6 | 13 | 20 | 27 |
| ಮಂ | | 7 | 14 | 21 | 28 |
| ಬುಧ | 1 | 8 | 15 | 22 | 29 |
| ಗುರು | 2 | 9 | 16 | 23 | 30 |
| ಶುಕ್ರ | 3 | 10 ○ | 17 | 24 ● | 31 |
| ಶನಿ | 4 | 11 | 18 | 25 | |

## ಫೆಬ್ರವರಿ 2020

| | | | | | |
|---|---|---|---|---|---|
| ಭಾನು | | 2 | 9 ○ | 16 | 23 ● |
| ಸೋ | | 3 | 10 | 17 | 24 |
| ಮಂ | | 4 | 11 | 18 | 25 |
| ಬುಧ | | 5 | 12 | 19 | 26 |
| ಗುರು | | 6 | 13 | 20 | 27 |
| ಶುಕ್ರ | | 7 | 14 | 21 | 28 |
| ಶನಿ | 1 | 8 | 15 | 22 | 29 |

## ಮಾರ್ಚ್ 2020

| | | | | | |
|---|---|---|---|---|---|
| ಭಾನು | 1 | 8 | 15 | 22 | 29 |
| ಸೋ | 2 | 9 ○ | 16 | 23 | 30 |
| ಮಂ | 3 | 10 | 17 | 24 ● | 31 |
| ಬುಧ | 4 | 11 | 18 | 25 | |
| ಗುರು | 5 | 12 | 19 | 26 | |
| ಶುಕ್ರ | 6 | 13 | 20 | 27 | |
| ಶನಿ | 7 | 14 | 21 | 28 | |

## ಏಪ್ರಿಲ್ 2020

| | | | | | |
|---|---|---|---|---|---|
| ಭಾನು | | 5 | 12 | 19 | 26 |
| ಸೋ | | 6 | 13 | 20 | 27 |
| ಮಂ | | 7 | 14 | 21 | 28 |
| ಬುಧ | 1 | 8 ○ | 15 | 22 ● | 29 |
| ಗುರು | 2 | 9 | 16 | 23 ● | 30 |
| ಶುಕ್ರ | 3 | 10 | 17 | 24 | |
| ಶನಿ | 4 | 11 | 18 | 25 | |

## ಮೇ 2020

| | | | | | |
|---|---|---|---|---|---|
| ಭಾನು | 31 | 3 | 10 | 17 | 24 |
| ಸೋ | | 4 | 11 | 18 | 25 |
| ಮಂ | | 5 | 12 | 19 | 26 |
| ಬುಧ | | 6 | 13 | 20 | 27 |
| ಗುರು | | 7 ○ | 14 | 21 | 28 |
| ಶುಕ್ರ | 1 | 8 | 15 | 22 ● | 29 |
| ಶನಿ | 2 | 9 | 16 | 23 | 30 |

## ಜೂನ್ 2020

| | | | | | |
|---|---|---|---|---|---|
| ಭಾನು | | 7 | 14 | 21 ● | 28 |
| ಸೋ | 1 | 8 | 15 | 22 | 29 |
| ಮಂ | 2 | 9 | 16 | 23 | 30 |
| ಬುಧ | 3 | 10 | 17 | 24 | |
| ಗುರು | 4 | 11 | 18 | 25 | |
| ಶುಕ್ರ | 5 ○ | 12 | 19 | 26 | |
| ಶನಿ | 6 | 13 | 20 | 27 | |

## 2020ರ ರಜಾ ದಿನಗಳ ವಿವರ

**ಜನವರಿ**

1 – ನೂತನ ವರ್ಷಾರಂಭ
11 – 2ನೇ ಶನಿವಾರ
15– ಮಕರ ಸಂಕ್ರಾಂತಿ
25 – 4ನೇ ಶನಿವಾರ
26 – ಗಣರಾಜ್ಯೋತ್ಸವ
30 – ಹುತಾತ್ಮರ ದಿನಾಚಾರಣೆ

**ಫೆಬ್ರವರಿ**

3 – ಶ್ರೀ ಮಾಧ್ವ ನವಮಿ
8 – 2ನೇ ಶನಿವಾರ
21 – ಮಹಾಶಿವರಾತ್ರಿ
22 – 4ನೇ ಶನಿವಾರ

**ಮಾರ್ಚ್**

9 – ಹೋಳಿ ಹಬ್ಬ
14 – 2ನೇ ಶನಿವಾರ
25 – ಚಂದ್ರಮಾನ ಯುಗಾದಿ
28 – 4ನೇ ಶನಿವಾರ
29 – ದೇವರ ದಾಸಿಮಯ್ಯ ಜಯಂತಿ

**ಏಪ್ರಿಲ್**

2 – ಶ್ರೀರಾಮ ನವಮಿ
6 – ಮಹಾವೀರ ಜಯಂತಿ
9 – ಷಬ್–ಎ–ಬರಾತ್
10 – ಗುಡ್ ಫ್ರೈಡೆ
11 – 2ನೇ ಶನಿವಾರ
13 –ಸೌರಮಾನ ಯುಗಾದಿ
14 – ಡಾ॥ಬಿ.ಆರ್.ಅಂಬೇಡ್ಕರ್
25 – 4ನೇ ಶನಿವಾರ
26 – ಬಸವ ಜಯಂತಿ / ಅಕ್ಷಯ ತೃತೀಯ
28 – ಶ್ರೀ ಶಂಕರಾಚಾರ್ಯ ಜಯಂತಿ/ ಶ್ರೀರಾಮಾನುಜಾಚಾರ್ಯ ಜಯಂತಿ

**ಮೇ**

1 – ಕಾರ್ಮಿಕರ ದಿನಾಚಾರಣೆ
7 – ಬುದ್ಧ ಪೌರ್ಣಮಿ
9 – 2ನೇ ಶನಿವಾರ
20 – ಷಬ್–ಎ–ಖಾದರ್
22 – ಜಮತ್–ಉಲ್–ವಿದಾ
23 – 4ನೇ ಶನಿವಾರ
25 – ಖುತುಬ್–ಎ–ರಂಜಾನ್

**ಜೂನ್**

13 – 2ನೇ ಶನಿವಾರ
27 – 4ನೇ ಶನಿವಾರ

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಜನವರಿ 2020 | ಸಂಪುಟ : 61 | Volume : 61

January 2020 | ಸಂಚಿಕೆ : 02 | Issue : 02


## ಈ ಸಂಚಿಕೆಯೊಳಗೆ


| | |
|---|---|
| ಸಚಿವಾಲಯ ಸಂದೇಶ | 5 |
| **ವರದಿ** | |
| ಸಚಿನ್ ಪೂಜಾರಿ ಬಿ. | 7 |
| ಮಾರುತಿ | 10 |
| ಡಾ॥ ಜಿ.ಎಸ್.ಗಣೇಶ್ ಪ್ರಸಾದ್ | 12 |
| ಹೆಚ್.ವೇಣುಗೋಪಾಲ್ | 13 |
| ಎಂ.ಕೆ.ಕೆಂಪೇಗೌಡ | 22 |
| ಪ್ರಶಾಂತ್ ಎನ್. | 29 |
| ಮುರಳಿ.ಕೆ | 31 |
| ರಾಮಾಂಜನೇಯ ವಿ.ಎಚ್ | 33 |
| ಬಂಡೆಪ್ಪ ಜಿ. ತೇಲಿ | 36 |
| ಧನರಾಜ | 40 |
| **ಯಶೋಗಾಥೆ** | |
| ಕೆ.ಜಿ. ಪ್ರಭುಸ್ವಾಮಿ | 42 |
| ಸುತ್ತೋಲೆ | 47 |
| ಸರ್ಕಾರದ ಪತ್ರ | 49 |






ಪ್ರಕಾಶಕರು

**ಎಸ್.ಎ. ಅಶ್ರಫುಲ್ ಹಸನ್**

ನಿರ್ದೇಶಕರು (ಪಂ.ರಾಜ್-1) ಹಾಗು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರಧಾನ ಸಂಪಾದಕರು

**ಡಾ॥ ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಗ್ರಾಮೀಣ ಮೂಲಭೂತ ಸೌಕರ್ಯ
ಹಾಗು ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ

ಮುಖ್ಯ ಸಂಪಾದಕರು ಹಾಗು
ಸಾರ್ವಜನಿಕ ಸಂಪರ್ಕಾಧಿಕಾರಿ

**ಗಗನ್ ಎ.ಎಸ್.**

ಸಹಾಯಕ ಸಂಪಾದಕರು

**ಆಗ್ನೇಸ್ ಮೇರಿ**

ವ್ಯವಸ್ಥಾಪಕರು

**ಹೆಚ್.ಬಿ. ಗುರುಸ್ವಾಮಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ. 100/-
ಸಂಸ್ಥೆಗಳಿಗೆ ರೂ. 120/-
ಬಿಡಿ ಪ್ರತಿ ರೂ. 10/-

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



### ಕಚೇರಿ ವಿಳಾಸ

ಮುಖ್ಯ ಸಂಪಾದಕರು,
ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ,
ಡಾ. ಅಂಬೇಡ್ಕರ್ ವೀದಿ,
ಬೆಂಗಳೂರು- 560 001.
ದೂರವಾಣಿ: 080-22353857



### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು, ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.
www.rdpr.kar.nic.in ನಲ್ಲಿ ಪತ್ರಿಕೆಯು ಲಭ್ಯವಿರುತ್ತದೆ.
E-mail.karnataka-vikasa@gov.in
E-mail.kvrdpr@gmail.com

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಹೊಸ ಹೊಸ ಯೋಜನೆಗಳೊಂದಿಗೆ ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ವತಿಯಿಂದ ಹೊರತರುತ್ತಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಚೆನ್ನಾಗಿ ಮೂಡಿಬರುತ್ತಿದ್ದು, ಪತ್ರಿಕೆಯಲ್ಲಿನ ಲೇಖನಗಳು, ವರದಿಗಳು, ಸರ್ಕಾರದ ಸುತ್ತೋಲೆ/ನಡವಳಿಗಳು ಓದುಗರಿಗೆ ಉಪಯುಕ್ತವಾಗಿವೆ. ಚಿಂತನ ಮಂಥನ ಎಂಬ ವಿಶಿಷ್ಟ ಕಾರ್ಯಗಾರದ ಮೂಲಕ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ ಗ್ರಾಮೀಣ ಜನರನ್ನು ಪ್ರೇರೇಪಿಸುವ ಕಾರ್ಯವು ಯಶಸ್ವಿಯಾಗಲೆಂದು ಆಶಿಸುತ್ತೇವೆ ಹಾಗೂ ಇಲಾಖೆಯ ಎಲ್ಲರಿಗೂ ಹೊಸ ವರ್ಷದ ಆರ್ಥಿಕ ಶುಭಾಶಯಗಳು.

**ಚೇತನ್ ಎಂ.ಎನ್.,**
**ನಂ.205, 35ನೇ ಅಡ್ಡರಸ್ತೆ, ನರಸಿಂಹಸ್ವಾಮಿ ಬಡಾವಣೆ,**
**ನಂದಿನಿ ಲೇಔಟ್ ಲಗ್ಗೆರೆ, ಬೆಂಗಳೂರು–560069.**

ಹೊಸ ವರ್ಷದ ಆರ್ಥಿಕ ಶುಭಾಶಯಗಳೊಂದಿಗೆ, ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಪ್ರತಿ ಮಾಹೆ ನೂತನ ಯೋಜನೆಗಳ ಮಾಹಿತಿಯೊಂದಿಗೆ ಪ್ರಕಟಗೊಳ್ಳುತ್ತಿದೆ. ಚಿಂತನ ಮಂಥನ ಕಾರ್ಯಗಾರದ ಮೂಲಕ ಪ್ರತಿ ಗ್ರಾಮ ಪಂಚಾಯತಿಯಲ್ಲಿ ವೈಜ್ಞಾನಿಕ ಕಸ ವಿಲೇವಾರಿ ಮತ್ತು ನಿರ್ವಹಣೆ, ನೈರ್ಮಲ್ಯ ವಿಚಾರಗಳನ್ನು ಗ್ರಾಮೀಣ ಭಾಗದ ಜನರಿಗೆ ತಲುಪುವಂತೆ ಮಾಡಲಾಗುತ್ತಿದೆ. ಪರಿಸರ ರಕ್ಷಣೆ ಯಾರ ಹೊಣೆ? ಎಂಬ ಕವಿಯ(ಕ್ಷ) ಪ್ರಶ್ನೆ ಅಂಕಣವು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತಿದೆ. ಹೀಗೆ ಇಲಾಖೆಯು ಹೊಸ ಹೊಸ ಯೋಜನೆಗಳೊಂದಿಗೆ 2020ನೇ ಆರ್ಥಿಕ ವರ್ಷವು ಶುಭದಾಯಕವಾಗಲಿ ಎಂದು ಆಶಿಸುತ್ತೇವೆ.

**ಮುಜೀಬಾ ಎಂ.ಎ., ಸದಾಶಿವನಗರ, ತುಮಕೂರು.**

ಡಿಸೆಂಬರ್–2019ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿನ ಲೇಖನಗಳು, ವರದಿಗಳು, ಸುತ್ತೋಲೆಗಳು ಬಹಳ ಉಪಯುಕ್ತವಾಗಿವೆ. ಎಂಜಿಎನ್ಆರ್ಇಜಿ ಯೋಜನೆಯಡಿ ವಿವಿಧ ಕಾಮಗಾರಿಗಳನ್ನು ಕೈಗೊಂಡು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದರ ಮೂಲಕ ಗ್ರಾಮೀಣ ಬದುಕಿನ ಜನರಿಗೆ ಆಸರೆಯಾಗಿದೆ ಎಂದರೆ ತಪ್ಪಾಗಲಾರದು. ಜಲ ಸಂರಕ್ಷಣೆ, ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿಯಾಗಿರದೆ ನಮ್ಮೆಲ್ಲರ ಹೊಣೆ ಎಂಬುದನ್ನು ಜನರಲ್ಲಿ ಜಾಗೃತಿ ಮೂಡಿಸುವಂತಾಗಬೇಕು. 2020 ಈ ಎಲ್ಲಾ ಕಾರ್ಯಗಳಲ್ಲಿ ಯಶಸ್ವಿಯಾಗಲೆಂದು ಆಶಿಸುತ್ತಾ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಎಲ್ಲಾ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೆ ನೂತನ ವರ್ಷಾರಂಭದ ಆರ್ಥಿಕ ಶುಭಾಶಯಗಳು.

**ಸುನಿತ ಸಿ., ಅವ್ವೇರಹಳ್ಳಿ, ರಾಮನಗರ ತಾಲ್ಲೂಕು/ಜಿಲ್ಲೆ.**

# ಸಚಿವಾಲಯದಿಂದ ಸಂದೇಶ



**ಎಲ್.ಕೆ. ಅತೀಕ್**
ಭಾ.ಆ.ಸೇ
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರಿಯ ಬಂಧುಗಳೇ.....

## ಇಲಾಖೆಗೆ ರಾಷ್ಟ್ರೀಯ ಪ್ರಶಸ್ತಿಗಳ ಗರಿ.....

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಉತ್ತಮ ಅನುಷ್ಠಾನಕ್ಕಾಗಿ ನಾಲ್ಕು ಪ್ರವರ್ಗಗಳಡಿ ಮಹಾತ್ಮಗಾಂಧಿ ನರೇಗಾ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಿಸಿದ ಬಳ್ಳಾರಿ ಜಿಲ್ಲಾ ಪಂಚಾಯಿತಿ, ಅತಿ ಹೆಚ್ಚು ಕಾಮಗಾರಿ ಪೂರ್ಣಗೊಳಿಸಿದ ಕನಕಪುರ ತಾಲ್ಲೂಕು ಪಂಚಾಯತಿ ರಾಮನಗರ ಜಿಲ್ಲೆ, ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಿದ ಗುಂಡಗತ್ತಿ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಹಾಗು ಜಿಯೋ ಮನರೇಗಾ ಅತ್ಯುತ್ತಮ ಎನ್‌ಎಸ್‌ಇ ನಿರ್ವಹಣೆ ಮಾಡಿದ ಶ್ರೀ.ಶಿವಕುಮಾರ್, ಬಿಎಫ್‌ಟಿ, ಮದ್ದೇರು ಗ್ರಾ.ಪಂ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಗೆ 2018-19ನೇ ಸಾಲಿನಲ್ಲಿ ದಿನಾಂಕ:19.12.2019ರಂದು ನವದೆಹಲಿಯಲ್ಲಿ ಸನ್ಮಾನ್ಯ ಶ್ರೀ.ನರೇಂದ್ರ ಸಿಂಗ್ ತೋಮರ್, ಕೇಂದ್ರ ಗ್ರಾಮೀಣಾಭಿವೃದ್ಧಿ ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಪಂಚಾಯತ್ ರಾಜ್ ಸಚಿವರು ಇವರು ರಾಜ್ಯಕ್ಕೆ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿದರು.

ಬಳ್ಳಾರಿ ಜಿಲ್ಲಾ ಪಂಚಾಯಿತಿಯು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಒತ್ತು ನೀಡಿ ಅರಣ್ಯ ಪ್ರದೇಶ/ಸರ್ಕಾರಿ ಜಾಗದಲ್ಲಿ ಬ್ಲಾಕ್ ಪ್ಲಾಂಟೇಷನ್ ಮತ್ತು ಜಿಲ್ಲಾದ್ಯಂತ ಮಳೆ ನೀರು ಸಂರಕ್ಷಣೆಯ ಜಲಾನಯನ ಕಾಮಗಾರಿಗಳನ್ನು ಉತ್ತಮವಾಗಿ ಅನುಷ್ಠಾನ ಮಾಡಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ದುರ್ಬಲ ವರ್ಗದ 2 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಕೂಲಿ ಉದ್ಯೋಗವನ್ನು ನೀಡಿ ಜೀವನಾಧಾರವನ್ನು ಸುಧಾರಿಸಿದ್ದಲ್ಲದೆ, 2018-19ನೇ ಸಾಲಿನಲ್ಲಿ 18570 ಹಾಗು 2019-20ನೇ ಸಾಲಿನಲ್ಲಿ 2758

ಕುಟುಂಬಗಳಿಗೆ 100 ದಿವಸಗಳ ಉದ್ಯೋಗವನ್ನು ಪೂರೈಸಿದ ಸಾಧನೆಗಾಗಿ ಪ್ರಶಸ್ತಿ ಆಯ್ಕೆ ಸಮಿತಿಯು ಬಳ್ಳಾರಿ ಜಿಲ್ಲಾ ಪಂಚಾಯಿತಿಯನ್ನು ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಿರುತ್ತದೆ ಹಾಗು ಇದು ಇನ್ನುಳಿದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಅನುಕರಣೀಯ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ತರಬೇತಿಯ ಅಂಗ ಸಂಸ್ಥೆಯಾಗಿ 1989ರಿಂದ ಪ್ರಾರಂಭಗೊಂಡು, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ/ನೌಕರರುಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಸಾಮರ್ಥ್ಯಾಭಿವೃದ್ಧಿಗೆ ತರಬೇತಿ ಕಾರ್ಯಚಟುವಟಿಕೆಗಳನ್ನು ಅತ್ಯುತ್ತಮವಾಗಿ ನಡೆಸುತ್ತಾ ಬಂದಿದ್ದು, 2018–19ನೇ ಸಾಲಿನಲ್ಲಿ ಸಂಸ್ಥೆಯು ಅತೀ ಹೆಚ್ಚಿನ ಶಿಬಿರಾರ್ಥಿಗಳಿಗೆ ತರಬೇತಿಯನ್ನು ನೀಡಿದ್ದಕ್ಕಾಗಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸಂಸ್ಥೆಗೆ ಪ್ರಥಮ ಪ್ರಶಸ್ತಿ ನೀಡಿರುವುದು ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿರುತ್ತದೆ ಹಾಗು ಸಂಸ್ಥೆಗೆ ಅಭಿನಂದನೆ.

ಕಳೆದ ಮೂರು ವರ್ಷಗಳಿಂದ ಸತತವಾಗಿ ರಾಜ್ಯಕ್ಕೆ ಮಹಾತ್ಮಗಾಂಧಿ ನರೇಗಾ ಯೋಜನೆ ರಾಷ್ಟ್ರೀಯ ಪ್ರಶಸ್ತಿಗಳು ಲಭಿಸುತ್ತಾ ಬಂದಿದ್ದು, ಜೊತೆಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಪ್ರಥಮ ಪ್ರಶಸ್ತಿ ದೊರಕಿದ್ದು, ಇದಕ್ಕೆ ಕಾರಣರಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಕಾರ್ಮಿಕ ಸಂಘಟನೆಗಳು ಹಾಗೂ ಮಹಿಳಾ ಸಂಘಟನೆಗಳ ಪಾತ್ರ ಪ್ರಮುಖವಾಗಿದ್ದು, ಇದೇ ರೀತಿ ಮುಂದಿನ ಸಾಲುಗಳಲ್ಲಿ ಯೋಜನೆಯಡಿ ಉತ್ತಮ ಫಲಶೃತಿ ಆಧಾರಿತ ಕಾಮಗಾರಿಗಳನ್ನು ಅನುಷ್ಠಾನಿಸುವ ಮೂಲಕ ಮೂರು ಹಂತದ ಪಂಚಾಯತ್ ರಾಜ್ ಅಧಿಕಾರಿಗಳು, ಅನುಷ್ಠಾನ ಇಲಾಖೆಗಳು ಹೆಚ್ಚಿನ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಳ್ಳಲು ಹೆಚ್ಚಿನ ಪ್ರಯತ್ನ ನಡೆಸೋಣ.

ಎಲ್ಲರಿಗೂ 2020ನೇ ವರ್ಷದ ಹಾರ್ದಿಕ ಶುಭಾಶಯಗಳು.

**(ಎಲ್.ಕೆ. ಅತೀಕ್)**

ವರದಿ



ಸಚಿನ್ ಪೂಜಾರಿ ಬಿ.

ರಾಜ್ಯ ಯೋಜನಾ ಸಂಯೋಜಕರು
MGNREGA,
ಗ್ರಾಮೀಣಾಭಿವೃದ್ಧಿ ಮತ್ತು
ಪಂ.ರಾಜ್ ಇಲಾಖೆ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2018–19ನೇ ಸಾಲಿನಲ್ಲಿ ಉತ್ತಮ ಅನುಷ್ಠಾನಿಸಿದ ಜಿಲ್ಲೆಗಳಿಂದ ವಿಷಯವಾರು ಪ್ರಸ್ತಾವನೆಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಆಹ್ವಾನಿಸಿತ್ತು

# ರಾಷ್ಟ್ರೀಯ ಪ್ರಶಸ್ತಿಗಳ ಗರಿ

ಮಹಾತ್ಮಗಾಂಧಿ ನರೇಗಾ ಯೋಜನೆ ಉತ್ತಮ ಅನುಷ್ಠಾನಕ್ಕಾಗಿ 2018–19ನೇ ಸಾಲಿನಲ್ಲಿ 04 ಪ್ರವರ್ಗಗಳಡಿ ನರೇಗಾ ರಾಷ್ಟ್ರೀಯ ಪ್ರಶಸ್ತಿಗಳನ್ನು ದಿನಾಂಕ:19.12.2019ರಂದು ಸಿ.ಸುಬ್ರಮಣಿಯನ್ ಸಭಾಂಗಣ, ಪೂಸಾ ರಸ್ತೆ ನವದೆಹಲಿಯಲ್ಲಿ ಸನ್ಮಾನ್ಯ ಶ್ರೀ.ನರೇಂದ್ರ ಸಿಂಗ್ ತೋಮರ್, ಗ್ರಾಮೀಣಾಭಿವೃದ್ಧಿ, ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಪಂಚಾಯತ್ ರಾಜ್ ಸಚಿವರು ರಾಜ್ಯಕ್ಕೆ ಈ ಕೆಳಕಂಡ ಜಿಲ್ಲೆ/ ತಾಲ್ಲೂಕು/ ಗ್ರಾಮಗಳಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡಲಾಯಿತು.

**ಮಹಾತ್ಮಗಾಂಧಿ ನರೇಗಾ ಯೋಜನೆ ಪರಿಣಾಮಕಾರಿ ಅನುಷ್ಠಾನಿಸಿದ ಜಿಲ್ಲಾ ಪಂಚಾಯಿತಿ:**




| | | |
|---|---|---|
| 1. | ಮಹಾತ್ಮಗಾಂಧಿ ನರೇಗಾ ಯೋಜನೆ ಪರಿಣಾಮಕಾರಿ ಅನುಷ್ಠಾನಿಸಿದ ಜಿಲ್ಲಾ ಪಂಚಾಯಿತಿ | ಬಳ್ಳಾರಿ ಜಿಲ್ಲಾ ಪಂಚಾಯಿತಿ |
| 2. | ಅತಿ ಹೆಚ್ಚು ಕಾಮಗಾರಿ ಪೂರ್ಣಗೊಳಿಸಿದ ತಾಲ್ಲೂಕು | ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ |
| 3. | ಮಹಾತ್ಮಗಾಂಧಿ ನರೇಗಾ ಯೋಜನೆ ಪರಿಣಾಮಕಾರಿ ಅನುಷ್ಠಾನಿಸಿದ ಗ್ರಾಮ ಪಂಚಾಯಿತಿ | ಗುಂಡಗತ್ತಿ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. |
| 4. | ಜಿಯೋ ಮನರೇಗಾ ಅತ್ಯುತ್ತಮ ಎನ್‌ಎಸ್‌ಇ ನಿರ್ವಹಣೆ ಮಾಡಿದ ಬಿಎಫ್‌ಟಿ | ಶ್ರೀ ಶಿವಕುಮಾರ–ಮದ್ದೇರು ಗ್ರಾ.ಪಂ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. |

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2018–19ನೇ ಸಾಲಿನಲ್ಲಿ ಉತ್ತಮ ಅನುಷ್ಠಾನಿಸಿದ ಜಿಲ್ಲೆಗಳಿಂದ ವಿಷಯವಾರು ಪ್ರಸ್ತಾವನೆಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಆಹ್ವಾನಿಸಿದ್ದು, ಇದರಡಿ ರಾಜ್ಯದಿಂದ 06 ಪ್ರಸ್ತಾವನೆಗಳನ್ನು ಕಳುಹಿಸಲಾಗಿತ್ತು. ಅದರಲ್ಲಿ ಬಳ್ಳಾರಿ

ಜಿಲ್ಲಾ ಪಂಚಾಯಿತಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ವಿಭಾಗದಡಿ ಅರಣ್ಯ ಪ್ರದೇಶ/ಸರ್ಕಾರಿ ಜಾಗದಲ್ಲಿ ಬ್ಲಾಕ್ ಪ್ಲಾಂಟೇಷನ್ ಮತ್ತು ಮಳೆ ನೀರು ಸಂರಕ್ಷಣೆಯ ಜಲಾನಯನ ಕಾಮಗಾರಿ ಕುರಿತ ಪ್ರಸ್ತಾವನೆಯು ಆಯ್ಕೆಯಾಗಿರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ 2018–19 ಹಾಗೂ 2019–20ನೇ ಸಾಲಿನಲ್ಲಿ 5503 ಹೆಕ್ಟೇರ್ ಪ್ರದೇಶದಲ್ಲಿ 5.25 ಲಕ್ಷ ಘ.ಮೀ ಕಂದಕ ಬದು ನಿರ್ಮಾಣವನ್ನು ವೈಯಕ್ತಿಕ ಫಲಾನುಭವಿಗಳ ಜಮೀನುಗಳಲ್ಲಿ ಅನುಷ್ಠಾನಿಸಲಾಗಿದೆ. ಇದರಿಂದ ಸರಾಸರಿ ವಾರ್ಷಿಕ 10 ಭಾರಿ ತುಂಬಿದರೆ ಕನಿಷ್ಠ 5405.32 ಮಿ.ಲೀಟರ್ ಮಳೆ ನೀರು ಸಂಗ್ರಹಗೊಳ್ಳಲಿದೆ. ರೈತರ ಜಮೀನುಗಳಲ್ಲಿ ನಿರ್ಮಿಸಿರುವ 249 ಕೃಷಿ ಹೊಂಡಗಳಿಂದಲೂ ಸಹ 1.49 ಲಕ್ಷ ಲೀಟರ್ ಮಳೆ ನೀರನ್ನು ಸಂಗ್ರಹಿಸಬಹುದಾಗಿದೆ.

ಅರಣ್ಯ ಇಲಾಖೆ ಒಗ್ಗೂಡಿಸುವಿಕೆಯಡಿ ಸಾರ್ವಜನಿಕ ಬಂಜರು ಭೂಮಿಯಲ್ಲಿ 10.60 ಲಕ್ಷ ಲೀಟರ್ ಮಳೆ ನೀರನ್ನು ಸಂಗ್ರಹಿಸಲು ಸುಮಾರು 1.51 ಲಕ್ಷ ಘ.ಮೀ ಕಂದಕಗಳನ್ನು ನಿರ್ಮಿಸಿರುವುದರಿಂದ ಕಾಡು ಪ್ರಾಣಿಗಳಿಗೆ ಕುಡಿಯಲು ನೀರು ಸಿಗಲಿದೆ. ಇದಲ್ಲದೆ 568 ಹೆಕ್ಟೇರ್ ಪ್ರದೇಶದಲ್ಲಿ ಸಸಿಗಳನ್ನು (ಬ್ಲಾಕ್ ಪ್ಲಾಂಟೇಷನ್) ನೆಡಲಾಗಿದೆ. 186 ಕಿ.ಮೀ ಉದ್ದ ರಸ್ತೆ ಬದಿಯ ನೆಡುತೋಪು ನಿರ್ಮಾಣ ಮಾಡಿದ್ದರೆ 114 ಸರ್ಕಾರಿ ಕಚೇರಿ/ಶಾಲೆ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಜಿಲ್ಲೆಯಲ್ಲಿ ಹಸಿರನ್ನು ಹೆಚ್ಚಿಸಲು ನರೇಗಾ ಯೋಜನೆಯಡಿ ಕ್ರಮವಹಿಸಲಾಗಿದ್ದು, ಸುಮಾರು 54.60 ಕೋಟಿ ಅನುದಾನವನ್ನು ವಿನಿಯೋಗಿಸಲಾಗಿದೆ. ಇದರಿಂದ ಮಳೆ ನೀರನ್ನು ವಿವಿಧ ಹಂತಗಳಲ್ಲಿ ಇಂಗಿಸುವಲ್ಲಿ ಹಾಗೂ ಮಣ್ಣಿನಲ್ಲಿ ನೀರಿನ ತೇವಾಂಶವನ್ನು ಬಹುಕಾಲ ಕಾಪಾಡುವಲ್ಲಿ ಈ ಕಾಮಗಾರಿಗಳು ಯಶಸ್ವಿಯಾಗಿರುತ್ತದೆ.

ನರೇಗಾ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸೇರಿದಂತೆ ದುರ್ಬಲ ವರ್ಗದ 2 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಕೂಲಿ ಉದ್ಯೋಗವನ್ನು ಪಡೆದುಕೊಂಡು ತಮ್ಮ ಜೀವನಾಧಾರವನ್ನು ಸುಧಾರಿಸಿಕೊಂಡಿದ್ದಾರೆ. 2018–19ನೇ ಸಾಲಿನಲ್ಲಿ 18570, 2019–20ನೇ ಸಾಲಿನಲ್ಲಿ 2758 ಕುಟುಂಬಗಳಿಗೆ 100 ದಿವಸಗಳ ಉದ್ಯೋಗವನ್ನು ಪೂರೈಸಿವೆ. ಈ ಸಾಧನೆಯನ್ನು ಗುರುತಿಸಿ ಪ್ರಶಸ್ತಿ ಆಯ್ಕೆ ಸಮಿತಿಯು ಬಳ್ಳಾರಿ ಜಿಲ್ಲಾ ಪಂಚಾಯಿತಿಯನ್ನು ಸ್ಥಳ ಪರಿಶೀಲನೆಗೆ ಆಯ್ಕೆ ಮಾಡಿತ್ತು. ಸ್ಥಳ





ಪರಿಶೀಲನೆ ವೇಳೆ ಕೂಲಿಕಾರರಿಂದ ಕಾಮಗಾರಿ ಅನುಷ್ಠಾನ, ಮಳೆ ನೀರು ಸಂರಕ್ಷಣೆ, ಹಸುರೀಕರಣ ಕಾಮಗಾರಿಗಳ ಉತ್ತಮ ಫಲಶೃತಿ ಹೊಂದಿರುವುದನ್ನು ಪರಿಶೀಲಿಸಿ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಿರುತ್ತದೆ. ಈ ರಾಷ್ಟ್ರೀಯ ಪ್ರಶಸ್ತಿಯನ್ನು ಬಳ್ಳಾರಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ.ಭಾರತಿ ತಿಮ್ಮಾರೆಡ್ಡಿ ಹಾಗೂ ಇಲಾಖೆ ಹಿರಿಯ ಅಧಿಕಾರಿಗಳು (2018–19ನೇ ಆರ್ಥಿಕ ವರ್ಷ) ರವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ನರೇಗಾ ಎಮ್‌ಐಎಸ್ ಆಧಾರದ ಮೇಲೆ ಕಾಮಗಾರಿ ಪೂರ್ಣಗೊಳಿಸುವ ಪ್ರವರ್ಗದಡಿ ರಾಷ್ಟ್ರದಲ್ಲಿಯೇ ಅತಿ ಹೆಚ್ಚು ಕಾಮಗಾರಿಗಳನ್ನು ಪೂರ್ಣಗೊಳಿಸಿದ ಕೀರ್ತಿಗೆ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು ಪಾತ್ರವಾಗಿರುತ್ತದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಉತ್ತಮ ಅನುಷ್ಠಾನಿಸಿದ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಗುಂಡಗತ್ತಿ ಗ್ರಾಮ ಪಂಚಾಯಿತಿ ಹಾಗೂ ಜಿಯೋ ಮಹಾತ್ಮಗಾಂಧಿ ನರೇಗಾ ವಿಭಾಗದಡಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮದ್ದೇರು ಗ್ರಾಮ ಪಂಚಾಯಿತಿಯ ಬಿಎಫ್‌ಟಿ ಶ್ರೀ.ಶಿವಕುಮಾರ ಆಯ್ಕೆಯಾಗಿದ್ದಾರೆ.

ಕಳೆದ ಮೂರು ವರ್ಷಗಳಿಂದ ಸತತವಾಗಿ ರಾಜ್ಯಕ್ಕೆ ಮಹಾತ್ಮಗಾಂಧಿ ನರೇಗಾ ಯೋಜನೆ ರಾಷ್ಟ್ರೀಯ ಪ್ರಶಸ್ತಿಗಳು ಲಭಿಸುತ್ತಿವೆ. ಈ ರಾಷ್ಟ್ರೀಯ ಪ್ರಶಸ್ತಿ ಲಭಿಸಲು ಕಾರಣರಾದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಜನಪ್ರತಿನಿಧಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಕಾರ್ಮಿಕ ಸಂಘಟನೆಗಳು ಹಾಗೂ ಮಹಿಳಾ ಸಂಘಟನೆಗಳ ಪಾತ್ರ ಪ್ರಮುಖವಾಗಿರುತ್ತದೆ. ಇದೇ ರೀತಿ ಮುಂದಿನ ಸಾಲುಗಳಲ್ಲಿ ಯೋಜನೆಯಡಿ ಉತ್ತಮ ಫಲಶೃತಿ ಆಧಾರಿತ ಕಾಮಗಾರಿಗಳನ್ನು ಅನುಷ್ಠಾನಿಸುವ ಮೂಲಕ ಮೂರು ಹಂತದ ಪಂಚಾಯತ್ ರಾಜ್ ಅಧಿಕಾರಿಗಳು, ಅನುಷ್ಠಾನ ಇಲಾಖೆಗಳು ಹೆಚ್ಚಿನ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನ ನಡೆಸಲಿವೆ.

ವರದಿ



ಮಾರುತಿ

ಐಇಸಿ
ಸಮಾಲೋಚಕರು,
ಕೊಪ್ಪಳ ಜಿಲ್ಲೆ

# ಘನ ತ್ಯಾಜ್ಯ ನಿರ್ವಹಣೆ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 26 ನೇ ನವೆಂಬರ್ 2019 ರಂದು ಬಹು ಗ್ರಾಮ ಪಂಚಾಯತಿ ಘನ ತ್ಯಾಜ್ಯ ವಿಲೇವಾರಿ ಘಟಕದ ತರಬೇತಿ ಸಭಾಂಗಣ, ಹುಲಗಿ, ಕೊಪ್ಪಳ ಇಲ್ಲಿ ರಾಜ್ಯದಲ್ಲಿನ ಕೊಪ್ಪಳ ಜಿಲ್ಲೆಯನ್ನೊಳಗೊಂಡು 5 ಜಿಲ್ಲೆಗಳಾದ ಗದಗ, ಬಾಗಲಕೋಟೆ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಬಹುಗ್ರಾಮ ಪಂಚಾಯತಿ ಘನ ತ್ಯಾಜ್ಯ ನಿರ್ವಹಣೆ ಅನುಷ್ಠಾನದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಾನ್ಯ ಸಚಿವರು, ಬಹುಗ್ರಾಮ ಪಂಚಾಯತಿಗಳ ಘನ ತ್ಯಾಜ್ಯ ವಿಲೇವಾರಿ ಘಟಕಗಳ ನಿರ್ಮಾಣ ಮಾಡಲು ಹೆಚ್ಚು ಒತ್ತು ನೀಡುವಂತೆ ಸಲಹೆ ನೀಡಿದರು. ಮತ್ತು ಘಟಕ ನಿರ್ಮಾಣದ ಸಮಯದಲ್ಲಿ ಯಾವುದೇ ತೊಂದರೆಗಳಿದ್ದರೆ ನೇರವಾಗಿ ನನಗೆ ಕರೆ ಮಾಡಬಹುದು ಹಾಗೂ ವಿಧಾನಸೌಧಕ್ಕೆ ಈ ವಿಷಯವಾಗಿ ಭೇಟಿ ನೀಡಿದರೆ, ಮೊದಲ ಆದ್ಯತೆ ತಮಗೆ ನೀಡಲಾಗುವುದು ಎಂದು ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ಮಾನ್ಯರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಘಟಕ ನಿರ್ಮಾಣ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳನ್ನೊಳಗೊಂಡು ಬಹುಗ್ರಾಮ ಪಂಚಾಯತಿಗಳ ಘಟಕ ನಿರ್ಮಾಣ ಮಾಡುವುದರಿಂದ ಗ್ರಾಮ ಪಂಚಾಯತಿಗಳಿಗೆ ಹೆಚ್ಚು ಹೊರೆಯಾಗುವುದಿಲ್ಲ ಹಾಗೂ ತ್ಯಾಜ್ಯವನ್ನು ಆಯಾ ಗ್ರಾಮ ಪಂಚಾಯತಿಗಳಿಂದ ಸಂಗ್ರಹಿಸಿ ಬಹುಗ್ರಾಮ ಪಂಚಾಯತಿ ಘಟಕಕ್ಕೆ ನೀಡುವುದರಿಂದ ಆದಾಯವನ್ನು ಗಳಿಸಬಹುದು. ಆದ್ದರಿಂದ ತಮ್ಮ ತಮ್ಮ ಸಮೀಪವಿರುವ ಗ್ರಾಮ ಪಂಚಾಯತಿಗಳನ್ನು ಒಗ್ಗೂಡಿಸಿಕೊಂಡು ಬಹುಗ್ರಾಮ ಪಂಚಾಯತಿ ಘಟಕ ನಿರ್ಮಾಣ ಮಾಡುವಂತೆ ಸಲಹೆ

**ಬಹುಗ್ರಾಮ ಪಂಚಾಯತಿಗಳ ಘಟಕ ನಿರ್ಮಾಣ ಮಾಡುವುದರಿಂದ ಗ್ರಾಮ ಪಂಚಾಯತಿಗಳಿಗೆ ಹೆಚ್ಚು ಹೊರೆಯಾಗುವುದಿಲ್ಲ ಹಾಗೂ ತ್ಯಾಜ್ಯವನ್ನು ಆಯಾ ಗ್ರಾಮ ಪಂಚಾಯತಿಗಳಿಂದ ಸಂಗ್ರಹಿಸಿ ಬಹುಗ್ರಾಮ ಪಂಚಾಯತಿ ಘಟಕಕ್ಕೆ ನೀಡುವುದರಿಂದ ಆದಾಯವನ್ನು ಗಳಿಸಬಹುದು.**

ನೀಡಿದರು. ಅದಕ್ಕೆ ಉತ್ತಮ ಉದಾಹರಣೆ ಹುಲಿಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ 9 ಗ್ರಾಮ ಪಂಚಾಯತಿಗಳ ಬಹುಗ್ರಾಮ ಪಂಚಾಯತಿ ವಿಲೇವಾರಿ ಘಟಕ ಸಾಕ್ಷಿ ಎಂದರು. ಘನ ತ್ಯಾಜ್ಯ ನಿರ್ವಹಣೆ ಕುರಿತು ಮಾನ್ಯರು ಶಿಭಿರಾರ್ಥಿಗಳ ಅನಿಸಿಕೆ ಮತ್ತು ಸಲಹೆಗಳನ್ನು ನೀಡುವಂತೆ, ಅದರಲ್ಲಿ ಬಹುಪಾಲು ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮಾದರಿ ಘಟಕವಾದ ಹುಲಗಿ ಘಟಕದಂತೆ ನಮ್ಮ ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಬಹುಗ್ರಾಮ ಪಂಚಾಯತಿ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಾಣ ಮಾಡುವುದಾಗಿ ತಿಳಿಸಿದರು.

ಕೊಪ್ಪಳ ಜಿಲ್ಲೆಯ ಹೊನ್ನೂರ ಮಟ್ಟಿ ಹುಲಗಿ ಬಹುಗ್ರಾಮ ಪಂಚಾಯತಿ ಘನ ತ್ಯಾಜ್ಯ ವಿಲೇವಾರಿ ಘಟಕವನ್ನು ರಾಜ್ಯದಲ್ಲಿ ಮಾದರಿಯನ್ನಾಗಿ ಮಾಡಲಾಗುವುದು ಹಾಗೂ ಈ ಘಟಕಕ್ಕೆ ಬೇಕಾಗುವ ಎಲ್ಲಾ ರೀತಿ ಸಹಕಾರವನ್ನು ಸರ್ಕಾರದ ಕಡೆಯಿಂದ ಒದಗಿಸಲಾಗುವುದು ಎಂದರು.

ಘನ ತ್ಯಾಜ್ಯ ವಿಲೇವಾರಿ ಘಟಕದ ಗೌರಾವಾನ್ವಿತ ಅಧ್ಯಕ್ಷರಾದ ಶ್ರೀ ಜನಾರ್ಧನ ಹುಲಿಗಿ ಇವರು ಶಿಬಿರಾರ್ಥಿಗಳಿಗೆ ಘಟಕದಲ್ಲಿ ಅಳವಡಿಸಲಾದ ವಿವಿಧ ಯಂತ್ರೋಪಕರಣಗಳ ಕಾರ್ಯವೈಖರಿ ಮತ್ತು ಘಟಕ ನಿರ್ವಹಣೆ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ರಾಜ್ಯ ಕಛೇರಿಯಿಂದ ಹಾಗೂ ಜಿಲ್ಲಾ



ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಟ್ಟಡಗಳಿಗೆ ಸೋಲಾರ ಪ್ಲಾಟ್ ಅಳವಡಿಸಿಕೊಳ್ಳುವಂತೆ ಗ್ರಾಮ ಪಂಚಾಯತ ಅಧ್ಯಕ್ಷರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೋಲಾರ ಅಳವಡಿಕೆ ಬಗ್ಗೆ ಹೆಚ್ಚಿನ ಒತ್ತು ನೀಡುವುದು ಮತ್ತು ಸೋಲಾರ್‌ದಿಂದಾಗುವ ಪ್ರಯೋಜನೆಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು.

ಕಛೇರಿಯಿಂದ ಹಾಜರಾದ ಸಮಾಲೋಚಕರು ಘನ ತ್ಯಾಜ್ಯ ವಿಲೇವಾರಿಯ ಅನುಷ್ಠಾನದ ಕುರಿತು ಶಿಭಿರಾರ್ಥಿಗಳಿಗೆ ಪಿಪಿಟಿ ಮೂಲಕ ಮನವರಿಕೆ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯಿತಿ ಕೊಪ್ಪಳ ರವರು ಭಾಗವಹಿಸಿದ್ದರು.

ವರದಿ



ಡಾ|| ಜಿ.ಎಸ್.ಗಣೇಶ್ ಪ್ರಸಾದ್

ಬೋಧಕರು
(ಯೋಜನೆ ಮತ್ತು ಸಂಶೋಧಕರು)
ಅಬ್ದುಲ್ ನಜೀರ್ ಸಾಬ್
ಗ್ರಾಮೀಣಾಭಿವೃದ್ಧಿ ಸಂಸ್ಥೆ,
ಮೈಸೂರು

2018–19ನೇ ಸಾಲಿನಲ್ಲಿ ಸಂಸ್ಥೆಯು ಅತೀ ಹೆಚ್ಚಿನ ಶಿಬಿರಾರ್ಥಿಗಳಿಗೆ ತರಬೇತಿಯನ್ನು ನೀಡಿದ್ದು, ಇದಕ್ಕಾಗಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯಕ್ಕೆ ಪ್ರಥಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

# ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆಗೆ ರಾಷ್ಟ್ರೀಯ ಪ್ರಶಸ್ತಿ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ತರಬೇತಿಯ ಅಂಗ ಸಂಸ್ಥೆಯಾಗಿ 1989ರಿಂದ ಪ್ರಾರಂಭಗೊಂಡು, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ತರಬೇತಿ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಸಂಸ್ಥೆಯಲ್ಲಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿ/ ನೌಕರರುಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಸಾಮರ್ಥ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ತರಬೇತಿ ನೀಡುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.




ಕರ್ನಾಟಕ ಸರ್ಕಾರದ ಆದೇಶದನ್ವಯ ಸಂಸ್ಥೆಯನ್ನು ಮರು ನಾಮಕರಣ ಮಾಡಿ “ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ”ಯೆಂದು ದಿನಾಂಕ: 04.07.2016ರಂದು ನೊಂದಾಯಿಸಲಾಗಿದೆ.

2018–19ನೇ ಸಾಲಿನಲ್ಲಿ ಸಂಸ್ಥೆಯು ಅತೀ ಹೆಚ್ಚಿನ ಶಿಬಿರಾರ್ಥಿಗಳಿಗೆ ತರಬೇತಿಯನ್ನು ನೀಡಿದ್ದು, ಇದಕ್ಕಾಗಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯಕ್ಕೆ ಪ್ರಥಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ದಿನಾಂಕ:19–12–2019ರಂದು ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ, ಕೃಷಿ ಮತ್ತು ಪಂಚಾಯತ್ ರಾಜ್ ಸಚಿವರಾದ ಸನ್ಮಾನ್ಯ ಶ್ರೀ ನರೇಂದ್ರಸಿಂಗ್ ತೋಮಾರ್ ಇವರು ಸಂಸ್ಥೆಗೆ ಪ್ರಶಸ್ತಿಯನ್ನು ನೀಡಿರುತ್ತಾರೆ. ಸಂಸ್ಥೆಯ ನಿರ್ದೇಶಕರಾದ ಶ್ರೀ.ಪಿ.ಶಿವಶಂಕರ ಪ್ರಶಸ್ತಿಯನ್ನು ಸ್ವೀಕರಿಸಿದರು. ●

**ವರದಿ**



**ಹೆಚ್. ವೇಣುಗೋಪಾಲ್**

ಸಂಶೋಧನಾಧಿಕಾರಿ
ಕರ್ನಾಟಕ ರಾಜ್ಯ ವಿಕೇಂದ್ರೀಕರಣ
ಯೋಜನೆ ಮತ್ತು ಅಭಿವೃದ್ಧಿ ಸಮಿತಿ

# ಪಂಚಾಯತ್ ರಾಜ್ ಪರಿಷತ್ ಸಂಸ್ಥಾಪನಾ ದಿನಾಚರಣೆ

ಕರ್ನಾಟಕ ಪಂಚಾಯತ್ ರಾಜ್ ಪರಿಷತ್ ಅನ್ನು 1962 ಜುಲೈ 6ರಂದು ಅಂದಿನ ಪ್ರಧಾನಿ ಶ್ರೀ.ಜವಹರಲಾಲ್ ನೆಹರುರವರು ಶ್ರೀಮತಿ. ವಿಜಯಲಕ್ಷ್ಮಿ ಪಂಡಿತ್‌ರವರೊಡಗೂಡಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆದ 2ನೇ ಅಖಿಲ ಭಾರತ ಪಂಚಾಯತ್ ರಾಜ್ ಸಮಾವೇಶದಲ್ಲಿ ಉದ್ಘಾಟಿಸಿದರು. ಅಂದಿನಿಂದ ಇಂದಿನವರೆಗೂ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯ ಬೆಳವಣಿಗೆಯಲ್ಲಿ ತನ್ನ ಕೊಡುಗೆಯನ್ನು ನೀಡುತ್ತಲೇ ಬರುತ್ತಿದ್ದು, ದಿನಾಂಕ 22ನೇ ಡಿಸೆಂಬರ್ 2019 ರಂದು ಬೆಂಗಳೂರಿನ ಗಾಂಧಿ ಭವನದ ಶ್ರೀ ಮಹದೇವ ದೇಸಾಯಿ ಸಭಾಂಗಣದಲ್ಲಿ ಪಂಚಾಯತ್ ಪರಿಷತ್ ಸಂಸ್ಥಾಪನಾ ದಿನಾಚರಣೆಯು ಜರುಗಿತು.

ಕರ್ನಾಟಕ ಪಂಚಾಯತ್ ರಾಜ್ ಪರಿಷತ್ 57 ವಸಂತಗಳನ್ನು ಪೂರೈಸಿದ್ದು, ಶ್ರೀ ಕೆ.ಎಸ್.ಈಶ್ವರಪ್ಪ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಗೌರವ ಅಧ್ಯಕ್ಷರಾಗಿರುತ್ತಾರೆ. ಕರ್ನಾಟಕ ಪಂಚಾಯತ್ ರಾಜ್ ಪರಿಷತ್ ಸೈದ್ಧಾಂತಿಕ ಮತ್ತು ಚಾರಿತ್ರಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ನೋಡಿದಾಗ, ಗ್ರಾಮೀಣಾಭಿವೃದ್ಧಿಯನ್ನು ಸಾಧಿಸುವ ದಿಕ್ಕಿನಲ್ಲಿ ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಯನ್ನು ತರುವುದರಲ್ಲಿ ಹಾಗೂ ಅಭಿವೃದ್ಧಿಯ ಫಲಗಳನ್ನು ವಿತರಿಸುವಿಕೆಯ ಮೂಲಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವ ನೈಜ ಪ್ರಜಾಪ್ರಭುತ್ವ ಸಂಸ್ಥೆಗಳಾಗಿ ಸಾಗುತ್ತಾ ಬರುತ್ತಿದೆ.



ಸಂಸ್ಥಾಪನಾ ದಿನಾಚರಣೆಯ ಸ್ವಾಗತ ಭಾಷಣ ವನ್ನು ಶ್ರೀ.ಸಿ.ನಾರಾಯಣಸ್ವಾಮಿ, ಕಾರ್ಯಾಧ್ಯಕ್ಷರು, ಕರ್ನಾಟಕ ಪಂಚಾಯತ್‌ರಾಜ್ ಪರಿಷತ್‌ರವರು ಸಂಕ್ಷಿಪ್ತವಾಗಿ ಪರಿಷತ್‌ನ ಉದ್ದೇಶಗಳು ಮತ್ತು ಕಾರ್ಯಗಳನ್ನು ವಿವರಿಸಿ ವೇದಿಕೆಯ ಮೇಲೆ ಆಸೀನರಾಗಿದ್ದ ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿರುವ ಗಣ್ಯರಲ್ಲಿ ಮುಖ್ಯ ಅತಿಥಿಗಳಾದ ಶ್ರೀ.ಮಣಿಶಂಕರ್ ಅಯ್ಯರ್, ಮಾಜಿ ಪಂಚಾಯತ್ ರಾಜ್ ಸಚಿವರು, ಭಾರತ ಸರ್ಕಾರ ಇವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಹಾಗೆಯೆ ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ.ಕೆ.ಆರ್.ರಮೇಶ್ ಕುಮಾರ್, ಮಾಜಿ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಹಾಗೂ ಹಾಲಿ ಶಾಸಕರವರನ್ನು ಸ್ವಾಗತಿಸಿದರು. ಸರ್ಕಾರದ ಪರವಾಗಿ ವಿಶೇಷ ಆಹ್ವಾನಿತರಾದ ಶ್ರೀ.ಎಲ್.ಕೆ.ಅತೀಕ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರನ್ನು ಸ್ವಾಗತಿಸಿದರು. ವಿಚಾರಗೋಷ್ಠಿಗೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ.ಟಿ.ಆರ್.ರಘುನಂದನ್ (ನಿವೃತ್ತ), ಜಂಟಿ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ ಹಾಗೂ ನಿರ್ದೇಶಕರು ಆವಂತಿಕ ಫೌಂಡೇಶನ್ ಹಾಗೂ ಡಾ॥ ಎಸ್.ಎಸ್.ಮೀನಾಕ್ಷಿ ಸುಂದರಂ (ನಿವೃತ್ತ), ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು. ವಿಶೇಷವಾಗಿ ಸಭೆಗೆ ಆಗಮಿಸಿದ ಶ್ರೀಮತಿ ಸುನಂದ ಜಯರಾಮ್, ರೈತ ಸಂಘ ರವರನ್ನು ಹೃದಯಪೂರ್ವಕವಾಗಿ ಸ್ವಾಗತಿಸಿದರು. ಸಮಾರಂಭ ಮತ್ತು ಪೂರ್ವಾಹ್ನ ಜರುಗಿದ ವಿಚಾರಗೋಷ್ಠಿಗೆ ಸರ್ಕಾರದ ಪರವಾಗಿ ಉಪಸ್ಥಿತರಿದ್ದ ಶ್ರೀ ಎಸ್.ವಿ.ಅಶ್ರಫುಲ್ ಹಸನ್, ನಿರ್ದೇಶಕರು (ಪಂಚಾಯತ್ ರಾಜ್-1) ಹಾಗೂ ಶ್ರೀ.ಪಿ.ಶಿವಶಂಕರ್, ನಿರ್ದೇಶಕರು (ಪಂಚಾಯತ್ ರಾಜ್-2), ಶ್ರೀ.ಕೆ.ಯಾಲಕ್ಕಿಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮಂಡ್ಯ ಜಿಲ್ಲೆ ಮತ್ತು ಶ್ರೀ.ಎಂ.ಕೆ.ಕೆಂಪೇಗೌಡ, ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರುಗಳನ್ನು ಸಮಾರಂಭಕ್ಕೆ ಸ್ವಾಗತಿಸಿದರು. ಕರ್ನಾಟಕ ಪಂಚಾಯತ್ ರಾಜ್ ಪರಿಷತ್‌ನ ಪ್ರಧಾನ ಕಾರ್ಯದರ್ಶಿಯಾದ ಶ್ರೀ.ಎಲ್.ಗೋಪಾಲಕೃಷ್ಣಗೌಡ, ಕೋಶಾಧಿಕಾರಿಯಾದ ಡಾ॥ ಸಿ.ಕೆ. ಚಿಕ್ಕಕೊಮಾರಿಗೌಡ ಮತ್ತು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀ.ವಿ.ವೈ.ಘೋರ್ಪಡೆ ಹಾಗೂ ಸಮಾರಂಭದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳು, ಪತ್ರಿಕೋದ್ಯಮ ಮಿತ್ರರನ್ನು ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿ ಆಸಕ್ತಿಯುಳ್ಳ ಮಹನೀಯರುಗಳನ್ನು ಸಮಾರಂಭಕ್ಕೆ ಆತ್ಮೀಯವಾಗಿ ಸ್ವಾಗತಿಸಿದರು.

ಮುಖ್ಯ ಅತಿಥಿಗಳಾದ ಶ್ರೀ.ಮಣಿಶಂಕರ್ ಅಯ್ಯರ್‌ರವರು, ಭಾರತ ದೇಶದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ನಡೆದುಬಂದ ಹಾದಿಯನ್ನು ನೆನಪು ಮಾಡಿಕೊಡುತ್ತಾ ಅದರಲ್ಲೂ ವಿಶೇಷವಾಗಿ ಕರ್ನಾಟಕ ರಾಜ್ಯವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನ ಗೊಳಿಸುವುದರಲ್ಲಿ ಮಂಚೂಣಿಯಲ್ಲಿದ್ದು, ನೂತನವಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ತಿದ್ದುಪಡಿಯನ್ನು ಮಾಡಿದ್ದು ಅದರಲ್ಲಿ ಅನುಷ್ಠಾನಗೊಳಿಸಬಹುದಾದ ಅಂಶಗಳನ್ನು ಸ್ವಾಗತಿಸಿ ಇದು ಇಡೀ ರಾಷ್ಟ್ರದಲ್ಲೇ ಮೈಲುಗಲ್ಲಾಗಿದ್ದು ಹಾಗೂ ಇವುಗಳು ಇತರೆ ರಾಜ್ಯಗಳಿಗೆ ಮಾದರಿಯಾಗಬಹುದಾಗಿದೆ. ಮಾನ್ಯ ಶ್ರೀ.ರಮೇಶ್ ಕುಮಾರ್ ಸಮಿತಿಯ ಶಿಫಾರಸ್ಸುಗಳಲ್ಲಿ ಬಹಳ ಮುಖ್ಯವಾಗಿ ಮೂರು ಶಿಫಾರಸ್ಸುಗಳು ಪಂಚಾಯತಿಗಳ ಅಭಿವೃದ್ಧಿಗೆ ಕ್ರಾಂತಿಕಾರಕ ಬದಲಾವಣೆಯಾಗಿದ್ದು ಪ್ರಮುಖವಾಗಿ ಶಿಫಾರಸ್ಸುಗಳಲ್ಲಿ, ಒಂದು ಪಂಚಾಯತ್ ರಾಜ್ ಆಡಳಿತಾತ್ಮಕ ಸೇವೆಗಳು, ಎರಡನೆಯದು ಜನರಿಗಾಗಿ ದೂರು ನಿರ್ವಹಣಾ ಪ್ರಾಧಿಕಾರ ಸ್ಥಾಪನೆ ಹಾಗೂ ಮೂರನೆಯದು ಚಟುವಟಿಕೆಗಳ ನಕ್ಷೆಗೆ ಬದಲಾಗಿ ಜವಾಬ್ದಾರಿ ನಕ್ಷೆಗಳನ್ನು ರೂಪಿಸಿ ಶಿಫಾರಸ್ಸು ಮಾಡಿರುವುದು ಇವುಗಳು ಕರ್ನಾಟಕ ಪಂಚಾಯತ್ ರಾಜ್ ದಿಕ್ಕನ್ನೆ ಬದಲಾಯಿಸಲಿದೆ. ಇದನ್ನು ಪ್ರಸ್ತುತ ಸರ್ಕಾರ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದಲ್ಲಿ ರಾಷ್ಟ್ರದಲ್ಲೇ ಕರ್ನಾಟಕವು ಮಾದರಿ ರಾಜ್ಯವಾಗಿರುತ್ತದೆ. ಇದಲ್ಲದೇ, ಪಂಚಾಯಿತಿಗಳು ಸ್ವಾವಲಂಬಿಗಳಾಗಬೇಕು. ಅವು ಸರ್ಕಾರದ ಅನುದಾನಗಳನ್ನು ನಂಬಿಕೊಳ್ಳಬಾರದು. ಸರ್ಕಾರವು ಸ್ವಯಂ ಆದಾಯ ಸೃಷ್ಟಿಸಿಕೊಳ್ಳುವಂತಹ

ಯೋಜನೆಗಳನ್ನು ರೂಪಿಸುವುದು ಇಂದಿನ ಅತ್ಯಗತ್ಯವಾಗಿದೆ.

ಸ್ವಯಂ ಆಡಳಿತ ಹಾಗೂ ಸ್ವಯಂ ಸರ್ಕಾರದ ವ್ಯತ್ಯಾಸವನ್ನು ಸಂವಿಧಾನ 243ಜಿ ರನ್ವಯ ರಾಜಕೀಯ ಪ್ರತಿನಿಧಿಗಳು ಮತ್ತು ಆಡಳಿತಾತ್ಮಕ ಅಧಿಕಾರಿ ವರ್ಗದವರು ಗುರುತಿಸಬೇಕು. ಸ್ವಯಂ ಪಂಚಾಯತಿಗಳು ಸರ್ಕಾರಕ್ಕೆ ಕೆಲಸ ಮಾಡಬೇಕಾಗಿದೆಯೇ ಹೊರತು ಸ್ವಯಂ ಆಡಳಿತವಲ್ಲ ಎಂದರು. ಈ ಕಾರಣಕ್ಕಾಗಿಯೇ ಮಹಾತ್ಮ ಗಾಂಧೀಜಿರವರು ಗ್ರಾಮ ಸ್ವರಾಜ್ ಎಂದು ಕರೆದು ಅದರ ಉದ್ದೇಶವೇ ಸ್ವಯಂ ಸರ್ಕಾರದ ಸ್ಥಾಪನೆ ಮಾಡುವುದಾಗಿತ್ತು. ಆದುದರಿಂದ, ಕರ್ನಾಟಕ ಸರ್ಕಾರವು ಹೆಚ್ಚಿನ ಹಣಕಾಸಿನ ವರ್ಗಾವಣೆ ಮಾಡಿ ಸ್ಥಳೀಯ ಸರ್ಕಾರಗಳನ್ನು ಬಲವೃದ್ಧಿಗೊಳಿಸಬೇಕೆಂದರು.

ಶ್ರೀ.ರಮೇಶ್‌ಕುಮಾರ್‌ರವರು ಮಾತನಾಡಿ, ರಾಜಕೀಯ ಪಕ್ಷಗಳಲ್ಲಿಯೇ ಆಂತರಿಕ ಪ್ರಜಾಪ್ರಭುತ್ವ ಇಲ್ಲದಿರುವುದರಿಂದ ಪಂಚಾಯತ್ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣವನ್ನು –29 ವಿಷಯಗಳಿಗೆ ಸಂಬಂಧಿಸಿದಂತೆ ಅನುಷ್ಠಾನ ಇಲಾಖೆಗಳಿಗೆ ಸುತ್ತೋಲೆಗಳನ್ನು ಹೊರಡಿಸಿಯೇ ಗಟ್ಟಿಗೊಳಿಸಬೇಕಾಗಿದೆ. ಹಾಗೆಯೆ, ಪಂಚಾಯತಿಯ ಚುನಾಯಿತ ಪ್ರತಿನಿಧಿಗಳಿಗೆ ತಮ್ಮ ಜವಾಬ್ದಾರಿಗಳ ಬಗ್ಗೆ ತಿಳಿದಿಲ್ಲದಿರುವುದರಿಂದ ಅವರುಗಳು ಅಧಿಕಾರದ ವ್ಯಾಮೋಹಕ್ಕೆ ಸೀಮಿತಗೊಂಡಿರುತ್ತಾರೆ. ಉದಾಹರಣೆಗೆ ಚುನಾವಣೆ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಚುನಾವಣಾ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲು ಪ್ರಯತ್ನಗೊಳಿಸಿದಷ್ಟು ಹಿನ್ನೆಡೆಯಾಗುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಸಂಬಂಧಿಗಳನ್ನೇ ಚುನಾವಣೆಗೆ ಸ್ಪರ್ಧಿಯಾಗಿ ನಿಲ್ಲಿಸಲು ಪ್ರಯತ್ನಿಸಿರುವುದರಿಂದ ಪಂಚಾಯತಿ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಬಂಧಿಗಳೇ ಸ್ಪರ್ಧಿಗಳಾಗಿರುತ್ತಾರೆ ಹಾಗೂ ಚುನಾಯಿತರಾಗಿ ಕುಟುಂಬ ರಾಜಕೀಯದಲ್ಲಿ ಮುಳುಗಿರುತ್ತಾರೆ. ಇಂತಹ ರಾಜಕೀಯದಿಂದ ಏನಾದರೂ ಬದಲಾವಣೆ ತರಲು ಸಾಧ್ಯವೇ ಎಂದು ಸಮಾರಂಭದಲ್ಲಿ ಪ್ರಶ್ನಿಸಿದರು.

ಅಧ್ಯಕ್ಷ / ಉಪಾಧ್ಯಕ್ಷರ ಮೀಸಲಾತಿ ಪ್ರಕಟಣೆ ಪಂಚಾಯತ್ ಚುನಾವಣೆ ಪೂರ್ವವೇ ಪ್ರಕಟಿಸಿದಲ್ಲಿ ಆಯಾ ಮೀಸಲಾತಿ ವರ್ಗಗಳಲ್ಲಿರುವ ವಿದ್ಯಾವಂತರು ಅಥವಾ ಅನುಭವಸ್ಥರು ಆಯ್ಕೆಯಾಗುವ ಅವಕಾಶ ಹೇರಳವಾಗಿರುತ್ತದೆ. ಆದರೆ, ಪ್ರಸ್ತುತ ವಿದ್ಯಮಾನದಲ್ಲಿ ಚುನಾವಣೆ ನಂತರ ಪ್ರಕಟಣೆಯಾಗುವುದರಿಂದ ಮೀಸಲಾತಿ ಹೆಚ್ಚು ಕಡಿಮೆ ಬದಲಿ / ನಕಲು ಪ್ರತಿನಿಧಿಗಳು ಆಯ್ಕೆಯಾಗುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ.

ಶ್ರೀ.ಮೀನಾಕ್ಷಿ ಸುಂದರಂರವರು ಮಾತನಾಡಿ, 1950ರ ಸಂವಿಧಾನ ಜಾರಿಗೊಳಿಸಿದಾಗ ಗ್ರಾಮ ಪಂಚಾಯತಿ ವ್ಯವಸ್ಥೆ ರೂಪಿಸುವುದು ಬೇಡವೆಂದು ಆಗ ಚರ್ಚೆಗೆ ಒಳಪಟ್ಟಿತ್ತು. ಇದಕ್ಕೆ ಕಾರಣ, ಹಿಂದಿನ ಜಮೀನ್ದಾರಿ ಪದ್ಧತಿಗಳೇ ಪಂಚಾಯತಿ ಮೂಲಕ ಮತ್ತೆ ಅನುಷ್ಠಾನವಾಗುತ್ತದೆ ಎನ್ನುವ ಭಯವಿದ್ದುದರಿಂದ, ಸ್ವಾತಂತ್ರ್ಯ ಬಂದು 40 ವರ್ಷಗಳ ನಂತರ 1992ರಲ್ಲಿ ಸಂವಿಧಾನಬದ್ಧವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಅಂದಿನ ಪ್ರಧಾನಿಯಾದ ಶ್ರೀ.ನರಸಿಂಹರಾವ್‌ರವರು ಕೇಂದ್ರೀಕರಣ ವ್ಯವಸ್ಥೆಯಿಂದ ವಿಕೇಂದ್ರೀಕರಣ ವ್ಯವಸ್ಥೆಗೆ ತರಲು ಕಾರಣೀಭೂತರಾದರು. ಇದು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವ್ಯತ್ಯಾಸಗಳಿಲ್ಲದಿರಬಹುದು ಅಥವಾ ವ್ಯತ್ಯಾಸಗಳಿರುತ್ತದೆ. ಆದರೆ, ಕೆಲವು ರಾಜ್ಯಗಳಾದರೂ ಒಳ್ಳೆಯ ವಿಕೇಂದ್ರೀಕರಣ ಆಡಳಿತ ವ್ಯವಸ್ಥೆಯನ್ನು ಬಲಿಷ್ಠಗೊಳಿಸಲಾಗುತ್ತದೆ ಎಂಬ ನಂಬಿಕೆಯಿಂದ ಕಾಯ್ದೆಯನ್ನು ರೂಪಿಸಲಾಯಿತು. ಅಂತಹ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದಾಗಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯು ಅತ್ಯಂತ ಬಲಿಷ್ಠವಾಗಿದೆ. ಇದರಿಂದ, ಕರ್ನಾಟಕ ರಾಜ್ಯದಲ್ಲಿ ಕೆಲವೊಂದು ಜಿಲ್ಲೆಗಳು ವೇಗವಾಗಿ ಅಭಿವೃದ್ಧಿಯಾಗಿದ್ದು, ಕೆಲವೊಂದು ಜಿಲ್ಲೆಗಳು ಅಭಿವೃದ್ಧಿ ಆಗುತ್ತಿದ್ದು, ಕೆಲವೊಂದು ಜಿಲ್ಲೆಗಳು ಹಿಂದುಳಿದಿದ್ದು ಅವುಗಳೂ ಕೂಡ ಬದಲಾವಣೆಗಳಾಗುತ್ತಿದ್ದು, ಪಂಚಾಯತ್ ಅಭಿವೃದ್ಧಿಯು ನಿರಂತರವಾಗಿ ಬದಲಾವಣೆಯನ್ನು ತರುತ್ತಲೇ ಇರುತ್ತವೆ. ಇದು ನಿರಂತರ ಪ್ರಕ್ರಿಯೆಯಾಗಿದೆ. ಮುಂದಿನ ದಿನಗಳಲ್ಲಿ ಪಂಚಾಯತ್ ವ್ಯವಸ್ಥೆಯು ಹೆಚ್ಚು ಬಲಿಷ್ಠವಾಗಲಿದ್ದು, ಚಿಂತಿಸಬೇಕಾದ ಅವಶ್ಯವಿಲ್ಲವೆಂದರು.

ಶ್ರೀಮತಿ.ಸುನಂದ ಜಯರಾಂರವರು ಮಾತನಾಡಿ, ಶೇ.50ರಷ್ಟು ಮಹಿಳಾ ಪ್ರತಿನಿಧಿಗಳಿದ್ದು, ಯಾವುದೇ ಪ್ರಮುಖ ಕಾರ್ಯಕ್ರಮಗಳಲ್ಲೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಬೇಕು. ಇದಲ್ಲದೇ, ಆಯೋಜಕರು ಕೂಡ ಶೇ.50ಕ್ಕಿಂತ ಕಡಿಮೆ ಇಲ್ಲದಷ್ಟು ಮಹಿಳೆಯರನ್ನು ಆಹ್ವಾನಿಸಬೇಕು ಹಾಗೂ ಅವರುಗಳು ವೇದಿಕೆಯ ಮೇಲೆ ಸಕ್ರಿಯವಾಗಿ

ಭಾಗವಹಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಶ್ರೀ.ಎಲ್.ಕೆ.ಅತೀಕ್ ರವರು ಮಾತನಾಡಿ ವೇದಿಕೆ ಮೇಲೆ ಇರುವ ಎಲ್ಲಾ ಗಣ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸಿ, ಶ್ರೀ.ಮಣಿಶಂಕರ್ ಅಯ್ಯರ್, ಶ್ರೀ.ರಮೇಶ್‌ಕುಮಾರ್ ಕೊರತೆಯಾಗಿದೆ ಎಂದರೆ ಅದು ಅತಿಶಯೋಕ್ತಿಯಲ್ಲ. ಕರ್ನಾಟಕದಲ್ಲಿ ಶ್ರೀ.ರಮೇಶ್‌ಕುಮಾರ್ ಸಮಿತಿ ಶಿಫಾರಸ್ಸಿನನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 2015 ರಲ್ಲಿ 88 ತಿದ್ದುಪಡಿಗಳನ್ನು ತರಲಾಗಿದೆ. ಅವುಗಳಲ್ಲಿ ಕೆಲವು ತುಂಬ ಪರಿಣಾಮಕಾರಿಯಾಗಿ ಜಾರಿಯಾಗಿದ್ದು ಇನ್ನೂ ಕೆಲವು ಅಷ್ಟೊಂದು ಪರಿಣಾಮಕಾರಿಯಾಗಿ ಜಾರಿಯಾಗಿಲ್ಲದಿರಬಹುದು. ಆದರೆ, ರಾಜ್ಯದಲ್ಲಿ




ಮತ್ತು ಶ್ರೀ.ಮೀನಾಕ್ಷಿ ಸುಂದರಂರವರುಗಳು ವೇದಿಕೆ ಮೇಲೆ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ನನ್ನ ಸಹಮತಿ ಇದೆ. ಇಂದಿನ ಕಾರ್ಯಕ್ರಮದಲ್ಲಿ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಬಹಳ ವಿಸ್ತಾರವಾಗಿ ಚರ್ಚಿಸಲಾಗುತ್ತಿದೆ. ಕರ್ನಾಟಕವು ವಿಕೇಂದ್ರೀಕರಣ ಆಡಳಿತದಲ್ಲಿ ಅತ್ಯಂತ ಮುಂದುವರಿದ ರಾಜ್ಯವೇ ಆಗಿದೆ. ಶ್ರೀ.ಮೀನಾಕ್ಷಿ ಸುಂದರಂರವರು ಹೇಳಿದಂತೆ ನಾನು ಕೂಡ ವಿಕೇಂದ್ರೀಕರಣ ವ್ಯವಸ್ಥೆ ಜಾರಿಯಲ್ಲಿರುವ ತೊಡಕುಗಳನ್ನು ನಿವಾರಿಸುವಲ್ಲಿ ಆಶಾದಾಯಕ ಚಿತ್ರಣವನ್ನು ಮಂಡಿಸಲಿದ್ದೇನೆ. ಮೊದಲಿಗೆ ಭಾರತದ ವಿಕೇಂದ್ರೀಕರಣ ವ್ಯವಸ್ಥೆಯು ಮೇಲಿನಿಂದ ಬಂದಿದ್ದಾಗಿದ್ದು, ಇದಕ್ಕೆ ರಾಜಕೀಯ ಇಚ್ಛಾಶಕ್ತಿಯ ವಿಕೇಂದ್ರೀಕರಣ ಪಂಚಾಯತ್ ರಾಜ್ ವ್ಯವಸ್ಥೆಯು ಬಲಿಷ್ಠವಾಗುತ್ತಿದ್ದು ಶೇ.50ರಷ್ಟು ಮಹಿಳೆಯರಿಗೆ ಮೀಸಲಾತಿಯನ್ನು ನೀಡಲಾಗಿದೆ. ಅದು ಬರೀ ಸದಸ್ಯರುಗಳಿಗೆ ಮಾತ್ರವಲ್ಲದೇ ಪದಾಧಿಕಾರಿಗಳಿಗೂ ಮೀಸಲಾತಿ ಕಲ್ಪಿಸಲಾಗಿದೆ. ಇದರ ಜೊತೆಗೆ ಸದಸ್ಯರುಗಳ ಮೀಸಲು ಕ್ಷೇತ್ರವನ್ನು 10 ವರ್ಷ ಅವಧಿಗೆ ನೀಡಲಾಗಿದ್ದು, ಚುನಾಯಿತ ಸದಸ್ಯರುಗಳು ತಾವು ಮಾಡಿದ ಸಾಧನೆಗಾಗಿ ಮುಂದಿನ ಸಾಲಿನಲ್ಲೂ ಕೂಡ ಉತ್ತೇಜಕವಾಗಿ ಎರಡನೇ ಅವಧಿಗೂ ತನ್ನ ಮೀಸಲು ವರ್ಗದಲ್ಲಿಯೇ ಸ್ಪರ್ಧೆ ಮಾಡಬಹುದಾಗಿದೆ. ಇದಲ್ಲದೆ ಕನಿಷ್ಠ 30 ತಿಂಗಳು ಪಂಚಾಯತಿ ಅಧ್ಯಕ್ಷರುಗಳ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ.

ರಾಜ್ಯದಲ್ಲಿ ಪಂಚಾಯತಿಗಳ ಕಾರ್ಯಕಾರಿ ವ್ಯವಸ್ಥೆಯನ್ನು ಅತ್ಯಂತ ಬಲಿಷ್ಠಪಡಿಸಲಾಗಿದ್ದು, ಈ ವ್ಯವಸ್ಥೆ ಯಾವ ರಾಜ್ಯದಲ್ಲೂ ಇರುವುದಿಲ್ಲ ಎಂದು ಭಾವಿಸಿದ್ದೇನೆ. ನಮ್ಮಲ್ಲಿ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಲೆಕ್ಕ ಸಹಾಯಕರು ಒಳಗೊಂಡಂತೆ ಬಿಲ್ ಕಲೆಕ್ಟರ್, ಡಾಟಾ ಎಂಟ್ರಿ ಆಪರೇಟರ್, ಪಂಪ್ ಆಪರೇಟರ್, ಜವಾನ ಮತ್ತು ಸ್ವಚ್ಛತಾಗಾರ ವೃಂದವನ್ನು ನೇಮಕ ಮಾಡಿ ಕನಿಷ್ಠ 10 ರಿಂದ 12 ನೌಕರರು ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುವಂತೆ ಸಿಬ್ಬಂದಿ ವ್ಯವಸ್ಥೆಯನ್ನು ಬಲಿಷ್ಠಗೊಳಿಸಲಾಗಿದೆ. ಅನುಸೂಚಿ I, II & IIIರಲ್ಲಿ 29 ವಿಷಯಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಕಾರ್ಯಚಟುವಟಿಕೆಗಳನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿ ಚಟುವಟಿಕೆ ನಕ್ಷೆಗಳನ್ನು ತಂದಿದ್ದರೂ ಸಹ ಹೆಚ್ಚು ಪರಿಣಾಮಕಾರಿಯಾಗಿಲ್ಲದಿರುವುದು ಸ್ವಲ್ಪ ಹಿನ್ನಡೆಯಾಗಿದೆ. ಆದರೂ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿಯೇ ಅಂಗನವಾಡಿಗಳು, ಶಾಲೆಗಳು, ಪ್ರಾಥಮಿಕ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಹೊಸ ಕಾಯ್ದೆಯ ತಿದ್ದುಪಡಿಯನ್ವಯ ಜವಾಬ್ದಾರಿ ನಕ್ಷೆಯನ್ನು ಶೀಘ್ರದಲ್ಲೇ ಜಾರಿಗೊಳಿಸಲಾಗುವುದು. ಯೂರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಕೂಡ ಸಿಟಿ ಗೌರ್ನಮೆಂಟ್ ಅಂತಹ ರಚನೆ ಮಾಡಿಕೊಂಡು ಆಯಾ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಮಗಾರಿಗಳನ್ನು ಹಾಗೂ ಕೆಲಸಕಾರ್ಯಗಳನ್ನು ಸ್ವತ: ಅವರೇ ಮಾಡಿಕೊಳ್ಳುತ್ತಾರೆ.

ಇನ್ನು ಹಣಕಾಸಿನ ವಿಷಯದಲ್ಲಿ ಹೇಳಬೇಕೆಂದರೆ, ಪ್ರತಿ ಗ್ರಾಮ ಪಂಚಾಯತಿಯಲ್ಲಿ ಸರಾಸರಿ ರೂ.1.00 ಕೋಟಿ ಗಳಷ್ಟು ವೆಚ್ಚ ಮಾಡಲಾಗುತ್ತಿದ್ದು, ಅವುಗಳಲ್ಲಿ ಕೆಲವೊಂದು ಗ್ರಾಮ ಪಂಚಾಯಿತಿಗಳು ಕನಿಷ್ಠ ರೂ.30.00ಲಕ್ಷಗಳಿದ್ದು, ಇನ್ನೂ ಕೆಲವು ಗ್ರಾಮ ಪಂಚಾಯತಿಗಳು ರೂ.1 ಕೋಟಿ ಅಧಿಕ ಹಣ ಖರ್ಚು ಮಾಡಲಾಗುತ್ತಿದ್ದು, ಇದರಿಂದ ಗ್ರಾಮ ಪಂಚಾಯತಿಗಳ ಮೂಲ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಶೌಚಾಲಯ, ಬೀದಿ ದೀಪ ಇತ್ಯಾದಿ ಕೆಲಸಗಳು ಕಾರ್ಯನಿರ್ವಹಿಸಲು ಸುಗಮವಾಗಿದೆ. ಮೂಲ ಸೌಕರ್ಯಗಳನ್ನು ಗ್ರಾಮ ಪಂಚಾಯತಿಗಳೇ ನಿರ್ವಹಿಸಬೇಕಾಗಿದ್ದು, ಅವುಗಳಿಗೆ ಕಾಯ್ದೆಯನ್ವಯ ಹೆಚ್ಚಿನ ಸ್ವತಂತ್ರವಿದೆ. ಗ್ರಾಮ ಪಂಚಾಯತಿಗಳಿಗೆ ಸಂಪನ್ಮೂಲ ಗುಚ್ಛ ಮಾಹಿತಿಯ ಲಿಂಕ್ ಡಾಕ್ಯುಮೆಂಟ್ ತಯಾರಿಕೆ ಬೇಡಿಕೆ ಬಂದಿದ್ದು ಸತತವಾಗಿ ಶ್ರೀ.ಡಿ.ಆರ್.ಪಾಟೀಲ್ ಹಾಗೂ ಶ್ರೀ.ವಿ.ವೈ.ಘೋರ್ಪಡೆರವರಿಂದ ಇದಕ್ಕೆ ಆರ್ಥಿಕ ಇಲಾಖೆಯು ಕಷ್ಟಸಾಧ್ಯ ಎಂದು ತಮ್ಮ ಅಭಿಪ್ರಾಯ ತಿಳಿಸಿದ್ದರೂ ಸಹ ಅದನ್ನು ನಾವು ಜಾರಿಗೆ ತಂದದ್ದು ವೈಯಕ್ತಿಕವಾಗಿ ನನಗೆ ಬಹಳ ಸಂತೋಷವಾಗಿದೆ. ಇದರಿಂದ ಪ್ರಮುಖವಾಗಿ 6 ವಿವಿಧ ಯೋಜನೆಗಳ ಅನುದಾನಗಳ ಹಂಚಿಕೆ ಮಾಡಿದ ಮಾಹಿತಿಯನ್ನು ಎಲ್ಲಾ 6021 ಗ್ರಾಮ ಪಂಚಾಯಿತಿಗಳಿಗೆ ಲಿಂಕ್ ಡಾಕ್ಯುಮೆಂಟ್‌ನ ಕಿರುಹೊತ್ತಿಗೆಯ ಮೂಲಕ 2019–20ನೇ ಸಾಲಿನಲ್ಲಿ ಒದಗಿಸಲಾಗಿದೆ. ಇನ್ನು ವಿಶೇಷವಾಗಿ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಮಟ್ಟದಲ್ಲಿ ಕೆ.ಡಿ.ಪಿ. ಸಭೆಗಳ ಮೂಲಕ ಅಭಿವೃದ್ಧಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ. ಅದೇ ರೀತಿ ಗ್ರಾಮ ಪಂಚಾಯತಿ ಮಟ್ಟದಲ್ಲೂ ಕೆ.ಡಿ.ಪಿ. ಸಭೆ ಕರೆದು ವಿಸ್ತರಿಸಲಾಗಿದೆ. ಇದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಕಾರಿಯಾಗಲಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಸೇವೆಗಳನ್ನು ಒದಗಿಸಲಾಗುತ್ತಿದೆ. ಇದೆಲ್ಲದರ ಮೂಲಕ ಪಂಚಾಯತಿ ಅಭಿವೃದ್ಧಿಗಳ ಕಡೆಗೆ ಹೆಚ್ಚಿನ ಬದ್ಧತೆಯನ್ನು ಹೊಂದಿದ್ದೇವೆ.

ಸಾಮರ್ಥ್ಯಾಭಿವೃದ್ಧಿ, ತರಬೇತಿಯಂತಹ ವಿಷಯಗಳಲ್ಲಿ ಕ್ಲಿಷ್ಟಕರವಾದ ಸಮಸ್ಯೆಗಳಿದ್ದು, ಇದರ ಕಡೆ ಇನ್ನೂ ಹೆಚ್ಚಿನ ಗಮನ ಹರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗ್ರಾಮ ಪಂಚಾಯತಿಗಳು ಸ್ಥಳೀಯ ಆಡಳಿತವಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲಾಖೆಯ ಸುತ್ತೋಲೆಗಳನ್ವಯ ಕಾರ್ಯ ನಿರ್ವಹಿಸುತ್ತಿವೆ. ಅವುಗಳು ಪರಿಣಾಮಕಾರಿಯಾಗಿ ಸ್ಥಳೀಯ ಸರ್ಕಾರಗಳಾಗಿ ಕೆಲಸ ನಿರ್ವಹಿಸಲು ಇನ್ನೂ ಸ್ವಲ್ಪ ಕಾಲಾವಕಾಶದ ಅಗತ್ಯವಿದೆ.

ವಿಶೇಷವಾಗಿ ರಾಷ್ಟ್ರಮಟ್ಟದಲ್ಲಿ ಸತತವಾಗಿ ನಾಲ್ಕನೇ ಬಾರಿ ಇ–ಪಂಚಾಯತ್ ಪುರಸ್ಕಾರ ರಾಜ್ಯ ಸರ್ಕಾರವು ಗಳಿಸಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಶ್ರೀ.ಎಲ್.ಕೆ.ಅತೀಕ್‌ರವರನ್ನು ಸಂಸ್ಥಾಪನಾ ದಿನಾಚರಣೆ

ಎಂದು ಸನ್ಮಾನಿಸಲಾಯಿತು. ಹಾಗೆಯೇ, 2019–20ನೇ ಸಾಲಿನಲ್ಲಿ ಭಾರತ ಸರ್ಕಾರವು ಪಂಚಾಯತಿಗಳ ಸಾಧನೆಗಾಗಿ ನೀಡಲಾಗುವ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರಗಳನ್ನು ಪಡೆದ ದಾವಣಗೆರೆ ಜಿಲ್ಲಾ ಪಂಚಾಯತಿ, ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯಿತಿ, ಮಂಡ್ಯ ಜಿಲ್ಲೆ ಮತ್ತು ಮೂಡಿಗೆರೆ ತಾಲ್ಲೂಕು ಪಂಚಾಯಿತಿ, ಚಿಕ್ಕಮಗಳೂರು ಜಿಲ್ಲೆ ಹಾಗೂ ರಾಜಾನುಕುಂಟೆ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮನ್ನೆಬೆಟ್ಟು ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಗಳ ಅಧ್ಯಕ್ಷರುಗಳು ಮತ್ತು ಅಧಿಕಾರಿ ವರ್ಗದವರನ್ನೂ ಹಾಗೂ ನಾನಾಜಿ ದೇಶ್‌ಮುಖ್ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕೃತರಾದ ಕರೀಮುದ್ದನಹಳ್ಳಿ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಪುರಸ್ಕೃತರಾದ ರಾಜಾನುಕುಂಟೆ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ಪುರಸ್ಕಾರ ಗುರುಪುರ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಗಳ ಅಧ್ಯಕ್ಷರುಗಳು ಮತ್ತು ಅಧಿಕಾರಿ ವರ್ಗದವರನ್ನು ಸಂಸ್ಥಾಪನಾ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಶ್ರೀ.ಎಸ್.ವಿ.ಅಶ್ರಫುಲ್‌ಹಸನ್ ಇವರು ಮಾತನಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ.) ಸಭೆಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಎಲ್ಲಾ ಅನುಷ್ಠಾನ ಇಲಾಖೆಗಳ ಕಾರ್ಯಕ್ರಮಗಳನ್ನು ಒಳಗೊಂಡಂತೆ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಹಾಗೂ ಜನರಿಗೆ ತಲುಪಿಸಲು ತ್ರೈಮಾಸಿಕ ಪರಿಶೀಲನಾ ಸಭೆ ನಡೆಸಲು ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ. ಸದರಿ ಆದೇಶದನ್ವಯ ಬಡತನ ನಿರ್ಮೂಲನೆ, ಮಕ್ಕಳು ಮತ್ತು ಗರ್ಭಿಣಿಯರ ಆರೋಗ್ಯಕ್ಕಾಗಿ ಪೌಷ್ಠಿಕಾಂಶಗಳನ್ನು ಒದಗಿಸುವ ಕಾರ್ಯಕ್ರಮ, ಆರೋಗ್ಯ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳು, ಪಡಿತರ ಧಾನ್ಯಗಳ ಸಮರ್ಪಕ ವಿತರಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆ, ಪಶುಪಾಲನಾ ಚಿಕಿತ್ಸಾ ಕೇಂದ್ರಗಳ ನಿರ್ವಹಣೆ, ಗ್ರಾಮೀಣ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ನಿರ್ವಹಣೆ, ಕೃಷಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳ ಅನುಷ್ಠಾನ ಹಾಗೂ ಇಲಾಖೆಗಳು ಸಾಧಿಸುವ ಪ್ರಗತಿಯ ಪರಿಶೀಲನೆ ಮಾಡಿ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಅಭಿವೃದ್ಧಿಗೆ ಹೊಸ ಕಾಯಕಲ್ಪವನ್ನು ರೂಪಿಸುವ ನಿರೀಕ್ಷಣೆಯನ್ನು ಹೊಂದಿದ್ದೇವೆ.

ಶ್ರೀ.ಪಿ.ಶಿವಶಂಕರ್‌ರವರು ಮಾತನಾಡಿ, ಜಿಲ್ಲಾ ಮಟ್ಟದ ಯೋಜನೆಯನ್ನು ತಯಾರು ಮಾಡುವಲ್ಲಿ ಸವಾಲುಗಳನ್ನು ಎದುರಿಸುತ್ತಿದ್ದೇವೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳನ್ನು ಒಗ್ಗೂಡಿಸಿ ಜಿಲ್ಲಾ ಮಟ್ಟದ ಯೋಜನೆಗಳನ್ನು ತಯಾರು ಮಾಡಲು ಇವತ್ತಿಗೂ ಸಹ ಸಾಧ್ಯವಾಗುತ್ತಿಲ್ಲ. ವೇದಿಕೆಯ ಮೇಲೆ ಶ್ರೀ.ವಿ.ವೈ.ಘೋರ್ಪಡೆರವರು ಉಪಸ್ಥಿತರಿದ್ದಾರೆ. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಕೂಡ ನಾವು ಸ್ಪಷ್ಟವಾದ ಕಾರ್ಯವಿಧಾನಗಳನ್ನುರೂಪಿಸಲು ಸಾಧ್ಯವಾಗಿರುವುದಿಲ್ಲ. ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರು ಮಾಡಲು ಸಾಧ್ಯವಾಗಿರುವುದಿಲ್ಲ ಎನ್ನುವುದು ನನ್ನ ಅನಿಸಿಕೆಯಾಗಿದೆ. ಗ್ರಾಮ ಸಭೆಗಳಿಗೆ ಹೆಚ್ಚಿನ ಮಹತ್ವನ್ನು ನೀಡಲಾಗಿದ್ದು, ಗ್ರಾಮ ಸಭೆಗಳಲ್ಲಿ ವೈಯಕ್ತಿಕ ಫಲಾನುಭವಿಗಳನ್ನು ಗುರುತಿಸುವುದು, ಆಧ್ಯತೀಕರಣ ಮಾಡುವುದು ಮತ್ತು ಆಯ್ಕೆ ಮಾಡಬೇಕು ಮೂರು ಹಂತದಲ್ಲಿ ಕ್ರಮ ಕೈಗೊಳ್ಳಬೇಕೆಂದು ಕಾಯ್ದೆಯಲ್ಲಿಯೇ ಸ್ಪಷ್ಟಪಡಿಸಲಾಗಿದೆ. ಆದರೆ, ನೇರವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಗಮನ ಹರಿಸುತ್ತಾರೆ ಆದರೆ ಗುರುತಿಸುವುದು ಮತ್ತು ಆದ್ಯತೀಕರಣ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲೂ ಆದ್ಯತೀಕರಣಕ್ಕೆ ನಿರ್ಧಿಷ್ಟವಾಗಿ ಯಾವುದೇ ಸೂತ್ರವನ್ನು ರೂಪಿಸಲು ಇದುವರೆವಿಗೂ ಸಾಧ್ಯವಾಗಿರುವುದಿಲ್ಲ.

ಮೂರು ಹಂತದ ಪಂಚಾಯತಿಗಳಿಗೆ ಚಟುವಟಿಕೆ ನಕ್ಷೆಗಳು ಜಾರಿಗೆ ಬಂದಿದ್ದರೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೂ ಒಳಗೊಂಡಂತೆ ಎಲ್ಲಾ ಇಲಾಖೆಗಳು ಉಲ್ಲಂಘನೆ ಮಾಡಿವೆ ಹಾಗೂ ಪ್ರಸ್ತುತ ಎಲ್ಲವೂ ಕೂಡ ಇವತ್ತು ಕೇಂದ್ರೀಕರಣವಾಗುತ್ತಿರುವುದೇ ಕಾರಣವಾಗಿದೆ. ಜಿಲ್ಲಾಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆಯನ್ನು ಮಾಡುತ್ತಾರೆ. ಅದೇ ರೀತಿ ಸಮಾಜ ಕಲ್ಯಾಣ ಇಲಾಖೆಯ ಕಟ್ಟಡಗಳನ್ನು ಮತ್ತು ಹಾಸ್ಟೆಲ್‌ಗಳ ಸಾಮಗ್ರಿಗಳನ್ನೂ ಜಿಲ್ಲಾಧಿಕಾರಿಗಳೇ ಕ್ರಮ ಕೈಗೊಳ್ಳುತ್ತಾರೆ. ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿದ್ದರೂ ಸಹ ಶಾಲಾ ಕಟ್ಟಡಗಳು, ಅಂಗನವಾಡಿಗಳು ಅಥವಾ ಅಭಿವೃದ್ಧಿ ಕಾಮಗಾರಿಗಳು, ಆಯಾ ಇಲಾಖೆಗಳೇ ನಿರ್ಧಾರ ಕೈಗೊಳ್ಳುವುದರಿಂದ ಜಿಲ್ಲಾ ಪಂಚಾಯತಿ ಕಾರ್ಯವ್ಯಾಪ್ತಿಯನ್ನು ಕುಗ್ಗಿಸಿದಂತಾಗಿದೆ. ಕೆಲವೊಂದು ಪ್ರಮುಖ ಯೋಜನೆಗಳನ್ನು ಜಿಲ್ಲಾ ಪಂಚಾಯತಿಯಿಂದ ಹೊರಗಿಟ್ಟು ರಾಜ್ಯ ವಲಯದಿಂದ ಅನುಷ್ಠಾನ ಗೊಳಿಸುವುದರಿಂದ ವಿಕೇಂದ್ರೀಕರಣದ ಪ್ರಗತಿಗೆ ಮಾರಕವಾಗಿರುತ್ತದೆ. ಕೆ.ಡಿ.ಪಿ. ನಮೂನೆಗಳಲ್ಲಿ ರಾಜ್ಯವಲಯದ ಯೋಜನೆಗಳನ್ನು ಸೇರಿಸಿಲ್ಲವಾದು ದರಿಂದ ಸಮಗ್ರ ಯೋಜನೆಯನ್ನು ರೂಪಿಸುವುದು ಕಷ್ಟವಾಗಿದೆ ಹಾಗೂ ಗ್ರಾಮೀಣಾಭಿವೃದ್ಧಿಯ ಪ್ರಮುಖ ಕಾರ್ಯಕ್ರಮ ಬಡತನ ನಿರ್ಮೂಲನ ಕಾರ್ಯಕ್ರಮವಾಗಿದ್ದು, ಉದಾಹರಣೆಗೆ, ಸಂಜೀವಿನಿ ಯಂತಹ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ತಂದಿಲ್ಲದಿರುವುದರಿಂದ ಆಯಾ ಪ್ರದೇಶದಲ್ಲಿ ಬಡತನ ನಿರ್ಮೂಲನೆ ಮಾಡುವುದು ಕಷ್ಟಸಾಧ್ಯವಾಗಿದೆ. ನಾವು ನಮ್ಮ ಸ್ಥಾನದ ಮೇಲೆ ಕೇಂದ್ರೀಕರಿಸಿ ಕೆಲಸ ಮಾಡುವುದರಿಂದ ಗ್ರಾಮೀಣಾಭಿವೃದ್ಧಿ ಹಿಂದುಳಿಯಲು ಕಾರಣವಾಗಿದೆ ಹಾಗೂ ಜನರಿಂದ ಆಯ್ಕೆಯಾಗಿ ಬಂದ ಚುನಾಯಿತ ಪ್ರತಿನಿಧಿಗಳು ಜನರ ಮನಸ್ಸನ್ನು ಬದಲಾಯಿಸಬೇಕು ಹಾಗಾದಲ್ಲಿ ಮಾತ್ರ ಗ್ರಾಮೀಣಾಭಿವೃದ್ಧಿಯಾಗಲು ಸಾಧ್ಯವೆಂದರು.

ಶ್ರೀ.ಕೆ.ಯಾಲಕ್ಕಿಗೌಡರವರು ಸಭೆಯಲ್ಲಿ ಮಾತನಾಡುತ್ತಾ, ಸ್ಥಾಯಿ ಸಮಿತಿ ಮಾಡಿ ಎಲ್ಲೆಲ್ಲಿ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಂಡಿರುವರೋ ಅದು ನಮ್ಮ ರಾಜ್ಯದಲ್ಲಿಯಾಗಲೀ ಅಥವಾ ಇನ್ನಾವುದೇ ರಾಜ್ಯದಲ್ಲಿಯಾಗಲೀ ಅಲ್ಲಿನ ಯಶೋಗಾಥೆಗಳನ್ನು ಬಳಸಿಕೊಂಡು ಪಂಚಾಯತಿಗಳು ಕಾರ್ಯನಿರ್ವಹಿಸಬೇಕು. ಗ್ರಾಮ ಪಂಚಾಯತಿ ಕೆ.ಡಿ.ಪಿ.ಗೆ ಸಂಬಂಧಿಸಿದಂತೆ 53 ಪುಟಗಳ ನಮೂನೆಗಳನ್ನು ಇಲಾಖೆಯು ಕಳುಹಿಸಿಕೊಟ್ಟಿದ್ದು, ಸದರಿ ನಮೂನೆಗಳನ್ನು ಪಂಚಾಯತಿಗಳು ಗಮನವಿಟ್ಟು ಓದಿ ಅದರಂತೆ ಕಾರ್ಯನಿರ್ವಹಿಸಿದಲ್ಲಿ ಪಂಚಾಯತಿಗಳ ಸಾಮರ್ಥ್ಯವೃದ್ಧಿಯಾಗಲಿದೆ. ಈಗಾಗಲೇ ಮಂಡ್ಯ ಜಿಲ್ಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಕೆ.ಡಿ.ಪಿ. ಕುರಿತು ಸ್ಥಾಯಿಸಮಿತಿ ರಚನೆ ಮಾಡಿದ್ದಲ್ಲದೇ ಹಾಗೂ ತರಬೇತಿಯನ್ನು ನೀಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ.ಡಿ.ಪಿ. ಸಭೆಗಳು ಯಶಸ್ವಿಯಾಗಲು ಕಾರ್ಯಪ್ರವೃತ್ತರಾಗಿದ್ದೇವೆ. ಗ್ರಾಮ ಪಂಚಾಯತಿಯಿಂದ ತಾಲ್ಲೂಕು ಹಾಗೂ ತಾಲ್ಲೂಕು ಪಂಚಾಯತಿಯಿಂದ ಜಿಲ್ಲಾ ಪಂಚಾಯತಿಗೆ ಹಾಗೂ ಜಿಲ್ಲೆಯಿಂದ ರಾಜ್ಯಮಟ್ಟಕ್ಕೆ ಯೋಜನೆಗಳನ್ನು ರೂಪಿಸಲು ರಾಜ್ಯಮಟ್ಟದ ಸಮಿತಿ ಕಾರ್ಯರೂಪಿಸುತ್ತಿದೆ. ಇದಲ್ಲದೇ, ಗ್ರಾಮ ಪಂಚಾಯತಿಗಳಿಗೆ ಒದಗಿಸಿರುವ ಲಿಂಕ್ ಡಾಕ್ಯುಮೆಂಟ್ ನಮಗೆ ಹೆಚ್ಚು ಸಹಕಾರಿಯಾಗಿದೆ. ಇಂತಹ ವ್ಯವಸ್ಥೆ ಯಾವುದೇ ರಾಜ್ಯದಲ್ಲಿರುವುದಿಲ್ಲ. ಇದು ಪ್ರಮುಖ 6 ಯೋಜನೆಗಳ ಅನುದಾನದ ಮಾಹಿತಿಯನ್ನು ಒದಗಿಸುತ್ತದೆ. ಪಂಚಾಯತಿ ವ್ಯಾಪ್ತಿಯಲ್ಲಿ ದುಡ್ಡಿಲ್ಲದೇ ಮಾಡುವ ದೊಡ್ಡ ಕೆಲಸಗಳು ಮತ್ತು ರೂ.25,000/– ಒಳಗೆ ಮಾಡುವ ಕೆಲಸಗಳನ್ನು ಪರಿಣಾಮಕಾರಿಯಾಗಿ ಮಾಡಿದಲ್ಲಿ ಎಷ್ಟೋ ಗ್ರಾಮಗಳು ಸುಧಾರಣೆಯಾಗಲಿವೆ. ಪಂಚಾಯತ್ ಅಧಿನಿಯಮಕ್ಕೆ ತಿದ್ದುಪಡಿ ತರುವ ಮುನ್ನ 59 ಸಭೆ ಮತ್ತು 10 ಸಬ್ ಕಮಿಟಿ ಸಭೆಗಳನ್ನು ರಾಜ್ಯದಲ್ಲಿ ಮಾಡಲಾಗಿದ್ದು, ವೇದಿಕೆಯ ಮೇಲಿರುವ ಶ್ರೀ ವಿ.ವೈ.ಘೋರ್ಪಡೆರವರಿಗೆ ಅದರ ಕಷ್ಟಸಾಧ್ಯತೆಗಳ ಅರಿವಿದೆ. ಪಂಚಾಯತ್ ರಾಜ್ ಬಗ್ಗೆ ಕೆಲಸ ನಿರ್ವಹಿಸಬೇಕಾದರೆ ಸೇವಾ ಮನೋಭಾವ ಇರಬೇಕು. ಅವರ ಜವಾಬ್ದಾರಿ ಹಾಗೂ ದೃಢೀಕರಣಗಳ ಬಗ್ಗೆ ಅರಿವಿದ್ದು ಒಟ್ಟಾಗಿ ಹೋದಾಗ ಪಂಚಾಯತ್ ವ್ಯವಸ್ಥೆ ಅತ್ಯಂತ ಸುಧಾರಣೆಯಾಗಲಿದೆ.

ಶ್ರೀ.ಎಂ.ಕೆ.ಕೆಂಪೇಗೌಡರವರು ಸಭೆಯಲ್ಲಿ ಮಾತನಾಡುತ್ತಾ, ದೇಶದಲ್ಲಿ ಪ್ರಸ್ತುತ ಪಂಚಾಯತ್ ವಿಷಯಗಳ ಕುರಿತು ನಡೆದ ಚರ್ಚೆಯ ಇಂದಿನ ಫಲಶೃತಿಯೇನೆಂದರೆ, ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಅತ್ಯಂತ ಸಮರ್ಥವಾಗಿದೆ ಹಾಗೂ

ಸಂವಿಧಾನದ ಆಶಯಗಳಿಗೆ ಹತ್ತಿರವಾಗಿದೆ. ಶ್ರೀ.ಸಿ.ನಾರಾಯಣಸ್ವಾಮಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಪರಿಷತ್ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (ತಿದ್ದುಪಡಿ 2016) ಬಂದ ನಂತರ 2017–18ನೇ ಸಾಲಿನಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಬಗ್ಗೆ ಕುರಿತು ಅನೇಕ ಸಮಾವೇಶಗಳನ್ನು ಮಾಡಲಾಗಿದೆ ಹಾಗೂ ನನ್ನ ಹಿಂದಿನ ಅನುಭವದ ಆಧಾರದ ಮೇಲೆ ಹೇಳುವುದೇನೆಂದರೆ ಪಂಚಾಯತ್ ರಾಜ್ ವ್ಯವಸ್ಥೆ ಬಂದ ಮೇಲೆ ವಿಶೇಷ ಕೆಲಸಗಳಾಗಿದೆ. ಅದರಲ್ಲೂ ಬಹಳ ಮುಖ್ಯವಾಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 65,000 ಸಿಬ್ಬಂದಿಗಳು ಹಾಗೂ 15,000 ಸರ್ಕಾರಿ ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು ಇದರಿಂದ ಗ್ರಾಮ ಪಂಚಾಯತಿಗಳು ಬಲಿಷ್ಠವಾಗುತ್ತಿದೆ. ಗ್ರಾಮಗಳ ಬೇಡಿಕೆ ಹಾಗೂ ಜನರ ಆಶಯಗಳೇನು ಎಂದು ತಿಳಿದುಕೊಂಡು ಗ್ರಾಮ ಸಭೆಯಲ್ಲಿ ಚರ್ಚಿತವಾಗುವಂತೆ ಚುನಾಯಿತ ಪ್ರತಿನಿಧಿಗಳಿಗೆ ಸರಿಯಾದ ತಿಳುವಳಿಕೆ ಇರಬೇಕು. ಸ್ವಂತ ಹಿತಾಸಕ್ತಿಗಿಂತ ಸಮುದಾಯದ ಹಿತಾಸಕ್ತಿ ಹೆಚ್ಚಾಗಿರಬೇಕು. ಕಾಯ್ದೆಯನ್ನು ತಿಳಿದುಕೊಂಡು ದಕ್ಷಿಣ ಕರ್ನಾಟಕದ ಜಿಲ್ಲೆಗಳು ಕೆಲಸ / ಕಾರ್ಯ ನಿರ್ವಹಿಸುತ್ತವೆ. ಆದರೆ ಉತ್ತರ ಕರ್ನಾಟಕದ ಜಿಲ್ಲೆಗಳು ಆ ರೀತಿ ಕೆಲಸ ನಿರ್ವಹಿಸುತ್ತಿಲ್ಲ ಎಂದು ತಿಳಿಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಪಂಚಾಯತ್ ಪ್ರತಿನಿಧಿಗಳು ಹಾಗೂ ವಿವಿಧ ಎನ್.ಜಿ.ಓ.ಗಳು / ಸಂಘಟನೆ, ತಜ್ಞರುಗಳೊಂದಿಗೆ ಸಂವಾದದಿಂದ ಉದ್ಭವಿಸಿದ ಪ್ರಶ್ನೆಗಳಿಗೆ ಶ್ರೀ.ಟಿ.ಆರ್.ರಘುನಂದನ್‌ರವರು ಪ್ರತ್ಯುತ್ತರ ನೀಡುತ್ತಾ ಸಭೆಯಲ್ಲಿ ಮಾತನಾಡಿದರು. ಪಂಚಾಯತಿಗಳ ಬಗ್ಗೆ ರಾಜಕಾರಣಿಗಳಿಗೆ ಕೆಲವೊಂದು ಅಭಿಪ್ರಾಯಗಳು ಹಾಗೆಯೇ ಅಧಿಕಾರಿಗಳಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಕೆಲವೊಂದು ಅನಿಸಿಕೆಗಳಿರುತ್ತವೆ ಇವರೆಡು ಜೊತೆಗೆ ಹೋಗುವುದಿಲ್ಲ. ಬರೀ ಸೇವಾ ವಿತರಣೆಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯು ರೂಪುಗೊಂಡಿರುವುದಿಲ್ಲ. ರಾಜಕೀಯವಾಗಿ ವಿಕೇಂದ್ರೀಕರಣವಾಗಬೇಕೆಂದು ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೊಳಿಸಲಾಯಿತು. 138 ಕೋಟಿ ಜನಸಂಖ್ಯೆಗೆ ಸರಿಸುಮಾರು 4500 ಎಮ್.ಎಲ್.ಎ.ಗಳಿದ್ದು, 800 ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರುಗಳಿದ್ದಾರೆ. ಒಟ್ಟಾರೆಯಾಗಿ 5300 ಚುನಾಯಿತ ಪ್ರತಿನಿಧಿಗಳಿದ್ದಾರೆ.

ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದ ನಂತರ ನಮ್ಮ ದೇಶದಲ್ಲಿ ಸುಮಾರು 32 ಲಕ್ಷ ಚುನಾಯಿತ ಪ್ರತಿನಿಧಿಗಳಾಗಿದ್ದಾರೆ. ಇದು ನಾರ್ವೆ ದೇಶದ ಜನಸಂಖ್ಯೆಯನ್ನು ಮೀರಿದೆ. ನಮ್ಮ ರಾಷ್ಟ್ರದಲ್ಲಿ 2,43,000 ಗ್ರಾಮ ಪಂಚಾಯತಿಗಳು ಹಾಗೂ ಸುಮಾರು 6000 ಪುರಸಭೆಗಳಿದ್ದು, ಅವರಲ್ಲಿ ಶೇ.40 ರಿಂದ 45ರಷ್ಟು ಮಹಿಳಾ ಮೇಯರ್‌ಗಳಿದ್ದಾರೆ. ಇದು ಯಾವ ದೇಶದಲ್ಲೂ ಇಷ್ಟು ಚುನಾಯಿತ ಪ್ರತಿನಿಧಿಗಳಿರಲು ಸಾಧ್ಯವಿರುವುದಿಲ್ಲ. ರಾಜಕೀಯ ದೃಷ್ಟಿಯಿಂದ ಮುನ್ನೋಟ ಏನು? ಅಧಿಕಾರಿಗಳ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಮುನ್ನೋಟ ಏನು ಎಂಬ ಚಿಂತನೆ ನಡೆಸಿದರೆ ಇವರೆಡಕ್ಕೂ ಒಂದಕ್ಕೊಂದು ಹೊಂದಾಣಿಕೆಯಾಗುವುದಿಲ್ಲ. ಉದಾಹರಣೆಗೆ:– ಜನರ ಬೇಡಿಕೆಯ ಚಾಲಿತ ತರಬೇತಿಯನ್ನು ಸ್ವತ: ನಾನೇ ಮಾಡುತ್ತಿದ್ದೇನೆ. ರಾಜಕೀಯ ನಿರೀಕ್ಷೆ ಹಾಗೂ ದೊಡ್ಡ ನಿರೀಕ್ಷೆಗಳ ಹೊಣೆಗಾರಿಕೆಗಳನ್ನು ನಿಭಾಯಿಸುವುದನ್ನು ಕಲಿಯಬೇಕು. ಮೊದಲು ನಮಗೆ ಆರ್.ಟಿ.ಐ., ಕೋರ್ಟ್ ಇತ್ಯಾದಿಗಳನ್ನು ಒದಗಿಸಿರುವ / ಒದಗಿರುವ ಶಸ್ತ್ರಗಳ ಮೂಲಕ ಬಳಕೆ ಮಾಡುವುದನ್ನು ಕಲಿಯಬೇಕು.

ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಮೊದಲಿಗೆ ಜಿಲ್ಲಾಧಿಕಾರಿಗಳಿಗೆ ವಹಿಸಬೇಕೆಂಬ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಪಂಚಾಯತಿಯ ಬಗ್ಗೆ ಒಲವಿರುವ ರಾಜಕೀಯ ಇಚ್ಛಾಶಕ್ತಿಗಳ ವ್ಯಕ್ತಿಗಳಿಂದ ಜಂಟಿ ಆಯ್ಕೆ ಸಮಿತಿಗೆ ವರ್ಗಾಯಿಸಲಾಯಿತು. ಜಂಟಿ ಆಯ್ಕೆ ಸಮಿತಿಗೆ ಅಧ್ಯಕ್ಷರಾಗಿದ್ದವರು ಶ್ರೀ.ಕಲ್ಯಾಣ್ ಸಿಂಗ್‌ರವರು ಆಗಿನ ಬಿಜೆಪಿ ಪಕ್ಷದಲ್ಲಿದ್ದವರು. ಅವರು ಪಂಚಾಯತ್ ರಾಜ್ ಮೂಲಕ ಅನುಷ್ಠಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರು. ಅದನ್ನು ಒಪ್ಪಿಕೊಂಡವರು ಶ್ರೀಮತಿ.ಸೋನಿಯಾ ಗಾಂಧಿಯವರು. ಈ ರೀತಿಯಾಗಿ ನರೇಗಾ ಯೋಜನೆಯನ್ನು ಪಂಚಾಯತಿಗಳಿಗೆ ವಹಿಸಲಾಯಿತು. ಆದುದರಿಂದ, ಪಂಚಾಯತಿಗಳ

ಬಗ್ಗೆ ಚಿಂತನೆ ಮಾಡುವವರು ಎಲ್ಲಾ ಪಕ್ಷಗಳಲ್ಲೂ ಇರುತ್ತಾರೆ. ಅದು ರಾಷ್ಟ್ರಮಟ್ಟದಲ್ಲೂ ನಿಜ ಹಾಗೆಯೇ ರಾಜ್ಯಮಟ್ಟದಲ್ಲೂ ಹೌದು. ಇದು ಹೀಗೆಯೇ ಮುಂದುವರೆಯುತ್ತದೆ. ಶ್ರೀ.ಎಂ.ವೈ.ಘೋರ್ಪಡೆರವರು 2012 ರಲ್ಲಿ ಮಂತ್ರಿಯಾಗಿದ್ದಾಗ ಪಂಚಾಯತ್ ರಾಜ್ ಕಾಯ್ದೆಗೆ 45 ತಿದ್ದುಪಡಿಗಳನ್ನು ತರಲಾಗಿತ್ತು. ಹಾಗೆಯೇ, ಪಂಚಾಯತ್ ಅಭಿವೃದ್ಧಿಗೆ ಹಿತಾಸಕ್ತಿಯುಳ್ಳವರಾದ ಶ್ರೀ.ಸಿ.ನಾರಾಯಣಸ್ವಾಮಿ, ಮತ್ತು ಶ್ರೀ.ಡಿ.ಆರ್.ಪಾಟೀಲ, ಶ್ರೀ.ಎ.ವೈ.ಘೋರ್ಪಡೆ ಇವರುಗಳು ಅಧಿಕಾರಿಗಳ ಹಂತಗಳಲ್ಲಿ ಪದೇಪದೇ ಭೇಟಿ ನೀಡಿ ಚರ್ಚಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಲ್ಲಿ ಹೊಸ 85 ತಿದ್ದುಪಡಿಗಳನ್ನು ತರಲು ಶ್ರಮಿಸಿದ್ದಾರೆ.

ರಾಜ್ಯ ಆಯವ್ಯಯದಲ್ಲಿ ಮಂಡಿಸುವ ಒಟ್ಟು ಆಯವ್ಯಯಕ್ಕೆ ಅನುಗುಣವಾಗಿ ಪಂಚಾಯತಿಗಳಿಗೆ ವರ್ಗಾವಣೆಯಾಗುವ ಅನುದಾನವು ಇಳಿಕೆ ಆಗುತ್ತಿದ್ದು, ಇದನ್ನು ಸರಿಪಡಿಸುವುದು ಹಾಗೂ ರಾಜ್ಯ ವಲಯದಿಂದ ಜಿಲ್ಲಾ ವಲಯಗಳಿಗೆ ಯೋಜನೆಗಳನ್ನು ಹಸ್ತಾಂತರಿಸುವ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ. ಇಂತಹ ಆಸಕ್ತಿಯುಳ್ಳವರಿಂದ ಪಂಚಾಯತ್ ರಾಜ್ ವ್ಯವಸ್ಥೆಯು ಬಲಿಷ್ಠಗೊಳ್ಳುತ್ತದೆ. ಈ ಸಭೆಯಲ್ಲಿ ನಾನು ಮುಖ್ಯವಾಗಿ ತಿಳಿಸುವುದೇನೆಂದರೆ, ನಗರ ಪ್ರದೇಶದ ಕಾನೂನು 1974 ರಲ್ಲಿ ಜಾರಿಗೆ ಬಂದಿದ್ದು, ಅದು ಅತ್ಯಂತ ತುಂಬಾ ಹಳೆಯದಾಗಿದೆ. ನಗರ ಪ್ರದೇಶದಲ್ಲಿ ವಾಸಿಸುವ ಜನರಿಗೆ ಮಾಹಿತಿಗಳೇ ಲಭ್ಯವಾಗುವುದಿಲ್ಲ. ನಮ್ಮಲ್ಲಿ ಜಿಲ್ಲಾ ಯೋಜನೆಗಳು ತಯಾರಾಗುತ್ತಿಲ್ಲ. ಆದುದರಿಂದ, ನಗರ ಮತ್ತು ಗ್ರಾಮೀಣ ಮೂಲಸೌಕರ್ಯಗಳನ್ನು ಒಗ್ಗೂಡಿಸಿ ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಿ ಜಿಲ್ಲಾ ಸಮಗ್ರ ಯೋಜನೆಯನ್ನು ಸಿದ್ದಪಡಿಸುವುದು ಇಂದಿನ ಅಗತ್ಯವಾಗಿರುತ್ತದೆ. ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದರು.

ಶ್ರೀ.ಎ.ವೈ.ಘೋರ್ಪಡೆರವರು ವಿಚಾರಣಾ ಗೋಷ್ಠಿಯ ಅಧ್ಯಕ್ಷತೆಯ ಮುಕ್ತಾಯ ಭಾಷಣದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಡಿ ವಿಕೇಂದ್ರೀಕರಣ ಯೋಜನೆ, ಸಂಪನ್ಮೂಲ ಯೋಜನೆ ಹಾಗೂ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳು ಪ್ರಮುಖವಾಗಿ ಮೂರು ಅಂಶಗಳು ರಾಷ್ಟ್ರದಲ್ಲಿ ಹೆಚ್ಚಿನ ಮಹತ್ವ ನೀಡಬೇಕಾಗಿದೆ. ಇದಲ್ಲದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯೋಜನೆಗಳಿಂದ ಪರಿಣಾಮ ಬೀರುವ ಅಂಶಗಳ ಬಗ್ಗೆ ವಿಶ್ಲೇಷಣೆಗಳ ಅಗತ್ಯವಿದ್ದು ಇದರಿಂದ ಜನರ ಜೀವನ ಮಟ್ಟದಲ್ಲಿ ಯಾವ ರೀತಿ ಬದಲಾವಣೆಯಾಗಿದೆ ಅಥವಾ ಸುಧಾರಣೆಯಾಗಿದೆ ಎಂಬುದು ತಿಳಿಯಲು ಸಾಧ್ಯವಾಗುತ್ತದೆ. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಈಗಾಗಲೇ ಚಾಲನೆ ನೀಡಿದೆ. ವಿಚಾರ ಗೋಷ್ಠಿಯ ಪ್ರಮುಖ ಸಾರಾಂಶಗಳು ಸಂಘ ಸಂಸ್ಥೆಗಳು ಸಕ್ರಿಯವಾಗಿ ಪಂಚಾಯತ್ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಬೇಕು, ಜನರು ಧ್ವನಿ ಎತ್ತಬೇಕು, ಗ್ರಾಮ ಸಭೆ ಹಕ್ಕನ್ನು ಬಿಟ್ಟುಕೊಡಬಾರದು, ಸಾಮರ್ಥ್ಯಾಭಿವೃದ್ಧಿಯ ಮಾಹಿತಿ ಲಭ್ಯವಾಗಬೇಕು, ಸಮಿತಿಗಳು ಹಾಗೂ ಚುನಾಯಿತ ಪಂಚಾಯತಿಗಳು ಜವಾಬ್ದಾರಿ ಅರಿತು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ನಗರ ಸ್ಥಳೀಯ ಸಂಸ್ಥೆಗಳ ಕಾಯ್ದೆಗೆ ತಿದ್ದುಪಡಿಯಾಗಬೇಕು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದು ಸದರಿ ಸಮಿತಿಗೆ ಸಂಪೂರ್ಣವಾದ ಅಧಿಕಾರವಿದೆ ಹಾಗೂ ಜವಾಬ್ದಾರಿ ಕೂಡ ಇದೆ. ಇದರಿಂದ ತಳಮಟ್ಟದಿಂದ ಯೋಜನೆಗಳನ್ನು ತಾಲ್ಲೂಕು ಮಟ್ಟದಲ್ಲಿ ಕ್ರೋಢೀಕರಿಸಿ ಅದನ್ನು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯಡಿ ನಗರ ಮತ್ತು ಗ್ರಾಮೀಣ ಯೋಜನೆಗಳನ್ನು ಒಗ್ಗೂಡಿಸಿ ಮತ್ತು ಜಿಲ್ಲಾ ಯೋಜನೆ ಸಮಿತಿಗಳ ಮೂಲಕ ಕಾರ್ಯನಿರ್ವಹಿಸಿದರೇ ಜಿಲ್ಲಾ ಸಮಗ್ರ ಯೋಜನೆಗಳನ್ನು ರೂಪಿಸಬಹುದಾಗಿದೆ.

●

ವರದಿ



ಎಂ.ಕೆ.ಕೆಂಪೇಗೌಡ

ಜಂಟಿ ನಿರ್ದೇಶಕರು
ಸಾಮಾಜಿಕ ಲೆಕ್ಕ ಪರಿಶೋಧನಾ ನಿರ್ದೇಶನಾಲಯ
ಹಾಗೂ ಸಲಹೆಗಾರರು (ಪಂ.ರಾಜ್)
ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ

# ಪಂಚಾಯತ್ ರಾಜ್ ವ್ಯವಸ್ಥೆ ವಿನೂತನ ಅಂಶಗಳು

ಸಂವಿಧಾನದ 73ನೇ ತಿದ್ದುಪಡಿ ಆಶಯದಂತೆ 3 ಹಂತದ ವಿಕೇಂದ್ರೀಕರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಜಾರಿಗೊಳಿಸಿರುವ ರಾಜ್ಯಗಳಲ್ಲಿ ಕೇರಳವು ಪ್ರಮುಖವಾಗಿದೆ. ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯ ಉತ್ತಮ ಅಂಶಗಳ ಬಗ್ಗೆ ಅಧ್ಯಯನ ಮಾಡುವ ಸಲುವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, (ಪಂಚಾಯತ್ ರಾಜ್) ಶ್ರೀಮತಿ ಉಮಾಮಹದೇವನ್‌ರವರ ನೇತೃತ್ವದಲ್ಲಿ 4 ಅಧಿಕಾರಿಗಳ ತಂಡ ದಿನಾಂಕ:25–11–2019 ರಿಂದ 27–11–2019ರವರೆಗೆ 3 ದಿನಗಳು ಕೇರಳ ರಾಜ್ಯ ಪ್ರವಾಸ ಕೈಗೊಂಡಿತು. ಪ್ರವಾಸದಲ್ಲಿ ಭಾಗವಹಿಸಲು ಇತರ ಅಧಿಕಾರಿಗಗಳಾದ ಶ್ರೀ.ಅಶ್ರಫುಲ್ ಹಸನ್, ನಿರ್ದೇಶಕರು (ಪಂ.ರಾಜ್–1), ಶ್ರೀ.ಪಿ. ಶಿವಶಂಕರ್, ನಿರ್ದೇಶಕರು (ಪಂ.ರಾಜ್–2) ಹಾಗೂ ನಿರ್ದೇಶಕರು (ಎ.ಎನ್.ಎಸ್.ಎಸ್.ಐ.ಆರ್.ಡಿ), ಶ್ರೀ.ಎಂ.ಕೆ.ಕೆಂಪೇಗೌಡ, ಸಲಹೆಗಾರರು (ಪಂಚಾಯತ್ ರಾಜ್).

ದಿನಾಂಕ:25–11–2019ರಂದು ಸೋಮವಾರ ತಿರುವನಂತಪುರಂನಲ್ಲಿ ಕೇರಳ ರಾಜ್ಯ ಮಟ್ಟದ ಅಧಿಕಾರಿಗಳೊಡನೆ ಚರ್ಚೆ ನಡೆಸಲಾಯಿತು. 26–27 ರಂದು ತ್ರಿಶೂರ್ ಜಿಲ್ಲೆಯಲ್ಲಿರುವ ರಾಜ್ಯ ಸ್ಥಳೀಯ ಆಡಳಿತ ತರಬೇತಿ ಸಂಸ್ಥೆ ಹಾಗೂ ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಿಗೆ ಕ್ಷೇತ್ರ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ಜೊತೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳಲಾಯಿತು. ಪ್ರವಾಸದ ವೇಳೆ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಹಾಗೂ ಸ್ಥಳೀಯ ಸಂಸ್ಥೆಗಳ ಭೇಟಿಯಿಂದ ಕಂಡುಕೊಂಡ ಪ್ರಮುಖ ಅಂಶಗಳು ಇಂತಿವೆ.

## ಕೇರಳ ರಾಜ್ಯ ಹಣಕಾಸು ಆಯೋಗಕ್ಕೆ ಭೇಟಿ

ಅಧ್ಯಕ್ಷರು ಡಾ॥ ಎಸ್.ಎಂ.ವಿಜಯಾನಂದ್‌ರವರ ಜೊತೆ ನಡೆದ ಚರ್ಚೆಯ ವೇಳೆ ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆ ನಡೆದು ಬಂದ ದಾರಿ, ಸ್ವತಂತ್ರ್ಯ ನಂತರ ವಿವಿಧ ಸರ್ಕಾರಗಳು ಹಂತಗಳಲ್ಲಿ ಕೈಗೊಂಡ ಕಾಯ್ದೆಗೆ ಸಂಬಂಧಿಸಿದ ನೀತಿ ನಿರ್ಧಾರಗಳು ಜಾರಿಗೆ ತಂದ ಯೋಜನೆಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಅವುಗಳ ಮುಖ್ಯಾಂಶಗಳು ಇಂತಿವೆ.

- ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯು ಗಾಂಧೀಜಿಯವರು ಪ್ರತಿಪಾದಿಸಿದ ಗ್ರಾಮ ಸ್ವರಾಜ್ಯ ಕಲ್ಪನೆ ನಾಂದಿಯಾಗಿರುತ್ತದೆ. ಗ್ರಾಮ ರಾಜ್ಯದ ಮೂಲಕ ಅಂತ್ಯೋದಯವನ್ನು ಸಾಧಿಸುವ ಗಾಂಧೀಜಿಯವರ ಕಲ್ಪನೆಯಲ್ಲಿ ಇವರಿಗೆ ಬಲವಾದ ನಂಬಿಕೆ ಇರುವುದು ಪೂರಕ ಅಂಶವಾಗಿರುತ್ತದೆ.
- ಕೇರಳ ರಾಜ್ಯದಲ್ಲಿ ಹೆಚ್ಚಿನ ಅವಧಿಗೆ ಎಡಪಂತೀಯ ಸರ್ಕಾರಗಳು

ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯು ಗಾಂಧೀಜಿಯವರು ಪ್ರತಿಪಾದಿಸಿದ ಗ್ರಾಮ ಸ್ವರಾಜ್ಯ ಕಲ್ಪನೆ ನಾಂದಿಯಾಗಿರುತ್ತದೆ. ಗ್ರಾಮ ರಾಜ್ಯದ ಮೂಲಕ ಅಂತ್ಯೋದಯವನ್ನು ಸಾಧಿಸುವ ಗಾಂಧೀಜಿಯವರ ಕಲ್ಪನೆಯಲ್ಲಿ ಇವರಿಗೆ ಬಲವಾದ ನಂಬಿಕೆ ಇರುವುದು ಪೂರಕ ಅಂಶವಾಗಿರುತ್ತದೆ.

ಅಸ್ತಿತ್ವದಲ್ಲಿದ್ದರೂ, ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯಾಗದಿರುವುದು ಮುಖ್ಯವಾಗಿ ಗಮನಿಸಬಹುದಾದ ಅಂಶವಾಗಿರುತ್ತದೆ.

- ಹೆಚ್ಚಿನ ಅವಧಿಗೆ ಮುಖ್ಯಮಂತ್ರಿಗಳಾಗಿದ್ದ ಶ್ರೀ.ಇ.ಎಂ.ಎಸ್.ನಂಬೂದರಿಪಾದ್‌ರವರು ವಿಕೇಂದ್ರೀಕರಣ ವ್ಯವಸ್ಥೆಯ ಬಲವಾದ ಪ್ರತಿಪಾದಕರಾಗಿದ್ದರು. ವಿಧಾನಸಭಾ ಸದಸ್ಯರು ಹಾಗೂ ಲೋಕಸಭಾ ಸದಸ್ಯರುಗಳು ಮುಖ್ಯವಾಗಿ ಶಾಸನ ರಚಿಸುವ ಜವಾಬ್ದಾರಿ ನಿರ್ವಹಿಸಬೇಕೆಂಬುದು ಅವರ ಅಭಿಪ್ರಾಯ ವಾಗಿತ್ತು. ವಿಕೇಂದ್ರೀಕರಣ ವ್ಯವಸ್ಥೆಯಡಿ ಇರುವ ಸಂಸ್ಥೆಗಳು ಸರ್ಕಾರದ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕೆಂಬುದು ಅವರ ಧ್ಯೇಯವಾಗಿತ್ತು.
- ಈ ಹಿನ್ನೆಲೆಯಲ್ಲಿ ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಗೆ ಭದ್ರವಾದ ಬುನಾದಿ ಹಾಕಲಾಗಿದೆ.
- 1991ರ ಪೂರ್ವದಲ್ಲಿ ಕೇರಳ ರಾಜ್ಯದ ಜಿಲ್ಲಾ ಮಟ್ಟದಲ್ಲಿ ಡಿಸ್ಟ್ರಿಕ್ ಕೌನ್ಸಿಲ್‌ಗಳು ಅಸ್ತಿತ್ವದಲ್ಲಿವು. ಜಿಲ್ಲಾಧಿಕಾರಿಗಳು ಜಿಲ್ಲಾ ಕೌನ್ಸಿಲ್‌ಗೆ ಕಾರ್ಯದರ್ಶಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದರು.
- ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲ ಮಂತ್ರ ಜನರ ಭಾಗವಹಿಸುವಿಕೆಯ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು.
- ಸ್ಥಳೀಯ ಜನರ ಆಶಯಗಳನ್ನು, ಬೇಕು ಬೇಡಗಳನ್ನು ಅರಿತು ಯೋಜನೆ ರೂಪಿಸುವುದು.
- ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಹೆಚ್ಚಿನ ಪಾರದರ್ಶಕತೆ ತರುವುದು.
- ಪಾರದರ್ಶಕತೆ ಮೂಲಕ ಭ್ರಷ್ಟಾಚಾರವನ್ನು ತಡೆಗಟ್ಟುವುದು.
- 1994ರಲ್ಲಿ ಕೇರಳ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಂವಿಧಾನದ 73ನೇ ತಿದ್ದುಪಡಿಯನ್ವಯ ಬದಲಾವಣೆ ತರಲಾಯಿತು.
- 3 ಹಂತದ ಈ ವ್ಯವಸ್ಥೆಯಲ್ಲಿ ಚುನಾಯಿತ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು.
- ಗ್ರಾಮ ಪಂಚಾಯತಿಗಳು ಗಾತ್ರದಲ್ಲಿ ದೊಡ್ಡವಾಗಿದ್ದು(30 ಸಾವಿರ ಜನ ಸಂಖ್ಯೆಗೆ ಒಂದು ಗ್ರಾಮ ಪಂಚಾಯತಿ) ಹೆಚ್ಚಿನ ಜವಾಬ್ದಾರಿ ನಿರ್ವಹಿಸುವ ಸಂಸ್ಥೆಗಳಾದವು.
- ಶಿಕ್ಷಣ, ಆರೋಗ್ಯ, ಪಶುಸಂಗೋಪನೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೃಷಿ, ಗ್ರಾಮೀಣ ಕೈಗಾರಿಕೆ, ಮುಂತಾದ ಪ್ರಮುಖ ಇಲಾಖೆಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಗೆ ತರಲಾಗಿದೆ.
- 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರಕಾರ್ಯಗಳನ್ನು ನಿರ್ಧಿಷ್ಟವಾಗಿ ನಿಗದಿಪಡಿಸಲಾಗಿದೆ.
- ವಹಿಸಲಾದ ಪ್ರಕಾರ್ಯಗಳಿಗನುಗುಣವಾಗಿ ಸಿಬ್ಬಂದಿ ಹಾಗೂ ಅನುದಾನ ಸಹ ನೀಡಲಾಗಿದೆ.
- ಗ್ರಾಮ ಪಂಚಾಯತಿಗಳು ನಿಜವಾದ ಶಕ್ತಿ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.
- ಆಡಳಿತ ಹಾಗೂ ಅಭಿವೃದ್ಧಿಯಲ್ಲಿ ಜನರ ಕಲ್ಯಾಣದ ಬಗ್ಗೆ ಕಾಳಜಿ ಮತ್ತು ಸಹಾನುಭೂತಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.
- ಜಿಲ್ಲೆ, ತಾಲ್ಲೂಕು & ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪ್ರತಿ ಮಾಹೆ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ.
- ಸ್ಥಳೀಯ ಗ್ರಾಮ ಪಂಚಾಯತಿಗಳು ಸ್ಥಳೀಯ ಸಂಪನ್ಮೂಲ ಸಂಗ್ರಹಿಸಲು ಹೆಚ್ಚಿನ ಅಧಿಕಾರ ನೀಡಲಾಗಿದೆ.
- ಗ್ರಾಮ ಪಂಚಾಯತಿ ವ್ಯಾಪ್ತಿಯ ಆಸ್ತಿಗಳ ಮೇಲೆ ತೆರಿಗೆ ವಿಧಿಸುವುದಲ್ಲದೇ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವೃತ್ತಿ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.
- ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ವರಮಾನದ ಹೆಚ್ಚಿನ ಅಂಶವನ್ನು ವರ್ಗಾಹಿಸಲಾಗುತ್ತಿದೆ.
- ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳು, ಸರ್ಕಾರೇತರ

ಸಂಸ್ಥೆಗಳು, ಸ್ಥಳೀಯವಾಗಿ ನೆಲೆಸಿರುವ ವಿವಿಧ ಕ್ಷೇತ್ರಗಳ ಅನುಭವಿ ವ್ಯಕ್ತಿಗಳನ್ನು(ವೈದ್ಯರು, ಇಂಜಿನಿಯರ್‌ಗಳು, ಪ್ರಾಧ್ಯಾಪಕರುಗಳು, ಇತ್ಯಾದಿ) ತೊಡಗಿಸಲಾಗುತ್ತಿದೆ.

- ♦ ಮಹಿಳೆಯರ ಕಲ್ಯಾಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಈ ಉದ್ದೇಶಕ್ಕಾಗಿ ಕುಟುಂಬಶ್ರೀ ಎಂಬ ಬೃಹತ್ ಯೋಜನೆಯನ್ನು ರೂಪಿಸ ಲಾಗಿದೆ.
- ♦ ಅಭಿವೃದ್ಧಿಯ ಎಲ್ಲಾ ಹಂತಗಳಲ್ಲಿ ಕುಟುಂಬಶ್ರೀ ಸದಸ್ಯರನ್ನು ಭಾಗಿಗಳನ್ನಾಗಿ ಮಾಡಲಾಗಿದೆ.
- ♦ ಪ್ರತಿ ಹಂತದಲ್ಲಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಹೊಣೆಗಾರಿಕೆಯನ್ನು ನೀಡಲಾಗಿದೆ.
- ♦ ಚುನಾಯಿತ ಪ್ರತಿನಿಧಿಗಳು ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಚುನಾಯಿತ ಪ್ರತಿನಿಧಿಗಳಿಗೆ ಸಮರ್ಪಕವಾದ ತರಬೇತಿ ವ್ಯವಸ್ಥೆಯನ್ನು ಕೇರಳ ಇನ್ಸಿಟ್ಯೂಟ್ ಆಫ್ ಲೋಕಲ್ ಆಡ್ಮಿನಿಸ್ಟ್ರೇಷನ್ ಸಂಸ್ಥೆಯ ಮೂಲಕ ಕಲ್ಪಿಸಲಾಗಿದೆ.

### ಕೇರಳ ರಾಜ್ಯ ಸ್ಥಳೀಯ ಸರ್ಕಾರ ಇಲಾಖೆಗೆ ಭೇಟಿ

- ಶ್ರೀ.ಟಿ.ಕೆ.ಜೋಸ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಜೊತೆ ವಿವರವಾಗಿ ಚರ್ಚಿಸಲಾಯಿತು.
- ಈ ಇಲಾಖೆಯನ್ನು ಸ್ಥಳೀಯ ಸರ್ಕಾರ ಇಲಾಖೆ (Local self Government Department) ಎಂದು ಕರೆಯಲಾಗುತ್ತಿದೆ. ಕೇರಳ ರಾಜ್ಯದಲ್ಲಿ ಸ್ಥಳೀಯ ಸರ್ಕಾರ ಇಲಾಖೆಯಡಿ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಹಾಗೂ ಗ್ರಾಮೀಣ ಹಾಗೂ ನಗರ ಸ್ಥಳೀಯ ಸರ್ಕಾರಗಳ ಇಲಾಖೆಗಳು ಒಂದೇ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿವೆ.
- ಈ ಇಲಾಖೆ ಮುಖ್ಯಸ್ಥರು ಶ್ರೀ.ಟಿ.ಕೆ.ಜೋಸ್. ಇವರ ಜೊತೆ ಸ್ಥಳೀಯ ಪಂಚಾಯತ್ ರಾಜ್ ಆಡಳಿತ ವ್ಯವಸ್ಥೆಯ ಬಗ್ಗೆ ಚರ್ಚಿಸಿ ಮಾಹಿತಿ ಪಡೆಯಲಾಯಿತು. ಪ್ರಮುಖ ಅಂಶಗಳು ಈ ಕೆಳಗಿನಂತಿವೆ.
- ಸ್ಥಳೀಯ ಸರ್ಕಾರ ಇಲಾಖೆಯಡಿ ಹಲವಾರು ಮಿಷನ್‌ಗಳು ಕಾರ್ಯನಿರ್ವಹಿಸುತ್ತಿವೆ. ಉದಾ: ಶುಚಿತ್ವ ಮಿಷನ್, ಲೈಫ್ ಕೇರಳ ಮಿಷನ್, ಸೋಷಿಯಲ್ ಸೆಕ್ಯೂರಿಟಿ ಮಿಷನ್, ಪಾವರ್ಟಿ ಎರಾಡಿಕೇಷನ್ ಮಿಷನ್, ನರೇಗಾ ಮಿಷನ್ ಇತ್ಯಾದಿ. ಪ್ರತಿ ಮಿಷನ್‌ಗೆ ಹಿರಿಯ ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ.
- ಕೇರಳ ರಾಜ್ಯ ವಿಕೇಂದ್ರೀಕರಣ ವ್ಯವಸ್ಥೆ(ಗ್ರಾಮೀಣ) ಯಡಿ 941 ಗ್ರಾಮ ಪಂಚಾಯತಿಗಳು, 152 ಬ್ಲಾಕ್ ಪಂಚಾಯತಿಗಳು, 14 ಡಿಸ್ಟ್ರಿಕ್ ಪಂಚಾಯತಿಗಳು ಇರುತ್ತವೆ.
- ಲೈಫ್ ಮಿಷನ್ ಅಡಿ ವಸತಿ ಯೋಜನೆಗಳು ಬರುತ್ತವೆ. ಕೇಂದ್ರ ಸರ್ಕಾರದ ಪಿ.ಎಂ.ಎ.ವೈ. ಯೋಜನೆಯನ್ನು ಪರಿಷ್ಕರಿಸಿ ರಾಜ್ಯ ಸರ್ಕಾರದ ಅನುದಾನವನ್ನು ಒಳಗೊಂಡಂತೆ ವಸತಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.
- ಪಾವರ್ಟಿ ಎರಾಡಿಕೇಷನ್ ಮಿಷನ್ ಅಡಿ ಮಹಿಳಾ ಸ್ವ-ಸಹಾಯ ಗುಂಪುಗಳ ನೆರವಿನ ಕುಟುಂಬಶ್ರೀ ಬೃಹತ್ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.
- ಸೋಷಿಯಲ್ ಸೆಕ್ಯೂರಿಟಿ ಮಿಷನ್ ಅಡಿ ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆಗಳನ್ನು, ಗ್ರಾಮ ಪಂಚಾಯತಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.
- ನರೇಗಾ ಮಿಷನ್ ಅಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಗ್ರಾಮ ಪಂಚಾಯತಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.
- ಗ್ರಾಮ ಪಂಚಾಯತಿಗಳನ್ನು ಜನನ ಮರಣ ನೊಂದಣಿ ಪ್ರಾಧಿಕಾರಿಗಳನ್ನಾಗಿ ಮಾಡಲಾಗಿದೆ. ಇದರಿಂದ ಗ್ರಾಮ ಪಂಚಾಯತಿಗಳು ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ತರಲು ಅನುಕೂಲವಾಗಿರುತ್ತದೆ.
- ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜನರ ಭಾಗವಹಿಸುವಿಕೆ ಮೂಲಕ ತಯಾರಿಸಲಾಗುತ್ತಿದೆ.

## ಕುಟುಂಬಶ್ರೀ ಆಯುಕ್ತಾಲಯಕ್ಕೆ ಭೇಟಿ

- ಕುಟುಂಬಶ್ರೀ ಯೋಜನೆ ರಾಜ್ಯದ ಪಾವರ್ಟಿ ಎರಾಡಿಕೇಷನ್ ಮಿಷನ್ನಿನ ಬಹುದೊಡ್ಡ ಯೋಜನೆ. ಆಯುಕ್ತರು ಕುಟುಂಬಶ್ರೀ ಯೋಜನೆ ಮುಖ್ಯಸ್ಥರು. ಆಯುಕ್ತರಾದ ಶ್ರೀ.ಹರಿಕಿಶೋರ್‌ರವರ ಜೊತೆ ವಿವರವಾಗಿ ಚರ್ಚಿಸಿ ಮಾಹಿತಿ ಪಡೆಯಲಾಯಿತು.
- ರಾಜ್ಯದ ಎಲ್ಲಾ ಇಲಾಖೆಗಳಡಿ ಬರುವ ಮಹಿಳಾ ಅಭಿವೃದ್ಧಿ ಯೋಜನೆಗಳಲ್ಲಿ ಕುಟುಂಬಶ್ರೀ ಯೋಜನೆಯ ಮಹಿಳೆಯರನ್ನು ತೊಡಗಿಸಲಾಗಿದೆ. ರಾಜ್ಯದಲ್ಲಿ 3 ಲಕ್ಷ ಕುಟುಂಬಶ್ರೀ ಸ್ವ-ಸಹಾಯ ಗುಂಪುಗಳಿವೆ. ಸುಮಾರು 40 ಲಕ್ಷ ಮಹಿಳೆಯರು ಸದಸ್ಯರಾಗಿರುತ್ತಾರೆ.
- ಕುಟುಂಬಶ್ರೀ ಯೋಜನೆಯಡಿ ನೊಂದಾಯಿತ-ವಾದ ಗುಂಪುಗಳ ಸದಸ್ಯರಿಗೆ ವಿವಿಧ ಕಸಬುಗಳಲ್ಲಿ ತರಬೇತಿ ನೀಡಲಾಗುತ್ತಿದೆ. ವಿವಿಧ ಇಲಾಖೆಗಳ ಯೋಜನೆಗಳಡಿ ಸವಲತ್ತುಗಳನ್ನು ನೀಡುವಾಗ ಕುಟುಂಬಶ್ರೀ ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ನೀಡಲಾಗುವುದು.
- ಕುಟುಂಬಶ್ರೀ ಮಹಿಳೆಯರು ವೈಯಕ್ತಿಕ ನೆಲೆಯಲ್ಲಿಯೂ ಸಹಾಯ ಪಡೆದು, ಕಸಬುಗಳನ್ನು ಮಾಡುವರು. ಗುಂಪು ಚಟುವಟಿಕೆಗಳಲ್ಲಿ ಸಹ ಸೌಲಭ್ಯ ಪಡೆಯಬಹುದು. ಕುಟುಂಬಶ್ರೀ ಸ್ವ-ಸಹಾಯ ಗುಂಪುಗಳು ಈ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳುತ್ತವೆ.
- ಸಾವಯವಕೃಷಿ ಚಟುವಟಿಕೆ, ತೋಟಗಾರಿಕೆ, ಪುಷ್ಪ ಬೇಸಾಯ, ಹಸು ಸಾಕಾಣಿಕೆ, ಕೋಳಿ ಸಾಕಾಣಿಕೆ, ಕುರಿ-ಮೇಕೆ ಸಾಕಾಣಿಕೆ, ತಿಂಡಿ ತಿನಿಸು ತಯಾರಿಕೆ, ಊಟ ಸರಬರಾಜು ಅಣಬೆ ತಯಾರಿಕೆ, ಬಟ್ಟೆ ಕಸೂತಿ ಮಾಡುವುದು, ಕಛೇರಿ ಸ್ವಚ್ಛತೆ, ಇತ್ಯಾದಿ.
- ಕುಟುಂಬಶ್ರೀ ಸಂಘದವರು ಸರ್ಕಾರಿ ಕಛೇರಿಗಳಲ್ಲಿ ಕ್ಯಾಂಟಿನ್ ನಡೆಸುತ್ತಿದ್ದಾರೆ. ಪಾರ್ಕಿಂಗ್ ನಿರ್ವಹಣೆ ಮಾಡುತ್ತಿದ್ದಾರೆ. ಕೊಚ್ಚಿನ್‌ನಲ್ಲಿ ಮೆಟ್ರೊ ಸ್ಟೇಷನ್ ಸಹ ನಿರ್ವಹಣೆ ಮಾಡುತ್ತಿದ್ದಾರೆ. ರಾಜ್ಯ ಸ್ಥಳೀಯ ಆಡಳಿತ ತರಬೇತಿ ಸಂಸ್ಥೆ (Kila)ಯಲ್ಲಿ ಅತಿಥಿ ಗೃಹ ನಿರ್ವಹಣೆ ಹಾಗೂ ಊಟ ತಿಂಡಿ ಸರಬರಾಜು ಮಾಡುತ್ತಿದ್ದಾರೆ. ತಿರುವಂತನಪುರ ಸಚಿವಾಲಯದ ಕಛೇರಿಯಲ್ಲಿ ಕಾಫೀ, ಟೀ, ತಿಂಡಿ-ತಿನಿಸು ಸರಬರಾಜು ಮಾಡುತ್ತಿದ್ದಾರೆ.
- ಕುಟುಂಬಶ್ರೀ ಸಂಘದವರಿಗೆ ತಮ್ಮ ಉತ್ಪನ್ನಗಳಿಗೆ ಮಾರ್ಕೆಟಿಂಗ್ ನೆರವು ನೀಡಲಾಗುತ್ತಿದೆ. ಆನ್‌ಲೈನ್ ಮಾರ್ಕೆಟಿಂಗ್ ಸಹ ಮಾಡುತ್ತಿದ್ದಾರೆ(ಅಮೆಜಾನ್, ಫ್ಲಿಪ್‌ಕಾರ್ಟ್ ಜೊತೆ ವ್ಯವಹಾರ ವಹಿವಾಟು ನಡೆಸುತ್ತಿದ್ದಾರೆ).
- ಆರ್ಥಿಕ ಚಟುವಟಿಕೆ ನಿರ್ವಹಣೆಗೆ ತರಬೇತಿ ನೀಡಲಾಗುತ್ತಿದೆ. ಹಾಗಾಗಿ ಹಣಕಾಸು ನಿರ್ವಹಣೆಯನ್ನು ಉತ್ತಮವಾಗಿ ನಡೆಸುತ್ತಿದ್ದಾರೆ. ಕುಟುಂಬಶ್ರೀ ಸಂಘದವರು ಗ್ರಾಮ ಪಂಚಾಯತಿಗಳ ಯೋಜನೆಗಳ ಅನುಷ್ಠಾನದಲ್ಲಿ ಭಾಗಿಗಳಾಗುತ್ತಿದ್ದಾರೆ. ಕುಟುಂಬಶ್ರೀ ಕೇವಲ ಒಂದು ಕಾರ್ಯಕ್ರಮವಾಗದೆ ಕೇರಳ ರಾಜ್ಯದಲ್ಲಿ ಒಂದು ಆಂದೋಲನವಾಗಿದೆ.

## ಕೇರಳ ರಾಜ್ಯ ಸ್ಥಳೀಯ ಸರ್ಕಾರ ತರಬೇತಿ ಸಂಸ್ಥೆಗೆ (Kila) ಭೇಟಿ

- Kila ಕೇರಳ ರಾಜ್ಯ ಸ್ಥಳೀಯ ಸರ್ಕಾರದ ಎಲ್ಲಾ ಸಂಸ್ಥೆಗಳ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ನೀಡುವ ರಾಜ್ಯ ಸಂಸ್ಥೆಯಾಗಿದೆ. ಈ ಸಂಸ್ಥೆಯ ನಿರ್ದೇಶಕರಾದ ಡಾ॥ ಜಾಯ್ ಇಲಾಮನ್‌ರವರು ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿದರು. ಈ ವೇಳೆ ಸಂಸ್ಥೆಯ ಬೋಧಕ ವರ್ಗದವರು ಹಾಜರಿದ್ದರು. ಸಂಸ್ಥೆಯ ಪ್ರಮುಖ ಚಟುವಟಿಕೆಗಳು ಈ ಕೆಳಕಂಡಂತಿವೆ.
- ಸಂಸ್ಥೆಯ ವತಿಯಿಂದ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಸಂಸ್ಥೆಗೆ ಆಹ್ವಾನಿಸಿ ತರಬೇತಿ ನೀಡಲಾಗುತ್ತಿದೆ. ಜಿಲ್ಲಾ ಕೇಂದ್ರಗಳಲ್ಲಿಯೇ ತರಬೇತಿ ನೀಡಲಾಗುತ್ತಿದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿಯೂ ತರಬೇತಿ ನೀಡಲಾಗುತ್ತಿದೆ. ಸರ್ಕಾರದ ನೀತಿಯಂತೆ ತರಬೇತಿ ವಿಷಯವನ್ನು ನಿರ್ಧರಿಸಲಾಗುತ್ತಿದೆ.

- ತರಬೇತಿ ವಾರ್ಷಿಕ ಕ್ಯಾಲೆಂಡರ್ ತಯಾರಿಸಲಾಗುತ್ತದೆ. ತರಬೇತಿ ವಿಷಯ, ವಿನ್ಯಾಸ ಮಾಡಲಾಗುತ್ತದೆ. ತರಬೇತುದಾರರ ತರಬೇತಿ ನೀಡಲಾಗುತ್ತದೆ. ನಂತರ ಉದ್ದೇಶಿತ ಅಧಿಕಾರಿ, ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ನೀಡಲಾಗುತ್ತದೆ. ತರಬೇತಿ ಗುಣಮಟ್ಟದ ಬಗ್ಗೆ ಮೌಲ್ಯಮಾಪನ ನಡೆಸಲಾಗುತ್ತದೆ. ತರಬೇತಿ ನೀಡಲು ಸಂಸ್ಥೆಯಲ್ಲಿ ಉತ್ತಮ ಬೋಧಕ ವೃಂದವಿದೆ.
- ಉತ್ತಮ ತರಬೇತಿ ವ್ಯವಸ್ಥೆಗೆ ಈ ಕೆಳಕಂಡ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿರುತ್ತದೆ. 1) ಐಐಟಿ ಬಾಂಬೆ, 2)ಮಹಾತ್ಮ ಗಾಂಧಿ ವಿಶ್ವವಿದ್ಯಾನಿಲಯ, 3)ಕಲ್ಕತ್ತಾ ವಿಶ್ವವಿದ್ಯಾನಿಲಯ, 4)ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ.
- ಸಂಸ್ಥೆ ವತಿಯಿಂದ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ವಿಚಾರ ಸಂಕೀರಣಗಳನ್ನು ಏರ್ಪಡಿಸಿದೆ. ಸಂಸ್ಥೆ ವತಿಯಿಂದ ಹಲವಾರು ಪುಸ್ತಕಗಳನ್ನು ಹೊರತರಲಾಗಿದೆ. ಸಂಸ್ಥೆ ವತಿಯಿಂದ ಸ್ಥಳೀಯ ಸರ್ಕಾರದ ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯವಾಣಿ ತೆರೆಯಲಾಗಿದೆ. ಇದೊಂದು ಉಪಯುಕ್ತವಾದ ಕಾರ್ಯವಾಗಿದೆ.
- ತರಬೇತಿ ವಿಷಯಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳಲ್ಲದೇ, ಜಂಡರ್ ವಿಷಯಗಳು, ಮಹಿಳಾ ಸಬಲೀಕರಣ ವಿಷಯಗಳು, ಮಕ್ಕಳ ರಕ್ಷಣೆ, ಹಿರಿಯನಾಗರಿಕರ ರಕ್ಷಣೆ ವಿಷಯಗಳನ್ನು ಕುರಿತಂತೆ ವಿಶೇಷ ತರಬೇತಿಗಳನ್ನು ಏರ್ಪಡಿಸಲಾಗುತ್ತದೆ.
- ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಐ.ಎಸ್.ಓ. ಗುಣಮಟ್ಟದ ಸರ್ಟಿಫಿಕೇಟ್ ನೀಡುವ ವ್ಯವಸ್ಥೆ ಇರುತ್ತದೆ. ಈ ಪ್ರಕ್ರಿಯೆಗೆ ಹಲವಾರು ಉತ್ತಮ ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದೊಂದು ವಿನೂತನ ಕಾರ್ಯವಾಗಿದೆ.

### ತಕ್ಕುಂಕರ ಹಾಗೂ ನಡತರ ಗ್ರಾಮ ಪಂಚಾಯತಿಗಳಿಗೆ ಭೇಟಿ

- ತ್ರಿಚೂರು ಜಿಲ್ಲೆ ತಕ್ಕುಂಕರ ಹಾಗೂ ನಡತರ ಗ್ರಾಮ ಪಂಚಾಯತಿಗೆ ಭೇಟಿ ನೀಡಲಾಯಿತು. ಗ್ರಾಮ ಪಂಚಾಯತಿಗಳ ಜನಸಂಖ್ಯೆ ಅಂದಾಜು ಮೂವತ್ತು ಸಾವಿರ ಗ್ರಾಮ ಪಂಚಾಯತಿಯಲ್ಲಿ 18 ರಿಂದ 24 ಮಂದಿ ಸದಸ್ಯರಿದ್ದಾರೆ. ಇವರಲ್ಲಿ ಅರ್ಧದಷ್ಟು ಮಹಿಳೆಯರು.
- ತಕ್ಕುಂಕರ ಗ್ರಾಮ ಪಂಚಾಯತಿಯ ಅಧ್ಯಕ್ಷೆ ಮಹಿಳೆ, ನಡತರ ಗ್ರಾಮ ಪಂಚಾಯತಿಯ ಅಧ್ಯಕ್ಷ ಪುರುಷ. ಗ್ರಾಮ ಪಂಚಾಯತಿಗಳಿಗೆ ಸುಸಜ್ಜಿತವಾದ ಕಟ್ಟಡ ವ್ಯವಸ್ಥೆ ಇದೆ.
- ಗ್ರಾಮ ಪಂಚಾಯತಿಯ ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ, ಅಧೀಕ್ಷಕರು. ಲೆಕ್ಕ ಸಹಾಯಕರು ಹೀಗೆ ಸರ್ಕಾರಿ ನೌಕರರು ಹಾಗೂ ಕೆಲವು ಗ್ರಾಮ ಪಂಚಾಯತಿ ನೌಕರರು ಇದ್ದಾರೆ.
- ಗ್ರಾಮ ಪಂಚಾಯತಿಯಲ್ಲಿ ಸಾರ್ವಜನಿಕ ಕುಂದು ಕೊರತೆ ವಿಭಾಗ, ತೆರೆಯಲಾಗಿದೆ. ಇದನ್ನು ಫ್ರಂಟ್ ಆಫೀಸ್ ಎಂದು ಕರೆಯಲಾಗುತ್ತದೆ. ಈ ಕೇಂದ್ರದಲ್ಲಿ ಗ್ರಾಮ ಪಂಚಾಯತಿಯಲ್ಲಿ ದೊರಕುವ ಮಾಹಿತಿಗಳನ್ನು ನೀಡಲಾಗುವುದಲ್ಲದೆ, ಯೋಜನೆಗಳ ಬಗ್ಗೆ ಮಾಹಿತಿ ಸಹ ನೀಡಲಾಗುತ್ತದೆ.
- ಈ ಗ್ರಾಮ ಪಂಚಾಯತಿಗೆ ತೆರಿಗೆ ವರಮಾನ ಅಂದಾಜು 30 ರಿಂದ 50 ಲಕ್ಷ, 18 ರಿಂದ 25ಲಕ್ಷ ವೃತ್ತಿ ತೆರಿಗೆ ವರಮಾನವಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುದಾನ ಸೇರಿ 4.5 ಕೋಟಿಗೆ ಕ್ರಿಯಾಯೋಜನೆ ತಯಾರಿಸಿರುತ್ತಾರೆ. ನರೇಗಾ ಯೋಜನೆಯಡಿ ತಕ್ಕುಂಕರ ಗ್ರಾಮ ಪಂಚಾಯತಿ 5, ನಡತರ ಗ್ರಾಮ ಪಂಚಾಯತಿ 3 ಕೋಟಿ ವೆಚ್ಚ ಮಾಡಿರುತ್ತಾರೆ.
- ಗ್ರಾಮ ಪಂಚಾಯತಿ ವ್ಯಾಪ್ತಿಗೆ ಈ ಕೆಳಕಂಡ ಇಲಾಖೆಗಳ ಜವಾಬ್ದಾರಿ ನೀಡಲಾಗಿದೆ. 1) ಕೃಷಿ 2) ಪಶುಪಾಲನೆ 3) ಸಣ್ಣಕೈಗಾರಿಕೆ 4)ಸಾರ್ವಜನಿಕ ಕಾಮಗಾರಿಗಳು 5)ಬಡತನ

ನಿವಾರಣಾ ಕಾರ್ಯಕ್ರಮಗಳು 6) ಸಾಮಾಜಿಕ ಸುರಕ್ಷ ಯೋಜನೆಗಳು 7) ಪರಿಶಿಷ್ಟ ಜಾತಿ ಕಲ್ಯಾಣ 8) ಮಹಿಳಾ ಮತ್ತು ಮಕ್ಕಳ ಕಲ್ಯಾಣ 9) ಆರೋಗ್ಯ 10) ಕುಡಿಯುವ ನೀರು 11) ನೈರ್ಮಲ್ಯ 12) ಹಿರಿಯ ನಾಗರಿಕರ ಕಲ್ಯಾಣ 13) ಕಲೆ, ಸಾಹಿತ್ಯ, ಕ್ರೀಡೆ ಹಾಗೂ ಯುವಜನ ಸೇವೆ 14) ವಿಪತ್ತು ನಿರ್ವಹಣೆ.

- ಗ್ರಾಮ ಪಂಚಾಯತಿಗಳಲ್ಲಿ ಜನರ ಭಾಗವಹಿಸುವಿಕೆಯ ಮೂಲಕ ಯೋಜನೆ ತಯಾರಿಸಲಾಗುತ್ತದೆ. ಗ್ರಾಮ ಸಭೆಗಳಲ್ಲಿ ಯೋಜನೆಗಳ ಬಗ್ಗೆ ಚರ್ಚಿಸಲಾಗುತ್ತದೆ. ಫಲಾನುಭವಿಗಳ ಆಯ್ಕೆ ಮಾಡಲಾಗುತ್ತಿದೆ. ಗ್ರಾಮ ಸಭೆಯ ನಂತರ ವಿಷಯವಾರು ವರ್ಕಿಂಗ್ ಗ್ರೂಪ್‌ಗಳಲ್ಲಿ ಚರ್ಚಿಸಿ, ಯೋಜನೆ ಅಂತಿಮಗೊಳಿಸಲಾಗುತ್ತಿದೆ. ವರ್ಕಿಂಗ್ ಗ್ರೂಪ್‌ಗಳಲ್ಲಿ ಸ್ಥಳೀಯ ಚುನಾಯಿತ ಸದಸ್ಯರಲ್ಲದೆ, ವಿವಿಧ ಕ್ಷೇತ್ರದ ಗಣ್ಯರು ಸ್ವಯಂ ಸೇವಾ ಸಂಸ್ಥೆ ಸದಸ್ಯರು ಕುಟುಂಬಶ್ರೀ ಸದಸ್ಯರು ಇರುತ್ತಾರೆ.
- ಗ್ರಾಮ ಪಂಚಾಯತಿ ಸ್ಥಾಯಿ ಸಮಿತಿಗಳಲ್ಲಿ ಚರ್ಚಿಸಿ ಗ್ರಾಮ ಪಂಚಾಯತಿ ಸಭೆಗಳಲ್ಲಿ ಅಂತಿಮವಾಗಿ ಅನುಮೋದನೆ ನೀಡಲಾಗುತ್ತದೆ. ಗ್ರಾಮ ಪಂಚಾಯತಿ ಸಭೆ ಅನುಮೋದನೆಯ ನಂತರ ಕ್ರಿಯಾಯೋಜನೆಯನ್ನು ವಿವಿಧ ಇಲಾಖೆಗಳ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.
- ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗುತ್ತದೆ. ಯೋಜನೆಗಳ ಅನುಷ್ಠಾನದಲ್ಲಿ ಕುಟುಂಬಶ್ರೀ ಸದಸ್ಯರ ನೆರವು ಪಡೆಯಲಾಗುತ್ತದೆ. ಕುಟುಂಬಶ್ರೀ ಯೋಜನೆ ಸದಸ್ಯರು ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.
- ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳ ಮಹಿಳೆಯರ ಹಾಗೂ ಹಿರಿಯ ನಾಗರಿಕರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಿರಿಯ ನಾಗರಿಕರಿಗಾಗಿ ಕಾಲಿಂಗ್ ಬೆಲ್ ಯೋಜನೆ ರೂಪಿಸಲಾಗಿದೆ. ಹಿರಿಯ ನಾಗರಿಕರು ತಮಗೆ ಯಾವುದೇ ರೀತಿಯ ನೆರವು ಬೇಕೆನಿಸಿದಾಗ ಕಾಲಿಂಗ್ ಬೆಲ್ ಒತ್ತಿದರೆ ಕೂಡಲೇ ಸ್ವಯಂ ಸೇವಕರು ನೆರವಿಗೆ ಧಾವಿಸುತ್ತಾರೆ. ಇದೊಂದು ವಿನೂತನ ಹಾಗೂ ಉತ್ತಮ ವ್ಯವಸ್ಥೆಯಾಗಿದೆ.
- ಅಂಗನವಾಡಿಗಳಿಗೆ ಎ.ಸಿ. ಸೇರಿದಂತೆ ಅತ್ಯುತ್ತಮ ಪಾಠೋಪಕರಣ, ಪೀಠೋಪಕರಣ, ಆಟೋಪಕರಣಗಳನ್ನು ಒದಗಿಸಲಾಗಿದೆ. ಕುಡಿಯುವ ನೀರು, ಅಡುಗೆ ಮನೆ, ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ.
- ಸ್ಥಳೀಯ ಆಸ್ಪತ್ರೆಗಳು ಗ್ರಾಮ ಪಂಚಾಯತಿ ಮೇಲುಸ್ತುವಾರಿಯಲ್ಲಿ ನಡೆಯುತ್ತಿವೆ. ಆಸ್ಪತ್ರೆಗಳಲ್ಲಿ ಉಚಿತ ಔಷಧಿ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪ್ರಾಥಮಿಕ ಆಸ್ಪತ್ರೆಗಳಲ್ಲಿ ಸುಸಜ್ಜಿತ ಲ್ಯಾಬೊರೆಟರಿ ವ್ಯವಸ್ಥೆ ಕಲ್ಪಿಸಲಾಗಿದೆ. ಹೆರಿಗೆ ಸಹ ಮಾಡಿಸಲಾಗುತ್ತದೆ. ಕನಿಷ್ಠ ಮಟ್ಟದ ಸರ್ಜರಿ ಸಹ ಮಾಡಿಸಲಾಗುತ್ತಿದೆ.
- ಗ್ರಾಮ ಪಂಚಾಯತಿಗಳಲ್ಲಿ ಲೆಕ್ಕ ಪತ್ರ ನಿರ್ವಹಣೆ ಪಾರದರ್ಶಕವಾಗಿಡಲಾಗಿದೆ. ಕಾಮಗಾರಿ ಅನುಷ್ಠಾನದ ಸಾಮಾಜಿಕ ಪರಿಶೋಧನೆಯನ್ನು ಸಹ ಮಾಡಲಾಗುತ್ತದೆ. ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿರುತ್ತದೆ. ಕಾಮಗಾರಿಗಳ ಹಣದ ದುರುಪಯೋಗ, ಕರ್ತವ್ಯಲೋಪ ಪ್ರಮಾಣ ಕಡಿಮೆ ಇರುತ್ತದೆ.
- ನಡತರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಟುಂಬಶ್ರೀ ಸದಸ್ಯರು ನಡೆಸುತ್ತಿರುವ ಜಿಮ್ ಹಾಗೂ ಬ್ಯೂಟಿ ಪಾರ್ಲರ್‌ಗೆ ಭೇಟಿ ನೀಡಲಾಯಿತು. ಜಿಮ್ ಹಾಗೂ ಬ್ಯೂಟಿ ಪಾರ್ಲರ್‌ಗೆ ಚೆನ್ನಾಗಿ ನಡೆಯುತ್ತಿದೆ. ಜಿಮ್ ನಡೆಸುತ್ತಿರುವ ಕುಟುಂಬಶ್ರೀ ಮಹಿಳೆ ಪ್ರತಿ ತಿಂಗಳು ರೂ.20 ರಿಂದ 30 ಸಾವಿರ ರೂ ಗಳಿಸುತ್ತಿರುವುದಾಗಿ ತಿಳಿಸಿದರು.
- ನಡತರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಟುಂಬಶ್ರೀ ಸದಸ್ಯರು ನಡೆಸುತ್ತಿರುವ ಡೈರಿ ಘಟಕಕ್ಕೆ ಭೇಟಿ ನೀಡಲಾಯಿತು. 11 ಹಸುಗಳಿದ್ದು, ಪ್ರತಿ ದಿನ 120 ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಇಷ್ಟು ಹಾಲನ್ನು

ಮನೆಯಲ್ಲಿಯೇ ಮಾರಾಟ ಮಾಡಲಾಗುತ್ತಿದೆ. ಇದೊಂದು ಯಶಸ್ವಿ ಪ್ರಯೋಗ.

## ತ್ರಿಚೂರು ಜಿಲ್ಲಾ ಪಂಚಾಯತಿಗೆ ಭೇಟಿ

- ತ್ರಿಚೂರು ಜಿಲ್ಲಾ ಪಂಚಾಯತಿ ಭೇಟಿಯನ್ನು ತ್ರಿಚೂರಿನಲ್ಲಿರುವ ವಿಜ್ಞಾನ ಸಾಗರ ಸೈನ್ಸ್ ಅಂಡ್ ಟೆಕ್ನಾಲಜಿ ಪಾರ್ಕ್ ಕಟ್ಟಡದಲ್ಲಿ ಅಧ್ಯಕ್ಷರು ಹಾಗೂ ಅಧಿಕಾರಿಗಳ ಜೊತೆ ಸಭೆ ಏರ್ಪಡಿಸಲಾಗಿತ್ತು. ಮಹಿಳಾ ಅಧ್ಯಕ್ಷರು ಅತ್ಯಂತ ಸಮರ್ಥವಾಗಿ ಸಭೆಯನ್ನು ನಡೆಸಿದರು. ಇವರು ಹಿಂದೆ ಕುಟುಂಬಶ್ರೀ ಸದಸ್ಯರಾಗಿದ್ದು, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿಯಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಇರುತ್ತದೆ.
- ಆರೋಗ್ಯ, ಶಿಕ್ಷಣ, ಮಹಿಳಾ ಮಕ್ಕಳ ಕಲ್ಯಾಣ, ಕೃಷಿ, ಪಶುಪಾಲನಾ, ಇಂಜಿನಿಯರ್ ಇಲಾಖೆಗಳು ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗಳ ಕಾರ್ಯಗಳನ್ನು ವಿವರಿಸಿದರು.
- ಜಿಲ್ಲಾ ಪಂಚಾಯತಿ ವತಿಯಿಂದ ಸ್ಥಾಪಿಸಿರುವ ವಿಜ್ಞಾನಸಾಗರ ಸೈನ್ಸ್ ಅಂಡ್ ಟೆಕ್ನಾಲಜಿ ಪಾರ್ಕಿಗೆ ಭೇಟಿ ನೀಡಲಾಯಿತು. ಜಿಲ್ಲಾ ಪಂಚಾಯತಿ ವತಿಯಿಂದ 4.5 ಕೋಟಿ ವೆಚ್ಚದಲ್ಲಿ ಸ್ಥಾಪಿಸಿರುವ ಇದೊಂದು ವಿನೂತನ ಯೋಜನೆ. ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಜ್ಞಾನ, ತಿಳುವಳಿಕೆ ಮೂಡಿಸುವ ದಿಸೆಯಲ್ಲಿ ಹಲವಾರು ಸಚಿತ್ರ ಉಪಕರಣಗೊಳಗೊಂಡ ಪ್ರಯೋಗಗಳನ್ನು ಆಕರ್ಷಕವಾಗಿ ತೋರಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರತಿದಿನ ತಂಡಗಳಲ್ಲಿ ಶಾಲಾ ವಿದ್ಯಾರ್ಥಿಗಳು ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆ ಮಾಡಿರುತ್ತಾರೆ. ವರ್ಷಕ್ಕೆ ಎರಡು ಬಾರಿ ವಾರಗಟ್ಟಲೆ ವಿಜ್ಞಾನ ಶಿಬಿರಗಳನ್ನು ಏರ್ಪಡಿಸಿ ಹೆಚ್ಚಿನ ತಿಳುವಳಿಕೆ ಹಾಗೂ ಜ್ಞಾನ ನೀಡುವ ಕಾರ್ಯಕ್ರಮ ಮಾಡಿರುತ್ತಾರೆ. ಇದೊಂದು ಅತ್ಯುತ್ತಮವಾದ ಯಶಸ್ವಿ ಪ್ರಯೋಗವಾಗಿದೆ.
- ಒಟ್ಟಾರೆಯಾಗಿ ಕೇರಳ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ. ಪಂಚಾಯತ್ ರಾಜ್ ವ್ಯವಸ್ಥೆಯ ಯಶಸ್ವಿ ಕಾರ್ಯನಿರ್ವಹಣೆಗೆ ಪ್ರಮುಖ ಅಂಶಗಳನ್ನು ಹೀಗೆ ಗುರುತಿಸಬಹುದು.

1) ಜನರಲ್ಲಿ ತಿಳುವಳಿಕೆ ಹೆಚ್ಚಿನ ಮಟ್ಟದಲ್ಲಿರುವುದು. ಜನರ ಭಾಗವಹಿಸುವಿಕೆ ಹೆಚ್ಚಿನ ಪ್ರಮಾಣ ದಲ್ಲಿರುವುದು. ಕುಟುಂಬಶ್ರೀ ಯೋಜನೆಯಿಂದಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿನ ಮಟ್ಟದಲ್ಲಿರುವುದು.

2) ಚುನಾಯಿತ ಪ್ರತಿನಿಧಿಗಳ ತಿಳುವಳಿಕೆ ಹೆಚ್ಚಿನ ಮಟ್ಟದಲ್ಲಿರುವುದು. ಮಹಿಳಾ ಚುನಾಯಿತ ಪ್ರತಿನಿಧಿಗಳು ಕುಟುಂಬಶ್ರೀ ಹಿನ್ನೆಲೆಯಿಂದ ಬಂದವರಾಗಿದ್ದು, ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಪ್ರಬುದ್ಧತೆ ಪಡೆದಿರುವುದು.

3) ಗ್ರಾಮ ಸಭೆಗಳಿಗೆ ಹೆಚ್ಚಿನ ಜನರು ಭಾಗವಹಿಸುವ ಮೂಲಕ ಯೋಜನೆಗಳ ತಯಾರಿಕೆ, ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿ ನಡೆಯುತ್ತಿರುವುದು. ಮತ್ತು ಗ್ರಾಮ ಸಭೆಗಳ ತೀರ್ಮಾನಗಳಿಗೆ ಎಲ್ಲರು ಗೌರವಿಸಿ ಬದ್ಧರಾಗಿರುವುದು.

4) ಯೋಜನೆಗಳ ತಯಾರಿಕೆ ಹಾಗೂ ಅನುಷ್ಠಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಸ್ಥಳೀಯ ಕುಟುಂಬಶ್ರೀ ಗುಂಪುಗಳು, ಸ್ಥಳೀಯ ನಿವಾಸಿಗಳಾದ ನಿವೃತ್ತ ತಂತ್ರಜ್ಞರು, ಬುದ್ಧಿಜೀವಿಗಳು ಪಾಲ್ಗೊಂಡು ತಮ್ಮ ಅನುಭವಗಳನ್ನು ಸ್ವಯಂ ಪ್ರೇರಣೆಯಿಂದ ತೊಡಗಿಸುತ್ತಿರುವುದು.

5) ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ನಂಬಿಕೆ ಇರಿಸಿ, ಚುನಾಯಿತ ಪ್ರತಿನಿಧಿಗಳಿಗೆ ಮನ್ನಣೆ ನೀಡಿ, ಅಧಿಕಾರಿ ವರ್ಗ ಕಾರ್ಯನಿರ್ವಹಿಸುತ್ತಿರುವುದು.

# ಮರಗಡ್ಡಿ ರೇಷ್ಮೆ ತೋಟ

ವರದಿ



ಪ್ರಶಾಂತ್ ಎನ್.

ಜಿಲ್ಲಾ ಐ.ಇ.ಸಿ. ಸಂಯೋಜಕರು
ಜಿಲ್ಲಾ ಪಂಚಾಯತ್
ಚಿಕ್ಕಬಳ್ಳಾಪುರ.

**ಕುಪ್ಪಹಳ್ಳಿ ಗ್ರಾಮ ಪಂಚಾಯತಿಯು ಪಟ್ಟಕ್ಕೆ ಹೊಂದಿಕೊಂಡಂತೆ ಇದ್ದು, ನಗರ ವ್ಯಾಪ್ತಿಯಿಂದ 5 ಕಿ.ಮೀ ದೂರದಲ್ಲಿದೆ ಕುಪ್ಪಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಮುನಿಯಪ್ಪ ಬಿನ್ ಮುನಿವೆಂಕಟಪ್ಪ ಎಂಬ ರೈತರೊಬ್ಬರು ತಮ್ಮ ಮುಕ್ಕಾಲು ಎಕರೆ ಭೂಮಿಯಲ್ಲಿ (30 ಗುಂಟೆ) 10x10 ಅಂತರದಲ್ಲಿ ಮರಗಡ್ಡಿ ಪದ್ಧತಿಯಲ್ಲಿ ರೇಷ್ಮೆ ಬೆಳೆದಿದ್ದಾರೆ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಭಾಗದ ಜನರ, ಕೂಲಿಕಾರರ ಹಾಗೂ ರೈತರ ಅಭಿವೃದ್ಧಿಗೆ ಪೂರಕವಾಗಿದ್ದು, ಅದರಲ್ಲೂ ಗಡಿಭಾಗದ ಜಿಲ್ಲೆಗಳಿಗೆ ಮತ್ತು ನೀರಿನ ಬವಣೆಯಿಂದ ಬಳಲುತ್ತಿರುವ ಪ್ರದೇಶಗಳಿಗೆ ಈ ಯೋಜನೆ ವರದಾನವಾಗಿದೆ.

ಅಂತಹ ಜಲಕ್ಷಾಮವನ್ನು ಎದುರಿಸುತ್ತಿರುವ ಚಿಕ್ಕಬಳ್ಳಾಪುರ ಜಿಲ್ಲೆಯು ಸಹ ಪ್ರಗತಿ ಪಥದಲ್ಲಿ ಸಾಗಲು ಈ ಯೋಜನೆ ಕೊಡುಗೆ ಮಹತ್ತರದ್ದಾಗಿದೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ರೇಷ್ಮೆ ಮತ್ತು ಹಾಲು ಉತ್ಪಾದನೆಗೆ ಹೆಚ್ಚು ಪ್ರಾಮುಖ್ಯತೆ ಪಡೆದಿದ್ದು, ಇಂತಹ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಾಂಪ್ರದಾಯಿಕ ರೇಷ್ಮೆ ಬೆಳೆ ಉತ್ಪಾದನೆಯಿಂದ ಹೊರಬಂದು ಆಧುನಿಕ ರೀತಿಯಲ್ಲಿ ರೇಷ್ಮೆ ಬೆಳೆಯಲು ಈ ಯೋಜನೆ ತುಂಬಾ ಸಹಕಾರಿಯಾಗಿದೆ. ಪ್ರಸ್ತುತ 2016-17ನೇ ಸಾಲಿನಿಂದ ಮರಗಡ್ಡಿ ಪದ್ಧತಿಯಲ್ಲಿ ರೇಷ್ಮೆ ಬೆಳೆಯಲು ಯೋಜನೆಯ ಒಗ್ಗೂಡಿಸುವಿಕೆಯಡಿ ರೇಷ್ಮೆ ಇಲಾಖೆಯಿಂದ ಅವಕಾಶ ಮಾಡಿರುವುದ-ರಿಂದ, ಜಿಲ್ಲೆಯಲ್ಲಿ ಮರಗಡ್ಡಿ ಪದ್ಧತಿ ತೋಟ ಬೆಳೆದು ಇದರಿಂದ ಆರ್ಥಿಕ ಸಬಲತೆ ಹೊಂದಿರುವ ಅನೇಕ ರೈತರಿದ್ದು, ಅವುಗಳಲ್ಲಿ ತುಂಬಾ ವಿಶೇಷವಾಗಿ ತೋಟ ನಿರ್ವಹಣೆ ಮಾಡುವ ಮೂಲಕ ಅಭಿವೃದ್ಧಿ ಸಾಧಿಸಿರುತ್ತಾರೆ.



ಚಿಕ್ಕಬಳ್ಳಾಪುರ ತಾಲ್ಲೂಕಿನ ಕುಪ್ಪಹಳ್ಳಿ ಗ್ರಾಮ ಪಂಚಾಯತಿಯು ಪಟ್ಟಣಕ್ಕೆ ಹೊಂದಿಕೊಂಡಂತೆ ಇದ್ದು, ನಗರ ವ್ಯಾಪ್ತಿಯಿಂದ 5ಕಿ.ಮೀ ದೂರದಲ್ಲಿದ್ದು, ಕುಪ್ಪಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಮುನಿಯಪ್ಪ ಬಿನ್ ಮುನಿವೆಂಕಟಪ್ಪ ಎಂಬ ರೈತರೊಬ್ಬರು ತಮ್ಮ ಮುಕ್ಕಾಲು ಎಕರೆ ಭೂಮಿಯಲ್ಲಿ (30 ಗುಂಟೆ) 10**x**10 ಅಂತರದಲ್ಲಿ ಮರಗಡ್ಡಿ ಪದ್ಧತಿಯಲ್ಲಿ ರೇಷ್ಮೆ ಬೆಳೆದಿದ್ದಾರೆ 2017-18ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ

ಮರಗಡ್ಡಿ ಬೆಳೆಯಲು ಮುಂದಾಗಿದ್ದು, ಈ ಹಿಂದೆ ತಮ್ಮ ಜಮೀನಿನಲ್ಲಿ ಮಳೆಗಾಲದಲ್ಲಿ ಮಾತ್ರ ರಾಗಿ/ ಜೋಳ ಬೆಳೆಯುತ್ತಿದ್ದರು. ರಾಗಿ ಬೆಳೆಯಾದರೆ ರಾಗಿ ಮನೆ ಬಳಕೆಗೆ ಉಳಿಸಿಕೊಂಡು ಮೇವನ್ನು ದನಕರುಗಳಿಗೆ ಬಳಸುತ್ತಿದ್ದೆ. ಜೋಳ ಬೆಳೆದರೆ ಉತ್ತಮ ಮಳೆಯಾದಲ್ಲಿ 6 ರಿಂದ 8 ಕ್ವಿಂಟಾಲ್ ಜೋಳ ಬೆಳೆ ಬರುತ್ತಿತ್ತು. ಆ ಸಮಯದಲ್ಲಿ ಜೋಳದಲ್ಲಿ 10 ರಿಂದ 12 ಸಾವಿರ ಆದಾಯ ಸಿಕ್ಕರೂ ಖರ್ಚೆಲ್ಲಾ ಕಳೆದು 4 ರಿಂದ 5 ಸಾವಿರ ಉಳಿಯುತ್ತಿತ್ತು. ಇಂತಹ ಸಮಯದಲ್ಲಿ ಮರಗಡ್ಡಿ ಪದ್ದತಿಯಲ್ಲಿ ತೋಟ ಬೆಳೆಯಲು ತೀರ್ಮಾನಿಸಿ 30 ಗುಂಟೆ ಜಮೀನಿನಲ್ಲಿ 10**x**10 ಅಂತಹದಲ್ಲಿ 330 ಸಸಿಗಳನ್ನು ನಾಟಿ ಮಾಡಿರುತ್ತಾರೆ ಮತ್ತು ಇವರಿಗೆ ನೀರಾವರಿ ಇಲ್ಲದಿದ್ದರೂ ಮಳೆಗಾಲವಾದ್ದರಿಂದ ಸಸಿಗಳು ಚೆನ್ನಾಗಿ ನಾಟಿಯಾಗಿ ಉತ್ತಮ ಬೆಳವಣಿಗೆ ಹೊಂದತೊಡಗಿದವು. ನರೇಗಾ ಯೋಜನೆಯಡಿ ಒಟ್ಟು ರೂ. 44192/– ಹಣ ಸಿಕ್ಕಿತು ಮತ್ತು 154 ಮಾನವ ದಿನ ಸೃಜನೆಯಾದವು. ಬೇಸಿಗೆ ಕಾಲ ಹತ್ತಿರ ಬಂದಂತೆ ಪ್ರತಿಯೊಂದು ಗಿಡದ ಬುಡಕ್ಕೆ ಒಂದು ಲೀಟರ್‌ನ ವಾಟರ್ ಕ್ಯಾನ್ ಖಾಲಿ ಬಾಟಲ್‌ಗಳನ್ನು ನೇತು ಹಾಕಲಾಯಿತು ಮತ್ತು ಆ ಬಾಟಲಿಗೆ ಒಂದು ಚಿಕ್ಕ ರಂಧ್ರ ಕೊರೆಯಲಾಯಿತು. ನಂತರ ಮನೆಯಲ್ಲಿ ಮನೆ ಸ್ವಚ್ಚಗೊಳಿಸಿದ ನೀರು, ಬಟ್ಟೆ ತೊಳೆದ ನೀರು, ದನಕರುಗಳನ್ನು ಸ್ವಚ್ಚಗೊಳಿಸಿದ ನೀರನ್ನು ಒಂದು ಕಡೆ ಶೇಖರಿಸಿಟ್ಟುಕೊಂಡು ಆ ನೀರನ್ನು ತೋಟಕ್ಕೆ ಸಾಗಿಸಿ ಗಿಡದ ಬುಡದಲ್ಲಿ ನೇತಾಕಿರುವ ಬಾಟಲ್ ಒಳಗೆ ಹಾಕುತ್ತಿದ್ದರಿಂದ ಆ ನೀರು ಬಾಟಲ್‌ನಲ್ಲಿ ಕೊರೆದಿರುವ ರಂಧ್ರದ ಮೂಲಕ ಹನಿ ನೀರಾವರಿ ತರಾ ಹನಿ ಹನಿ ಬಿದ್ದು, ಗಿಡಕ್ಕೆ ನೀರುಣಿಸಲಾಗುತ್ತಿತ್ತು. ಇದೇ ರೀತಿ ಸರತಿ 2 ರಿಂದ 3 ದಿನಗಳಿಗೊಮ್ಮೆ ಒಂದೊಮ್ಮೆ ಬಳಸಿದ ನೀರನ್ನು ಪುನರಾವರ್ತಿತವಾಗಿ ಬಾಟಲ್‌ಗಳಿಗೆ ತುಂಬಿಸುತ್ತಿದ್ದರಿಂದ ಪ್ರತಿಯೊಂದು ಗಿಡಕ್ಕೂ ನೀರುಣಿಸಲು ಸಾಧ್ಯವಾಯಿತು ಹಾಗೂ ಗಿಡವೂ ಸಹ ಉತ್ಕೃಷ್ಟವಾಗಿ ಬೆಳೆದು ಉತ್ತಮ ಸೊಪ್ಪನ್ನು ಪಡೆಯಲು ಸಾಧ್ಯವಾಯಿತು.

ಒಟ್ಟಾರೆ ಈ ಹಿಂದೆ ಬೆಳೆಯುತ್ತಿದ್ದ ಬೆಳೆಗಳಿಂದ ಅಲ್ಪ ಲಾಭ ಕೆಲವೊಮ್ಮೆ ಮಳೆ ಕೊರತೆಯಿಂದ ನಷ್ಟವೇ ಉಂಟಾಗುತ್ತಿತ್ತು. ಆದರೆ ಮರಗಡಿ ಪದ್ಧತಿಯಲ್ಲಿ ರೇಷ್ಮೆ ನಾಟಿ ಮಾಡಿಕೊಂಡು ಮನೆಯಲ್ಲಿ ಬಳಕೆಯಾದ ನೀರನ್ನುಣಿಸಿ ತೋಟ ನಿರ್ವಹಣೆ ಮಾಡಿದ್ದರಿಂದ ಪ್ರಸ್ತುತ ಪ್ರತಿ ಎರಡು ತಿಂಗಳಿಗೊಮ್ಮೆ ಕನಿಷ್ಠ 3 ರಿಂದ 4 ಟನ್ ರೇಷ್ಮೆ ಸೊಪ್ಪು ಸಿಗುತ್ತಿದೆ. ಸದ್ಯಕ್ಕೆ ಹುಳು ಸಾಕಾಣಿಕೆ ಮಾಡಲು ಹುಳು ಮನೆ ಇಲ್ಲದಿರುವುದರಿಂದ ಪ್ರತಿ ಬಾರಿ ಸೊಪ್ಪು ಮಾರಾಟ



ಮಾಡಿದಾಗ 8 ರಿಂದ 9 ಸಾವಿರ ಆದಾಯ ಬರುತ್ತಿದೆ. ಇದರಲ್ಲಿ ಸೊಪ್ಪು ಬೆಳವಣಿಗೆಗೆ 1 ರಿಂದ 2 ಸಾವಿರ ಖರ್ಚಾಗುತ್ತಿದ್ದು ಉಳಿದಿದ್ದು, ಅಭಿವೃದ್ಧಿಗೆ ಪೂರಕವಾಗುತ್ತಿದೆ. ಅಲ್ಲದೆ ಅಂತರ ಬೆಳೆಯಾಗಿ ಹುರುಳಿ, ಮೇವಿಗಾಗಿ ಮೇಪಿಯರ್ ಸಹ ಗಿಡಗಳ ಮಧ್ಯೆ ಬೆಳೆಯಬಹುದಾಗಿದ್ದು, ಒಟ್ಟಾರೆ ಎರಡು ವರ್ಷಗಳಲ್ಲಿ ರೇಷ್ಮೆ ಬೆಳೆಯಿಂದ ಗಳಿಸಿದ ಲಾಭದಿಂದ 100 ಚಂದ್ರಿಕೆ (ಹುಳು ಹಣ್ಣಾದಾಗ ಗೂಡು ಕಟ್ಟಲು ಬಿಡುವ ಸ್ಥಳ) ಖರೀದಿಸಿದ್ದು, ನಮ್ಮೂರಿನಲ್ಲಿ ರೇಷ್ಮೆ ಹೆಚ್ಚಾಗಿರುವುದರಿಂದ ಚಂದ್ರಿಕೆ ಬಾಡಿಗೆಗೆ ನೀಡಿ ಇದರಿಂದ ಪ್ರತಿ ತಿಂಗಳು 15 ರಿಂದ 20 ಸಾವಿರ ಆದಾಯಗಳಿಸುತ್ತಿದ್ದೇನೆ. ಒಟ್ಟಾರೆ ರೇಷ್ಮೆ ಬೆಳೆ ನಮ್ಮ ಕೈ ಹಿಡಿದಿದ್ದು, ಇದರಿಂದ ಬೇರೆಯವರು ಪ್ರೇರೇಪಣೆ ಹೊಂದಿದ್ದು ಅವರು ಕೂಡ ತಮ್ಮ ಭೂಮಿಯಲ್ಲಿ ಮರಗಡ್ಡಿ ಪದ್ದತಿಯಲ್ಲಿ ರೇಷ್ಮೆ ಬೆಳೆಯಲು ಮುಂದಾಗಿದ್ದಾರೆ ಹಾಗೂ 2 ಮತ್ತು 3ನೇ ವರ್ಷದ ನಿರ್ವಹಣೆಗಾಗಿ ಸಹ ಯೋಜನೆಯಡಿ ಹಣ ನೀಡುತ್ತಿರುವುದರಿಂದ ಈ ಯೋಜನೆ ರೈತರ ಪಾಲಿಗೆ ಸಂಜೀವಿನಿಯಾಗಿದೆ ಎಂದು ರೈತ ಮುನಿಯಪ್ಪ ತಿಳಿಸುತ್ತಾರೆ. ■

ವರದಿ



ಮುರಳಿ.ಕೆ

ಸಂಶೋಧನ ಅಧಿಕಾರಿ
ರಾಜ್ಯ ಪಂಚಾಯತ್
ಸಂಪನ್ಮೂಲ ಕೇಂದ್ರ,
ಬೆಂಗಳೂರು
ಮೋ:8867337909

ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುವುದರ ಜೊತೆಗೆ ಜನರನ್ನು ಗ್ರಾಮ ಪಂಚಾಯಿತಿಗಳ ಯೋಜನಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬೇಕು, ಜನರ ಜೀವನೋಪಾಯದ ಗುಣಮಟ್ಟವನ್ನು ಹೆಚ್ಚಿಸುವ ಅವಕಾಶಗಳನ್ನು ಗುರ್ತಿಸುವುದರೊಂದಿಗೆ ಉದ್ಯೋಗವಕಾಶಗಳನ್ನು ಮತ್ತಷ್ಟು ಉತ್ತೇಜಿಸಬೇಕು,

# ಬಡತನ ನಿರ್ಮೂಲನೆ

ಜನರ ಜೀವನೋಪಾಯ ಗುಣಮಟ್ಟವನ್ನು ಹೆಚ್ಚಿಸುವ ಜೊತೆಗೆ ಉದ್ಯೋಗಾವಕಾಶಗಳನ್ನು ಸೃಷ್ಠಿಸುವ ಮೂಲಕ ಬಡತನ ಮತ್ತು ಹಸಿವು ಮುಕ್ತ ಗ್ರಾಮಗಳನ್ನಾಗಿ ಮಾಡಬೇಕೆಂದು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಮುಖ್ಯ ಆರ್ಥಿಕ ಸಲಹೆಗಾರಾರಾದ ಡಾ. ಸೀಮಾಗೌರ್ ಹೇಳಿದರು. ಮೂರು ದಿನಗಳ ರಾಜ್ಯ ಭೇಟಿಯಲ್ಲಿ ರಾಮನಗರ ಜಿಲ್ಲೆಯ ಸೋಮದ್ಯಾಪನಹಳ್ಳಿ, ಸಿಂಗೀರಾಜಿಪುರ ಗ್ರಾಮ ಪಂಚಾಯಿತಿ ಮತ್ತು ಕೋಲಾರ ಜಿಲ್ಲೆಯ ನರಸಾಪುರ ಗ್ರಾಮ ಪಂಚಾಯಿತಿಗಳಲ್ಲಿ ಕೇಂದ್ರ ಸರ್ಕಾರದ ಕಾರ್ಯಕ್ರಮಗಳಾದ ಸಂಜೀವಿನಿ, ಪ್ರಧಾನ ಮಂತ್ರಿ ಅವಾಸ್ ಯೋಜನೆ(ಗ್ರಾಮೀಣ), ಮಿಷನ್ ಅಂತ್ಯೋದಯ, ನಮ್ಮ ಗ್ರಾಮ ನಮ್ಮ ಯೋಜನೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, 14ನೇ ಹಣಕಾಸು ಅನುದಾನ ಬಳಕೆ, ತೆರಿಗೆ ವಸೂಲಾತಿ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ರಾಜ್ಯದಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ ಅಧಿಕಾರಿಗಳು, ಜನಪ್ರತಿನಿಧಿಗಳು, ಗ್ರಾಮೀಣಾ ಭಾಗದ ಸ್ವ-ಸಹಾಯ ಗುಂಪುಗಳ ಜನರೊಂದಿಗೆ ಚರ್ಚೆಯನ್ನು ನಡೆಸಿದರು.




ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುವುದರ ಜೊತೆಗೆ ಜನರನ್ನು ಗ್ರಾಮ ಪಂಚಾಯಿತಿಗಳ ಯೋಜನಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬೇಕು, ಜನರ ಜೀವನೋಪಾಯದ ಗುಣಮಟ್ಟವನ್ನು ಹೆಚ್ಚಿಸುವ ಅವಕಾಶಗಳನ್ನು ಗುರ್ತಿಸುವುದರೊಂದಿಗೆ ಉದ್ಯೋಗವಕಾಶಗಳನ್ನು ಮತ್ತಷ್ಟು ಉತ್ತೇಜಿಸಬೇಕು, ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಒತ್ತು ನೀಡಬೇಕು.

ಗ್ರಾಮಗಳಲ್ಲಿ ಸಮಸ್ಯೆಗಳು ಎದುರಾದರೆ ಜನರು ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಕೇಳುತ್ತಾ, ಗ್ರಾಮೀಣಾ ಜನರ ಅಭಿವೃದ್ಧಿಯಲ್ಲಿ ಗ್ರಾಮ

ಪಂಚಾಯಿತಿಗಳ ಪಾತ್ರ ಮಹತ್ವದಾಗಿದ್ದು, ಪಂಚಾಯಿತಿ ಮಟ್ಟದ ಅಧಿಕಾರಿಗಳು ಪ್ರಾಮಾಣಿಕವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ವಿಶೇಷ ಅಧಿಕಾರಗಳನ್ನು ನೀಡಿ, ಸ್ವಂತ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಒತ್ತು ನೀಡಬೇಕು.

ಕರ್ನಾಟಕದಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸುವ ವಸ್ತುಗಳಿಗೆ ಉತ್ತಮ ಮಾರುಕಟ್ಟೆ ನಿರ್ಮಾಣ ಮಾಡುವ ಮೂಲಕ ಅವರ ಅರ್ಥಿಕ ಪರಿಸ್ಥಿತಿಯನ್ನು ಹೆಚ್ಚಿಸಬೇಕು, ಪ್ರಸ್ತುತ ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ಕ್ಷೇತ್ರಗಳಲ್ಲಿ ಅವರಿಗೆ ತರಬೇತಿಯನ್ನು ನೀಡುವ ಮೂಲಕ ಅವರನ್ನು ಉದ್ಯಮಿಗಳಾಗಿ ರೂಪಿಸಬೇಕು, ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು ಬ್ಯಾಂಕ್‌ಗಳಲ್ಲಿ ಪಡೆದಿರುವ ಸಾಲದ ಹಣವನ್ನು ಸ್ವಯಂ ಉದ್ಯೋಗ, ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸುವ ಜೊತೆಗೆ ಸಕಾಲದಲ್ಲಿ ಸಾಲವನ್ನು ಮರುಪಾವತಿಸಬೇಕು.

ರಾಜ್ಯದಲ್ಲಿ ಮಿಷನ್ ಅಂತ್ಯೋದಯ ಕಾರ್ಯಕ್ರಮದ ಜಾರಿಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸದರಿ ಯೋಜನೆಯ ಜಾರಿಯಲ್ಲಿ ಸ್ಥಳೀಯ ಜನರ ಪಾಲ್ಗೊಳ್ಳುವಿಕೆ ತರಬೇತಿ ಮುಂತಾದ ವಿಷಯಗಳ ಬಗ್ಗೆ ಚುನಾಯಿತ ಪ್ರತಿನಿಧಿಗಳು ಹಾಗೂ ಸ್ವಸಹಾಯ ಸಂಘಗಳ ಸದಸ್ಯರಿಂದ ಮಾಹಿತಿಯನ್ನು ಪಡೆದರು. ಕೇಂದ್ರ ಸರ್ಕಾರದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆಯನ್ನು ನಡೆಸಿ, ಸದರಿ ಯೋಜನೆಯಡಿ ನಿರ್ಮಿಸಲಾಗಿರುವ ಕುರಿ ಮತ್ತು ಧನದ ಕೊಟ್ಟಿಗೆ, ರಸ್ತೆ ಕಾಮಗಾರಿ, ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ ನಿರ್ಮಿಸಿರುವ ಮನೆಗಳನ್ನು ಪರಿಶೀಲಿಸಿದರು, ಮಹಿಳಾ ಸಂಘಗಳಿಗೆ ಸಂಜೀವಿನಿ ಯೋಜನೆಯಡಿ ನೀಡಲಾಗಿರುವ ತರಬೇತಿಗಳು ಮುಂತಾದ ವಿಷಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದರು. ಕೌಶಲ್ಯ ಅಧಾರಿತ ತರಬೇತಿಗಳಿಗೆ ಹೆಚ್ಚಿನ ಒತ್ತು ನೀಡಬೇಕೆಂದರು.



ವರದಿ



ರಾಮಾಂಜನೇಯ ವಿ.ಎಚ್

ರಾಜ್ಯ ಐ.ಇ.ಸಿ
ಸಮಾಲೋಚಕರು
ಸ್ವಚ್ಛ ಭಾರತ್
ಮಿಷನ್ (ಗ್ರಾ)

ರಾಜ್ಯದಲ್ಲಿ ಎಲ್ಲಾ 6021 ಗ್ರಾಮ ಪಂಚಾಯಿತಿಗಳಲ್ಲಿ ಎರಡು ತಿಂಗಳುಗಳ ಕಾಲ ನಡೆದ ಈ ಆಂದೋಲನದಡಿ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮಗಳು, ಪ್ಲಾಸ್ಟಿಕ್ ಸಂಗ್ರಹಣೆ ಮತ್ತು ವಿಲೇವಾರಿ ಕುರಿತು ಜಾಗೃತಿ ಕಾರ್ಯಕ್ರಮಗಳು,

# ಸ್ವಚ್ಛತೆಯೇ ಸೇವೆ

ದೇಶದಲ್ಲಿ ದಿನೇ ದಿನೇ ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮಾಲಿನ್ಯವು ಕೂಡ ಗಣನೀಯವಾಗಿ ಏರುತ್ತಿದೆ, ಯಥೇಚ್ಛವಾಗಿ ಪ್ಲಾಸ್ಟಿಕ್ ಬಳಕೆಯು ಇಡೀ ಜೀವ ಸಂಕುಲಕ್ಕೆ ಹಾಗೂ ನಮ್ಮ ಪರಿಸರಕ್ಕೆ ಅತ್ಯಂತ ಮಾರಕವಾಗಿ ಪರಿಣಮಿಸಿದೆ. ಪ್ರಸ್ತುತ ಗ್ರಾಮಿಣ ಸಮುದಾಯದಲ್ಲಿ, ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಅರಿವು ಮೂಡಿಸುವ ಕೆಲಸ ಅತ್ಯಂತ ಜರೂರಾಗಿ ಮಾಡಬೇಕಿದ್ದು, ಪ್ರತಿ ನಿತ್ಯ ದೈನಂದಿನ ಜೀವನದಲ್ಲಿ, ಗೃಹ ಬಳಕೆಯಲ್ಲಿ ಅಧಿಕವಾಗಿ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಗ್ರಾಮೀಣ ಸಮುದಾಯದಲ್ಲಿ ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 11ನೇ ನವೆಂಬರ್ 2019 ರಿಂದ 27ನೇ ಅಕ್ಟೋಬರ್ 2019ರ ವರೆಗೆ "ಸ್ವಚ್ಛತಾ ಹೀ ಸೇವಾ ಸೇವಾ (ಸ್ವಚ್ಛತೆಯೇ ಸೇವೆ) ಆಂದೋಲನವನ್ನು ಆಯೋಜಿಸಲು ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿತ್ತು.



ಅದರಂತೆ ರಾಜ್ಯದಲ್ಲಿ ಎಲ್ಲಾ 6021 ಗ್ರಾಮ ಪಂಚಾಯಿತಿಗಳಲ್ಲಿ ಎರಡು ತಿಂಗಳುಗಳ ಕಾಲ ನಡೆದ ಈ ಆಂದೋಲನದಡಿ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮಗಳು, ಪ್ಲಾಸ್ಟಿಕ್ ಸಂಗ್ರಹಣೆ ಮತ್ತು ವಿಲೇವಾರಿ ಕುರಿತು ಜಾಗೃತಿ ಕಾರ್ಯಕ್ರಮಗಳು, ಜನರಲ್ಲಿ ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ವಿವಿಧ ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಎರಡು ತಿಂಗಳಗಳ ಕಾಲ ನಿರಂತರವಾಗಿ ಶ್ರಮದಾನ, ಜನಜಾಗೃತಿ ಕಾರ್ಯಕ್ರಮಗಳು, ಜನರ ಭಾಗವಹಿಸುವಿಕೆ, ಪರಸ್ಪರ ಮಾಹಿತಿ ಹಂಚುವ ಮೂಲಕ ದೇಶ ಕಟ್ಟುವ ಕೆಲಸದಲ್ಲಿ ನಾಗರೀಕರು, ಅನೇಕ ಸಂಘ ಸಂಸ್ಥೆಗಳು, ಯುವಕ-ಯುವತಿಯರು, ಶಾಲಾ-ಕಾಲೇಜು ವಿದ್ಯಾರ್ಥಿಗಳು,

ಅಧಿಕಾರಿಗಳು ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಪಾಲ್ಗೊಳ್ಳುವಿಕೆಗೆ ಈ ಆಂದೋಲನ ಪ್ರೇರೇಪಿಸಿತು.

- ರಾಜ್ಯದಾದ್ಯಂತ ಈ ಆಂದೋಲನದಲ್ಲಿ ಒಟ್ಟು 13,67,801 ಸಾರ್ವಜನಿಕರು ಪಾಲ್ಗೊಂಡು ಯಶಸ್ವಿಗೊಳಿಸಿದರು.
- ಆಂದೋಲನದ ಅವಧಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು 61,131 ಕೆಜಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹವಾಗಿದ್ದು, ಈ ಪೈಕಿ 38,131 ಕೆಜಿ ಪ್ಲಾಸ್ಟಿಕ್ ತ್ಯಾಜ್ಯವನ್ನು ವಿಲೇವಾರಿ ಮಾಡಲಾಯಿತು.
- ಜಿಲ್ಲೆ / ತಾಲ್ಲೂಕು / ಗ್ರಾಮ ಪಂಚಾಯತಿಗಳಲ್ಲಿ ಆಯೋಜಿಸಿದ್ದ ಒಟ್ಟು 2,637 ವಿವಿಧ ಜನ ಜಾಗೃತಿ ಚಟುವಟಿಕೆಗಳಲ್ಲಿ 5,34,635 ಮಕ್ಕಳು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿದರು. ಶ್ರಮದಾನ್‌ಗೆ ಒಟ್ಟು ಸರಾಸರಿ 575 ಗಂಟೆಗಳನ್ನು ವ್ಯಯಿಸಲಾಯಿತು. ರಾಜ್ಯದಲ್ಲಿ 11,556 ಹಳ್ಳಿಗಳು ಇದರಲ್ಲಿ ಪಾಲ್ಗೊಂಡಿದ್ದವು.
- ಜಾಗೃತಿ ಕಾರ್ಯಕ್ರಮದ ಪೂರ್ವ ತರಬೇತಿ ಕಾರ್ಯಕ್ರಮದಲ್ಲಿ 1,47,528 ಜನರು ಪಾಲ್ಗೊಂಡು, 2,276 ಬಗೆಯ ಚಟುವಟಿಕೆಗಳು ಯಶಸ್ವಿಯಾಗಿ ನೆರವೇರಿದವು.
- ಸಾಮೂಹಿಕ ಜಾಗೃತಿ ಕಾರ್ಯಕ್ರಮದಲ್ಲಿ 4,17,264 ಮಂದಿ ಪಾಲ್ಗೊಂಡಿದ್ದರು. ಒಟ್ಟು 5,218 ಚಟುವಟಿಕೆಗಳು ಆಯೋಜಿಸಲಾಗಿದ್ದು, ಇದರಲ್ಲಿ 597 ಚಟುವಟಿಕೆಗಳು ಬಟ್ಟೆ ಹಾಗೂ ಸೆಣಬಿನ ಚೀಲಗಳನ್ನು ವಿತರಿಸುವ ತರಬೇತಿ ಕಾರ್ಯಕ್ರಮಗಳಾಗಿದ್ದವು. ಒಟ್ಟಾರೆ 32,662 ಬ್ಯಾಗ್‌ಗಳನ್ನು ವಿತರಿಸಲಾಗಿ, ಉಳಿದಂತೆ ವಿವಿಧ ಸ್ವಚ್ಛತಾ ಚಟುವಟಿಕೆಗಳಲ್ಲಿ 2,35,498 ಮಂದಿ ಪಾಲ್ಗೊಂಡಿದ್ದರು.
- ಹೆಚ್ಚಿನ ಮಾಹಿತಿಗಾಗಿ

  swachhbharatmission.gov.in/SHS2019 ಸಂಪರ್ಕಿಸಬಹುದು.

ಶೌಚಾಲಯದ ಮಹತ್ವ ಮತ್ತು ಅದರ ಉಪಯೋಗ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ವರ್ಷ ನವೆಂಬರ್-19 ರಂದು ವಿಶ್ವ ಶೌಚಾಲಯ ದಿನವನ್ನಾಗಿ ಆಚರಿಸಲಾಯಿತು. ಪ್ರತಿ ವರ್ಷದಂತೆ ಈ ವರ್ಷವು ಸಹ "ವಿಶ್ವ ಶೌಚಾಲಯ ದಿನಾಚರಣೆಗೆ" ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಸಕಲ ಸಿದ್ಧತೆಗಳನ್ನು ಮಾಡಿಕೊಂಡು ರಾಜ್ಯದಾದ್ಯಂತ ಯಶಸ್ವಿಯಾಗಿ ಆಚರಿಸಲಾಯಿತು. ಇದರ ಪ್ರಯುಕ್ತ ಗ್ರಾಮೀಣ ಸಮುದಾಯದಲ್ಲಿ ಶೌಚಾಲಯ ಬಳಕೆ, ಪ್ಲಾಸ್ಟಿಕ್ ಉಪಯೋಗ ಮಾಡದೇ ಪರಿಸರ ಸ್ನೇಹಿ ವಸ್ತುಗಳನ್ನೇ ಬಳಸಲು ಪ್ರೇರೇಪಣೆ ಮಾಡಲು ರಾಜ್ಯದ ಎಲ್ಲಾ 17 ಬಾನುಲಿ ಕೇಂದ್ರಗಳಲ್ಲಿ ರೇಡಿಯೋ ಜಿಂಗಲ್ಸ್‌ಗಳ ಪ್ರಸಾರ ಮಾಡಲಾಯಿತು.

ಕಸ ವಿಂಗಡಣೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯದ ಕುರಿತಾದ ವಿಡಿಯೋಗಳನ್ನು ಸಿದ್ಧಪಡಿಸಿ ರಾಜ್ಯದ ಪ್ರಮುಖ ರೈಲ್ವೆ ನಿಲ್ದಾಣಗಳಲ್ಲಿ ಅಳವಡಿಸಲಾದ ಎಲ್‌ಇಡಿ ಟಿವಿ ಪರದೆಗಳಲ್ಲಿ ಪ್ರಸಾರ ಮತ್ತು ಸಿನಿಮಾ ಮಂದಿರಗಳಲ್ಲಿ ಎರಡು ಪ್ರತ್ಯೇಕ ಜಾಹೀರಾತುಗಳನ್ನು ಆರಂಭದ ಹಾಗೂ ವಿರಾಮದ ಅವಧಿಯಲ್ಲಿ ಬಿತ್ತರಿಸಲು ಕ್ರಮ ಕೈಗೊಳ್ಳಲಾಗಿದೆ. ಬಸ್ ಬ್ರ್ಯಾಂಡಿಂಗ್ ಮೂಲಕವು ಸಹ ಜಾಗೃತಿ ಮೂಡಿಸಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕ್ರಮವಹಿಸಿತ್ತು. ಕರಪತ್ರ, ಕೈಪಿಡಿಗಳನ್ನು ಸಿದ್ಧಪಡಿಸಲಾಗಿದ್ದು, ಮಾಹಿತಿಯುಳ್ಳ ಇವುಗಳನ್ನು ಸಾರ್ವಜನಿಕರಿಗೆ ವಿತರಿಸಲು ಕ್ರಮಕೈಗೊಳ್ಳಲಾಗಿದೆ.

### 'ಸ್ವಚ್ಛ ಸುಂದರ ಸಮುದಾಯ ಶೌಚಾಲಯ ಆಂದೋಲನ'

ನವೆಂಬರ್-1 ರಿಂದ ಡಿಸೆಂಬರ್-31ರವರೆಗೂ ಎರಡು ತಿಂಗಳ ಕಾಲ 'ಸ್ವಚ್ಛ ಸುಂದರ ಸಮುದಾಯ ಶೌಚಾಲಯ ಆಂದೋಲನ' ಸ್ಪರ್ಧೆಯನ್ನು ಏರ್ಪಡಿಸ ಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಮುದಾಯ ಶೌಚಾಲಯಗಳ ನಿರ್ಮಾಣ, ಅವುಗಳಿಗೆ ಬಣ್ಣ ಬಳಿಸುವುದು ಮತ್ತು ನಿರ್ವಹಣೆ ಬಗ್ಗೆ ಗ್ರಾಮೀಣ ಸಮುದಾಯವನ್ನು ಪ್ರೇರೇಪಿಸುವ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತಿದೆ.

- ಪ್ರತಿ ಜಿಲ್ಲೆಯಲ್ಲಿ ಒಂದು ಗ್ರಾಮಕ್ಕೆ ಕನಿಷ್ಠ ಒಂದು ಸಮುದಾಯ ಶೌಚಾಲಯ ನಿರ್ಮಾಣ ಮಾಡಬೇಕು/ಮಾಡಿರಬೇಕು.

- ಸಮುದಾಯ ಶೌಚಾಲಯವನ್ನು ಸ್ವಚ್ಛ ಸುಂದರವನ್ನಾಗಿಸಲು ಪೈಂಟ್ ಮಾಡಿಸುವಿಕೆ, ಎಸ್.ಬಿ.ಎಂ ಯೋಜನೆಯ ಸಂದೇಶ ಬರಹ, ಶೌಚಾಲಯ ಬಳಕೆ, ತ್ಯಾಜ್ಯ ನಿರ್ವಹಣೆ ಮತ್ತು ಸಮುದಾಯ ಶೌಚಾಲಯಗಳ ನಿರ್ವಹಣೆ ಕುರಿತು ಸಂದೇಶಗಳನ್ನು ಬರೆಸುವುದು.



- ಸಸಿ ನೆಡುವುದು, ತೋಟಗಾರಿಕಾ ಚಟುವಟಿಕೆಗಳು ಸೇರಿದಂತೆ ಇತರೆ ಚಟುವಟಿಕೆಗಳನ್ನು ಆಯೋಜಿಸಬಹುದಾಗಿದೆ.
- ಸುಂದರವಾಗಿಸಿದ ಸಮುದಾಯ ಶೌಚಾಲಯಗಳ ಫೋಟೋಗಳನ್ನು ಯೋಜನೆಯ ಐಎಂಐಎಸ್ ನಲ್ಲಿ ಆರೋಹಿಸಬೇಕು.
- ಮೊಬೈಲ್ ಆ್ಯಪ್‌ಗಾಗಿsbm.gov.in/odfplus ಈ ಲಿಂಕ್‌ನ್ನು ಬಳಸಿ.

## ಪ್ರಶಸ್ತಿಯ ಆಯ್ಕೆ ವಿಧಾನ

- ವಿಜೇತರಿಗೆ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಗುವುದು.
- ಆಂದೋಲನದಲ್ಲಿ ಭಾಗವಹಿಸಿದ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಗಳನ್ನು ಗುರುತಿಸಿ ಉತ್ತಮ ಸಾಧನೆ ಮಾಡಿದವರಿಗೆ ಆಕರ್ಷಕ ಬಹುಮಾನ ನೀಡಲಾಗುವುದು.
- ಈ ಆಂದೋಲನದಲ್ಲಿ ಮಾಡಲಾದ ಪ್ರಗತಿ ಕುರಿತು ಅಗತ್ಯ ದಾಖಲಾತಿಗಳೊಂದಿಗೆ ವರದಿಯನ್ನು ಜಿಲ್ಲೆಗಳು ಕೇಂದ್ರ ಕಚೇರಿಗೆ ಕಳುಹಿಸಬೇಕು. ಜಿಲ್ಲೆಗಳ ಕಾರ್ಯ ಸಾಧನೆ ಆಧಾರದ ಮೇಲೆ ರಾಜ್ಯ ಕಚೇರಿ ವತಿಯಿಂದ MDWS Portalನಲ್ಲಿ ಪುರಸ್ಕಾರಕ್ಕಾಗಿ ನಾಮ ನಿರ್ದೇಶನ ಮಾಡಲಾಗುವುದು.
- ಎಲ್ಲಾ ಹಂತಗಳಲ್ಲಿ ಈ ಆಂದೋಲನ ಕುರಿತು ವ್ಯಾಪಕ ಪ್ರಚಾರ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಈ ಬಗ್ಗೆ ವರದಿಗಳನ್ನು ಕಾಲ ಕಾಲಕ್ಕೆ ಆರೋಹಿಸಲು ಜಿಲ್ಲೆಗಳು ಕ್ರಮ ಕೈಗೊಳ್ಳುವ ಮೂಲಕ ಈ ಆಂದೋಲನದಲ್ಲಿ ಯಶಸ್ವಿಯಾಗಿ ಭಾಗವಹಿಸಿ ಪ್ರಶಸ್ತಿಗೆ ಗ್ರಾಮ ಪಂಚಾಯಿತಿಗಳು ಭಾಜನವಾಗಬೇಕು ಎಂಬುದು ಇಲಾಖೆಯ ಆಶಯವಾಗಿದೆ.

ವರದಿ



ಬಂಡೆಪ್ಪ ಜಿ. ತೇಲಿ

ಕಾರ್ಯದರ್ಶಿಗಳು ಗ್ರೇಡ್–1
ಗ್ರಾಮ ಪಂಚಾಯತಿ
ಸಾಲೋಟಗಿ ತಾ॥ ಇಂಡಿ
ಜಿ॥ ವಿಜಯಪುರ

**ಅಂತರ್ಜಲ ಕುಸಿತದಿಂದ ಕೃಷಿಕರ ಬೇಸಾಯ ಕ್ರಮಗಳು ಕುಂಟಿತಗೊಂಡಿವೆ. ಲಿಂಬೆ ಬೆಳೆಗೆ ಪ್ರಸಿದ್ದ ಪಡೆದ ಇಂಡಿ ತಾಲ್ಲೂಕಿನ ಪ್ರದೇಶದಲ್ಲಿ ನೀರಿಲ್ಲದೆ ತೋಟಗಾರಿಕೆ ಬೆಳೆಗಳಾದ ಲಿಂಬೆ ಗಿಡಗಳು, ದಾಳಿಂಬೆ ಗಿಡಗಳು ಇನ್ನಿತರ ಬೆಳೆಗಳು ನಾಶವಾಗಿವೆ.**

# ಕೃಷಿಕರ ಬದುಕು

ದೇಶದ ಪ್ರಜಾಪ್ರಭುತ್ವದ ಮೂಲ ಘಟಕಗಳಾದ ಗ್ರಾಮಗಳು ಸ್ವಯಂ ಪರಿಪೂರ್ಣ ಮತ್ತು ಸ್ವಾವಲಂಬಿ ಗ್ರಾಮಗಳಾದಾಗ ಮಾತ್ರ ರಾಷ್ಟ್ರದ ಸರ್ವತೋಮುಖಿ ಅಭಿವೃದ್ಧಿ ಹೊಂದಲು ಸಾಧ್ಯ ಎಂಬುದು ಪೂಜ್ಯ ಮಹಾತ್ಮಾ ಗಾಂಧಿಜಿಯವರ ಅಭಿಪ್ರಾಯವಾಗಿತ್ತು. ಈ ಹಿನ್ನಲೆಯಲ್ಲಿ ಗ್ರಾಮೀಣ ಬಡ ಜನರ ಬದುಕನ್ನು ಹಸನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ದುಡಿಯುವ ಇಚ್ಚೆ ಅಗತ್ಯತೆವಿರುವ ಜನರಿಗೆ ಗಂಡು–ಹೆಣ್ಣೆಂಬ ತಾರತಮ್ಯವಿಲ್ಲದೆ ಉದ್ಯೋಗ ಒದಗಿಸುವ ಕಾರ್ಯವನ್ನು ಕೇಂದ್ರ ಸರಕಾರದ ಪುರಸ್ಕೃತ ಯೋಜನೆಯಲ್ಲೊಂದಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಪೂರೈಸುತ್ತದೆ. ಹಾಗೂ ಗ್ರಾಮೀಣ ಬಡ ಜನರ ಹಾಗೂ ಕೃಷಿಕರ ಬದುಕಿಗೆ ಆಸರೆಯಾಗಿದ್ದು, ಇದರಿಂದ ಗ್ರಾಮೀಣ ನಿರುದ್ಯೋಗ ಹೊಗಲಾಡಿಸಿ ಉದ್ಯೋಗ ಸೃಷ್ಟಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಗೆ ಕಳೆದ 3–4 ವರ್ಷಗಳಿಂದ ಸರಿಯಾಗಿ ಮಳೆ ಬಾರದೆ ಇರುವದರಿಂದ ಇಲ್ಲಿಯ ಜನರು ಮತ್ತು ಜಾನುವಾರಗಳು ತತ್ತರಿಸಿ ಹೋಗಿದ್ದಾರೆ. ಅದರಲ್ಲಿ ಕರ್ನಾಟಕ ಗಡಿ ಭಾಗದಲ್ಲಿರುವ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕನ್ನು ಸರಕಾರ ಬರ ಪೀಡಿತ ಪ್ರದೇಶವೆಂದು ಘೋಷಿಸಿದೆ. ಈ ತಾಲ್ಲೂಕಿನ ಬಹುತೇಕ ಕೆರೆ ಕಟ್ಟೆಗಳು ಹಳ್ಳ–ಕೊಳ್ಳಗಳು, ಕೊಳವೆ ಭಾವಿಗಳು, ಕಲ್ಯಾಣಿಗಳು ಬತ್ತಿಬರಿದಾಗಿ ಹೋಗಿ ಬರದ ಛಾಯೆ ಆವರಿಸಿದೆ. ಈ ಭಾಗದಲ್ಲಿ ನೀರಿನ ಹಾಹಾಕಾರದಿಂದ ಜನರು ಜಾನುವಾರಗಳು ತೀವ್ರ ಅಭಾವದಿಂದ ಸಂಕಷ್ಟದಲ್ಲಿದ್ದಾರೆ.



ಈ ಪ್ರದೇಶದಲ್ಲಿ ಸಾಕಷ್ಟು ಕೊಳವೆ ಭಾವಿ ಕೊರೆಸಿದರೂ ಸಹ ನೀರು ಬರುತ್ತಿಲ್ಲ. ಅಂತರ್ಜಲ ಕುಸಿತದಿಂದ ಕೃಷಿಕರ ಬೇಸಾಯ ಕ್ರಮಗಳು ಕುಂಟಿತಗೊಂಡಿವೆ. ಲಿಂಬೆ ಬೆಳೆಗೆ ಪ್ರಸಿದ್ದ ಪಡೆದ ಇಂಡಿ ತಾಲ್ಲೂಕಿನ ಪ್ರದೇಶದಲ್ಲಿ

ನೀರಿಲ್ಲದೆ ತೋಟಗಾರಿಕೆ ಬೆಳೆಗಳಾದ ಲಿಂಬೆ ಗಿಡಗಳು, ದಾಳಿಂಬೆ ಗಿಡಗಳು ಇನ್ನಿತರ ಬೆಳೆಗಳು ನಾಶವಾಗಿವೆ. ಇದರಿಂದ ಸರಕಾರ ಬರ ಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ. ಈ ಭಾಗಕ್ಕೆ ಎರಡು ಬಾರಿ ಕೇಂದ್ರ ಜಲಶಕ್ತಿ ಬರ ಅಧ್ಯಯನ ತಂಡ ಸಮೀಕ್ಷೆ ನಡೆಸಿದೆ. ಇದರಿಂದ ಈ ಭಾಗದ ಕೃಷಿಕರಿಗೆ ಯೋಗ್ಯ ರೀತಿಯಲ್ಲಿ ಪರಿಹಾರ ದೊರೆಯಬೇಕಾಗಿದೆ.

ಗ್ರಾಮೀಣ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರದ ಹತ್ತು ಹಲವಾರು ಮಹತ್ವಾಕಾಂಕ್ಷಿ ಯೋಜನೆಗಳು ಪ್ರಸ್ತುತ ಜಾರಿಯಲ್ಲಿದ್ದು ಅವುಗಳನ್ನು ಪ್ರತಿಯೊಬ್ಬರು ಆಸಕ್ತಿಯಿಂದ ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳುವಲ್ಲಿ ಸದುಪಯೋಗ ಪಡೆಸಿಕೊಂಡರೆ ಅದು ಖಂಡಿತವಾಗಲು ವರದಾನವಾಗಿ ಪರಿಣಮಿಸಲು ಯಾವುದೇ ಸಂದೇಹವಿಲ್ಲ. ಈ ಒಂದು ಉದ್ದೇಶವನ್ನಿಟ್ಟುಕೊಂಡು ವಿಜಯಪುರ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆಸಕ್ತಿ ಹಾಗೂ ಪಾರದರ್ಶಕ ಆಡಳಿತ ನಡೆಸಿರುವದಕ್ಕೆ ಅದಕ್ಕೊಂದು ನೈಜ ವರದಿ ಇಲ್ಲಿದೆ.



ವಿಜಯಪುರ ಜಿಲ್ಲಾ ಪಂಚಾಯತಿಗೆ ದಿನಾಂಕ 14-8-2018 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹುದ್ದೆಯ ಕರ್ತವ್ಯಕ್ಕೆ ಹಾಜರಾದ ಶ್ರೀ.ವಿಕಾಸ ಕಿಶೋರ ಸುರಳಕರರವರು ಅಂದೆ ಇಲಾಖೆ ಯಿಂದ ಅನುಷ್ಠಾನವಾಗುವ ಎಲ್ಲ ಯೋಜನೆಗಳ ಬಗ್ಗೆ ಕಾರ್ಯಪ್ರವೃತ್ತರಾಗಿ ತುರ್ತಾಗಿ ಸಂಬಂಧಿಸಿದ ಅಧಿಕಾರಿಗಳ ಸಭೆ ಕರೆದು ಮುಖ್ಯವಾಗಿ ಎಸ್.ಬಿ.ಎಂ., ಎಂ.ಜಿ.ಎನ್.ಆರ್.ಇ.ಜಿ. ಹಾಗೂ ಕುಡಿಯುವ ನೀರಿನ ಪ್ರಗತಿ ಕುರಿತು ಸುದೀರ್ಘವಾಗಿ ಚರ್ಚಿಸಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ವೈಯಕ್ತಿಕ ಮತ್ತು ಸಾಮೂಹಿಕ ಶೌಚಾಲಯ ನಿರ್ಮಾಣಕ್ಕೆ ಒತ್ತು ನೀಡಿ ಸುಮಾರು ಎರಡು ತಿಂಗಳಲ್ಲಿಯೇ ಗಣನೀಯ ಪ್ರಗತಿ ಸಾಧಿಸುವಲ್ಲಿ ಯಶಸ್ವಿ ಕಂಡರು. ಇದರ ಜೊತೆಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಹೆಚ್ಚು ಗಮನ ಹರಿಸಿದರು.

ಇವರು ವಿಜಯಪುರ ಜಿಲ್ಲೆಗೆ ಬಂದ ನಂತರ ಹಿಂದಿನ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ನೀಲಮ್ಮ ಎಸ್.ಮೇಟಿರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಪಂಚಾಯತಿ ಸದಸ್ಯರಾದ ಬಿ.ಆರ್.ಯಂಟಮಾನರವರು ಅಭಿವೃದ್ಧಿ ವಿಷಯದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿ ಜಿಲ್ಲೆಯಲ್ಲಿ ಕೇವಲ ಶೌಚಾಲಯಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಲಾಗುತ್ತಿದೆ. ಇನ್ನುಳಿದ ಯೋಜನೆಗಳಲ್ಲಿ ಗಣನೀಯ ಸಾಧನೆವಾಗುತ್ತಿಲ್ಲವೆಂದು ಪ್ರಶ್ನಿಸಿದಾಗ ಇದಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯನ್ನು ಬಯಲು ಮುಕ್ತ ಶೌಚಾಲಯ ಜಿಲ್ಲೆಯನ್ನಾಗಿ ಮಾಡುವ ಉದ್ದೇಶದಿಂದ ಈ ಯೋಜನೆಯ ಪ್ರಗತಿಗೆ ಇಷ್ಟೊಂದು ಪ್ರಯತ್ನಿಸಲಾಗುತ್ತಿದೆ. ಅದಕ್ಕಾಗಿ ಶೌಚಾಲಯ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ ಎಂದು ಸದಸ್ಯರ ಪ್ರಶ್ನೆಗೆ ಉತ್ತರಿಸಿದರು.

ಎಸ್.ಬಿ.ಎಂ. ಈ ಯೋಜನೆ ಯಶಸ್ವಿಗೆ ತಮ್ಮೆಲ್ಲರ ಸಹಕಾರವು ಕೂಡಾ ಬಹಳ ಅಗತ್ಯವಾಗಿದ್ದು, ಅವರು ಇನ್ನು ಮುಂದೆ ಜಿಲ್ಲೆಯಲ್ಲಿ ಕುಡಿಯುವ ನೀರು, ಶಿಕ್ಷಣ, ರಸ್ತೆ, ಕೃಷಿಕರ ಪರ ಕಾರ್ಯಕ್ರಮಗಳು ಹಾಗೂ ಉದ್ಯೋಗ ಖಾತ್ರಿ ಯೋಜನೆಗೆ ಹೆಚ್ಚು ಮಹತ್ವ ಕೊಡಲಾಗುವುದೆಂದು ಮತ್ತೊಮ್ಮೆ ತಿಳಿಸಿದರು. ಉದ್ಯೋಗ ಖಾತ್ರಿ ಯೋಜನೆ ಅಂದಾಕ್ಷಣವೇ ಬಹುತೇಕ ಜಿಲ್ಲಾ ಪಂಚಾಯತಿ ಸದಸ್ಯರು ಗ್ರಾಮ ಪಂಚಾಯತಿ ಮಟ್ಟದಲ್ಲಿ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿ ಕೆಲಸ ನಿರ್ವಹಿಸುತ್ತಿಲ್ಲ. ಇದರಿಂದ ಅಷ್ಟೊಂದು ಪ್ರಗತಿ ಸಾಧಿಸಲಾಗುತ್ತಿಲ್ಲ. ಅಲ್ಲದೇ ಜಿಲ್ಲಾ ಪಂಚಾಯತಿ ಸದಸ್ಯರು ಹೇಳುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲವೆಂದು ಪ್ರಸ್ತಾಪಿಸಿದ ವಿಷಯಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಜಯಪುರ ಜಿಲ್ಲೆಯು ಬರಗಾಲದಿಂದ ತತ್ತರಿಸಿ ಜನಜಾನುವಾರುಗಳು ಕುಡಿಯುವ ನೀರಿಗಾಗಿ ಪರಿತಪಿಸುವಂತಾಗಿದೆ.

ಅಂತರ್ಜಲ ಮಟ್ಟ ಕುಸಿದಿದೆ. ಎಷ್ಟೇ ಕೊಳವೆ ಭಾವಿಗಳನ್ನು ಕೊರೆದರು ನೀರು ಬರುತ್ತಿಲ್ಲ ಆದ್ದರಿಂದ

ಮುಂದಿನ ದಿನಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಪ್ರತಿ ಜಿಲ್ಲಾ ಪಂಚಾಯತಿ ಕ್ಷೇತ್ರಕ್ಕೆ 8 ರಿಂದ 10 ಮಲ್ಟಿ ಆರ್ಚ್ ಚೆಕ್‌ಡ್ಯಾಮ್ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಪ್ರತಿ ಜಿಲ್ಲಾ ಪಂಚಾಯತಿ ಸದಸ್ಯರು ತಮ್ಮ ತಮ್ಮ ಕ್ಷೇತ್ರದಿಂದ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದೆಂದು ತಿಳಿಸಿದರು. ಇದಕ್ಕೆ ಎಲ್ಲ ಸದಸ್ಯರು ಸರ್ವಾನುಮತದಿಂದ ಸಮ್ಮತಿಸಿದರು.

ಮುಂದಿನ ದಿನಗಳಲ್ಲಿ ಜಿಲ್ಲಾ ಪಂಚಾಯತಿ ಸದಸ್ಯರು ತಮ್ಮ ತಮ್ಮ ಜಿಲ್ಲಾ ಪಂಚಾಯತಿ ಕ್ಷೇತ್ರದಲ್ಲಿರುವ ಸರಕಾರಿ ನಾಲೆಗಳಲ್ಲಿ ನಿರ್ಮಾಣವಾಗಬೇಕಾದ ಮಲ್ಟಿ ಅರ್ಚ್ ಚೆಕ್‌ಡ್ಯಾಮ್ ನಿರ್ಮಾಣದ ಕಾಮಗಾರಿಗಳ ಪಟ್ಟಿಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಜರುಗುವ ಗ್ರಾಮ ಸಭೆಯಲ್ಲಿ ಮಂಡಿಸಿ ಅವುಗಳನ್ನು ಜಿಲ್ಲಾ ಪಂಚಾಯತಿಗೆ ಸಲ್ಲಿಸಿದಲ್ಲಿ ಸಲ್ಲಿಸಿದ ಕಾಮಗಾರಿಗಳ ಪಟ್ಟಿಯನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ಕಳುಹಿಸಿ ತಾಂತ್ರಿಕ ಸಹಾಯಕರುಗಳ ಮೂಲಕ ಆಯ್ಕೆ ಮಾಡಿದ ಕಾಮಗಾರಿಗಳ ಸ್ಥಳ ಪರಿಶೀಲಿಸಿ ಅರ್ಹ ಕಾಮಗಾರಿಗಳಾಗಿದ್ದರೆ ಅಂದಾಜು ಮೊತ್ತ ದಾಖಲಿಸಿ END TO END ತಂತ್ರಾಂಶದಲ್ಲಿ ಅಳವಡಿಸಿ ಅನುಷ್ಠಾನಕ್ಕೆ ತರಲಾಗುವುದು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

ಗ್ರಾಮ ಸಭೆಯಲ್ಲಿ ಈ ರೀತಿ ಅನುಮೋದನೆ ಪಡೆದ ಕಾಮಗಾರಿಗಳು ಜಿಲ್ಲಾ ಪಂಚಾಯತಿ ಸದಸ್ಯರ ಆಸಕ್ತಿಯಿಂದ ಹೆಚ್ಚಿನ ರೀತಿಯಲ್ಲಿ ಇಂಡಿ ಮತ್ತು ಸಿಂದಗಿ ತಾಲ್ಲೂಕಿನಲ್ಲಿ ಅನುಷ್ಠಾನವಾಗುತ್ತಿವೆ. ಇದುವರೆಗೆ ಒಟ್ಟಾರೆಯಾಗಿ ಜಿಲ್ಲೆಯಲ್ಲಿ 2018-19 ಹಾಗೂ 2019-20ರಲ್ಲಿ ಒಟ್ಟು 3177 ಕಾಮಗಾರಿಗಳು ಅನುಮೋದನೆಗೊಂಡಿವೆ. ಇದರಲ್ಲಿ 998 ಕಾಮಗಾರಿಗಳು ಪ್ರಾರಂಭಗೊಂಡು 476 ಕಾಮಗಾರಿಗಳು ಪೂರ್ಣಗೊಂಡಿವೆ. 522 ಕಾಮಗಾರಿಗಳು ಪ್ರಗತಿಯಲ್ಲಿವೆ. ಪೂರ್ಣಗೊಂಡ ಕಾಮಗಾರಿಗಳಲ್ಲಿ ಜೂನ್ ಮತ್ತು ಜುಲೈ ತಿಂಗಳಲ್ಲಿ ಆದ ಮಳೆಯಿಂದ ಮುದ್ದೇಬಿಹಾಳ ಮತ್ತು ಬ.ಬಾಗೇವಾಡಿ ತಾಲೂಕಿನ ಕೆಲವು ಚೆಕ್ ಡ್ಯಾಂಗಳಿಗೆ ನೀರು ಬಂದು ಅನುಕೂಲವಾಗಿರುತ್ತದೆ.

## ಬರಗಾಲದಲ್ಲೂ ನೀರು ಕಂಡ ಇಂಡಿ ಭಾಗದ ಮಲ್ಟಿ ಅರ್ಚ್ ಚೆಕ್ ಡ್ಯಾಂಗಳು

ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೋಟಗಿ ಜಿಲ್ಲಾ ಪಂಚಾಯತಿ ಕ್ಷೇತ್ರದ ಜಿಲ್ಲಾ ಪಂಚಾಯತಿ ಸದಸ್ಯರು ಮತ್ತು ಹಾಲಿ ಅಧ್ಯಕ್ಷರಾದ ಶ್ರೀ.ಶಿವಯೋಗೆಪ್ಪ ಅರ್ಜುನ ನೇದಲಗಿರವರು ಜಿಲ್ಲಾ ಪಂಚಾಯತಿ ಸದಸ್ಯರಾಗಿ ಕಾರ್ಯನಿರ್ವಹಿಸಿ ಅಪಾರ ಅನುಭವದ ಆಧಾರದ ಮೇಲೆ ಪ್ರಸ್ತುತ ಸಾಲೋಟಗಿ ಜಿಲ್ಲಾ ಪಂಚಾಯತಿ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಸಾಲೋಟಗಿ ಗ್ರಾಮ ಪಂಚಾಯತಿಗೆ ಮಂಜೂರಾದ ಕಾಮಗಾರಿಯನ್ನು ಅನುಷ್ಠಾನಗೊಳ್ಳುವಲ್ಲಿ ರಸ್ತೆಗೆ ಅಡೆತಡೆಯಾದ ಮಂದಿರ, ಮಸೀದಿಗಳನ್ನು ಆಯಾ ಸಮುದಾಯದ ಜನರ ಮನವೊಲಿಸಿ ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನು ಕ್ರಮಕ್ಕೂ ಸಾಧ್ಯವಾಗದ ರೀತಿಯಲ್ಲಿರುವ ಸಮಸ್ಯೆಯನ್ನು ಸರಳವಾಗಿ ಬಗೆಹರಿಸಿ ಅಡತಡೆ ಇರುವ ಎಲ್ಲವನ್ನು ತೆರವುಗೊಳಿಸಿ ಕಾಮಗಾರಿ ಅನುಷ್ಠಾನಗೊಳಿಸಿದ ಕೀರ್ತಿ ಇವರದ್ದಾಗಿದೆ.

ಬೇಸಿಗೆಯಲ್ಲಿ ಸಾಲೋಟಗಿ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ತಲೆದೂರಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕೋರಿಕೆ ಮೇರೆಗೆ ಜಿಲ್ಲಾ ಪಂಚಾಯತಿ ಅಧ್ಯಕ್ಷರು ತಮ್ಮ ತೋಟದ ಬೆಳೆಗೆ ಕಾಯ್ದಿರಿಸಿದ ಸುಮಾರು 3 ಎಕರೆ ವಿಸ್ತರಣೆಯುಳ್ಳ ಕೃಷಿ ಹೊಂಡದ ನೀರನ್ನು ತಮ್ಮ ಬೆಳೆಯ ಲಾಭವನ್ನು ಲೆಕ್ಕಿಸದೆ ಪೈಪ್‌ಲೈನ್ ಮೂಲಕ ಸಾಲೋಟಗಿ ಗ್ರಾಮಕ್ಕೆ ನೀರು ಪೂರೈಸಿ ಮಾನವೀಯತೆ ಮೆರೆದಿದ್ದಾರೆ. ಸಾಲೋಟಗಿ ಗ್ರಾಮ ಹಾಗೂ ತಮ್ಮ ಕ್ಷೇತ್ರದ ಸುತ್ತಮುತ್ತಲಿನ ಗ್ರಾಮದ ಜನ ಜಾನುವಾರುಗಳಿಗೆ ಆದ ನೀರಿನ ಅಭಾವವನ್ನು ಅರಿತು ಮುಂದಿನ ದಿನಗಳಲ್ಲಿ ಇಂತಹ ಸಮಸ್ಯೆ ಈ ಭಾಗಕ್ಕೆ ತಲೆದೂರಬಾರದೆಂದು ತಿಳಿದು ಆಗಲೇ ಅನುಮೋದನೆಗೊಂಡ ಮಲ್ಟಿ ಆರ್ಚ್ ಚೆಕ್ ಡ್ಯಾಂ ಕಾಮಗಾರಿ ನಿರ್ಮಾಣಕ್ಕೆ ಚಾಲನೆ ನೀಡಿದರು.

ಇಂಡಿ ತಾಲ್ಲೂಕಿನ ರೂಗಿ ಹಳ್ಳದ ಸಾಲೋಟಗಿ ಗ್ರಾಮದಿಂದ ಲಾಳಸಂಗಿ ಗ್ರಾಮಗಳ ಮಧ್ಯದಲ್ಲಿ ಹಳ್ಳಕ್ಕೆ ಪ್ರತಿ 300 ಮೀಟರ ಅಂತರದಲ್ಲಿ ಸುಮಾರು 20 ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡಲಾಗಿದೆ. ಈ ರೀತಿ ನಿರ್ಮಾಣವಾದ ಚೆಕ್ ಡ್ಯಾಂಗಳಿಗೆ

ಮಳೆಗಾಲ ಪ್ರಾರಂಭವಾಗಿ ಸುಮಾರು 2 ತಿಂಗಳು ಗತಿಸುತ್ತ ಬಂದರು ಸಹಿತ ಮಳೆ ಬಾರದೆ ಬರಗಾಲ ಆವರಿಸಿದ ಮುನ್ಸೂಚನೆ ಅರಿತು ಹೇಗಾದರೂ ಮಾಡಿ ನಿರ್ಮಾಣವಾದ ಚೆಕ್ ಡ್ಯಾಂಗಳಿಗೆ ನೀರು ಹರಿಸಬೇಕು ಎಂಬ ಆಲೋಚನೆಯಲ್ಲಿರುವಾಗಲೇ ಜುಲೈ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ಸುರಿದ ಭಾರಿ ಮಳೆಯಿಂದ ಕೊಯ್ನಾದಿಂದ ಆಲಮಟ್ಟಿ ಜಲಾಶಯಕ್ಕೆ ಸಾಕಷ್ಟು ನೀರು ಹರಿದು ಬಂದು ಈ ಜಲಾಶಯದಿಂದ ನಾರಾಯಣಪುರ ಜಲಾಶಯಕ್ಕೆ ನೀರು ಬಿಡಲಾಯಿತು. ಈ ಸಂದರ್ಭದಲ್ಲಿ ರೈತರು ಕಾಲುವೆಗಳಿಗೆ ನೀರು ಹರಿಸಲು ಒತ್ತಾಯಿಸಿದಂತೆ ರೈತರ ಒತ್ತಾಯದ ಮೇರೆಗೆ ನಾರಾಯಣಪುರ ಜಲಾಶಯದ ಗುತ್ತಿಬಸವಣ್ಣ ಏತ ನೀರಾವರಿ ಮುಖ್ಯ ಕಾಲುವೆಗೆ ನೀರು ಹರಿಸಲಾಯಿತು. ಈ ಮಧ್ಯದಲ್ಲಿ ಆಗಷ್ಟ ತಿಂಗಳ ಮೊದಲ ವಾರದಲ್ಲಿ ಜಲಾಶಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಿರುವುದನ್ನು ಉಪಯೋಗಿಸಿಕೊಂಡು ಹಳ್ಳಕ್ಕೆ ನಿರ್ಮಾಣವಾದ ಚೆಕ್ ಡ್ಯಾಂಗಳಿಗೆ ಕಾಲುವೆ ನೀರು ಹರಿಸಲು ಗ್ರಾಮ ಪಂಚಾಯತಿ ಅಧ್ಯಕ್ಷರು ಸದಸ್ಯರು, ತಾಲ್ಲೂಕ ಪಂಚಾಯತಿ ಸದಸ್ಯರು ಹಾಗೂ ಗ್ರಾಮದ ರೈತರ ಮತ್ತು ಸಾರ್ವಜನಿಕರ ಸಹಕಾರದ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳಲು ಸಾಧ್ಯವಾಗಿದೆ ಎಂದು ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀ.ಶಿವಯೋಗೆಪ್ಪ ನೇದಲಗಿ ಹರ್ಷ ವ್ಯಕ್ತಪಡಿಸಿದರು.

ಇದರಿಂದ ಹಳ್ಳಕ್ಕೆ ನಿರ್ಮಾಣವಾದ ಎಲ್ಲಾ ಚೆಕ್ ಡ್ಯಾಂಗಳು ಸಂಪೂರ್ಣ ನೀರಿನಿಂದ ಭರ್ತಿಯಾಗಿ ಹಳ್ಳಗಳಿಗೆ ಕಳೆಕಟ್ಟಿದೆ. ಎಡಬಲದ ರೈತರಿಗೆ ಸಾಕಷ್ಟು ಅನುಕೂಲವಾಗಿರುವದಲ್ಲದೆ ಬತ್ತಿಹೋದ ಕೊಳವೆ ಬಾವಿಗಳಿಗೆ ಅಂತರ್ಜಲದಿಂದ ನೀರು ಬರಲಾರಂಭಿಸಿವೆ. ಇದರಿಂದ ಅಲ್ಲಿಯ ಸಂತಸಗೊಂಡ ರೈತರು ಇದಕ್ಕೆಲ್ಲ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರೈತರಿಗೆ ವರದಾನವಾಗಿದೆ. ಈ ರೀತಿ ಹರ್ಷಗೊಂಡ ರೈತರು ಮತ್ತು ಸಾರ್ವಜನಿಕರು ಇಂತಹ ಮಹತ್ವಪೂರ್ಣ ಕಾರ್ಯಕ್ಕೆ ಕಾರಣೀಭೂತರಾದ ವಿಜಯಪುರ ಜಿಲ್ಲಾ ಪಂಚಾಯತಿ ಕ್ರಿಯಾಶೀಲ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೀರಿನಿಂದ ಭರ್ತಿಯಾದ ಚೆಕ್ ಡ್ಯಾಂಗಳ ವೀಕ್ಷಣೆಗೆ ಆಹ್ವಾನಿಸಿದ್ದರಿಂದ ಇವರ ಕೋರಿಕೆಯಂತೆ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಾಲೋಟಗಿ ಗ್ರಾಮದ ಚೆಕ್ ಡ್ಯಾಂಗಳನ್ನು ಪರಿಶೀಲಿಸಿ ಕಾಮಗಾರಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಅಲ್ಲದೆ ಇಂತಹ ಯೋಜನೆಗಳ ಸದುಪಯೋಗಪಡಿಸಿಕೊಳ್ಳುವ ರೈತರಿಗೆ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲಾಗುವುದು.

ಇದರಿಂದ ಹರ್ಷಗೊಂಡ ರೈತರು ಮತ್ತು ಸಾರ್ವಜನಿಕರು ಜಿಲ್ಲಾ ಪಂಚಾಯತಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಾಮಗಾರಿ ಪರಿಶೀಲನೆ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಿದರು. ಪ್ರತಿಯಾಗಿ ಈ ಕಾರ್ಯದಲ್ಲಿ ಭಾಗಿಯಾದ ಹಿಂದಿನ ಸಾಲೋಟಗಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀ.ಆದಮ ಅಗರಖೇಡ ಇಂಡಿ ತಾಲ್ಲೂಕು ಪಂಚಾಯತಿ ಸದಸ್ಯರಾದ ಜೀತಪ್ಪ ಕಲ್ಯಾಣಿ ಹಾಗೂ ಸರ್ವ ಪಂಚಾಯತಿ ಸದಸ್ಯರುಗಳ ರೈತರ ಹಾಗೂ ಸಾರ್ವಜನಿಕರ ಹೆಚ್ಚಿನ ಶ್ರಮದಿಂದ ಇಂತಹ ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಲು ಸಾಧ್ಯವಾಗಿದೆ. ಆದ್ದರಿಂದ ಎಲ್ಲರನ್ನು ಜಿಲ್ಲಾ ಪಂಚಾಯತಿ ಸದಸ್ಯರು ಅಭಿನಂದಿಸಿದರು. ಪರಿಶೀಲನೆ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಯೋಜನಾಧಿಕಾರಿಗಳು, ತಾಂತ್ರಿಕ ಅಧಿಕಾರಿಗಳು, ಗ್ರಾಮ ಪಂಚಾಯತಿ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಬಡತನ, ನಿರುದ್ಯೋಗ ಹೋಗಲಾಡಿಸುವದ ರೊಂದಿಗೆ ಕೂಲಿಕಾರರಿಗೆ ಉದ್ಯೋಗ ಮತ್ತು ಆಸ್ತಿಗಳ ಸೃಜನೆಯ ಮುಖ್ಯ ಗುರಿಯಾಗಿದೆ. ಈ ಕಾಮಗಾರಿಗಳಲ್ಲಿ ಉದ್ಯೋಗದಿಂದ ರೈತರಿಗೆ ಮತ್ತು ಬಡ ಕೂಲಿಕಾರರಿಗೆ ಅಲ್ಪಮಟ್ಟದ ಅನುಕೂಲವಾಗಿದ್ದರೂ ಸಹಿತ ಚೆಕ್ ಡ್ಯಾಂಗಳಂತ ಆಸ್ತಿ ಸೃಜನೆಯಿಂದ ಸಾಕಷ್ಟು ರೈತರಿಗೆ ಜನ ಜಾನುವಾರುಗಳಿಗೆ ನೀರಿನ ಅನುಕೂಲವಾಗಿದ್ದು ನೈಜ ಸತ್ಯ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಇಂತಹ ಮಹತ್ವಪೂರ್ಣ ಯೋಜನೆಯ ಲಾಭವನ್ನು ಎಲ್ಲಾ ಸಾರ್ವಜನಿಕರು ರೈತರು ಆಸಕ್ತಿಯಿಂದ ಪಡೆದುಕೊಳ್ಳಬೇಕು. ■

ವರದಿ



ಧನರಾಜ

ಐ.ಇ.ಸಿ. ಸಂಯೋಜಕರು,
ತಾಲೂಕ ಪಂಚಾಯತಿ,
ರಾಯಚೂರು.
ಮೊ.ಸಂ.:9739752629

ಕುರಿ/ಮೇಕೆ, ಜಾನುವಾರುಗಳಿಗೆ ನೀರು ಕುಡಿಸುವ ಪರಿಸ್ಥಿತಿ ಉಂಟಾಗಿತ್ತು. ಕೆಲವು ಸಮಯದಲ್ಲಿ ಖಾಸಗಿ ಬೋರಿನ ಮಾಲೀಕರು ಕುರಿಗಾರರಿಗೆ ಬೈದ ಉದಾಹರಣೆಗಳಿವೆ. ಈ ತಾಪತ್ರಯದಿಂದಾಗಿ ಕೆಲವರು ಅರ್ಧದಷ್ಟು ಕುರಿಗಳನ್ನು ಮಾರಿಕೊಂಡಿತ್ತಾರೆ.

# ಜೀವ ರಾಶಿಗಳಿಗೆ ಜೀವಜಲ

ಕಲ್ಯಾಣ ಕರ್ನಾಟಕದಲ್ಲಿರುವ ರಾಯಚೂರು ತಾಲ್ಲೂಕು ದೋಆಬ್ (ತುಂಗಾಭದ್ರಾ, ಕೃಷ ನದಿಗಳ) ಮದ್ಯದಲ್ಲಿದೆ. ತಾಲ್ಲೂಕು ಕೇಂದ್ರದಿಂದ ಸುಮಾರು 22 ಕಿ.ಮೀ ದೂರದಲ್ಲಿ ತೆಲಂಗಾಣ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಬಾಪೂರು ಗ್ರಾಮವು ಸಿಂಗನೋಡಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುತ್ತದೆ. ಇಲ್ಲಿನ ಜನರು ಕೃಷಿ, ಕೂಲಿ, ಮತ್ತು ಕುರಿ ಸಾಕಾಣಿಕೆ ಮುಖ್ಯ ಕಸಬು ಅಗಿರುತ್ತದೆ. ಇಲ್ಲಿನ ಭೂ ಪ್ರದೇಶವು ಬಹುತೇಕ ಎತ್ತರ ಪ್ರದೇಶವಾಗಿದ್ದು, ಕೆಂಪು ಮಿಶ್ರಿತ ಭೂಮಿಯಾಗಿದ್ದು, ಯಾವುದೇ ನೀರಾವರಿ ಸೌಲಭ್ಯ ವ್ಯೆವಸ್ಥೆ ಇರುವುದಿಲ್ಲ.

ಸತತವಾಗಿ ಎರಡು ಮೂರು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರುವುದರಿಂದ, ನೀರಿಲ್ಲದೇ ಎಲ್ಲಾ ಕೆರೆ ಕುಂಟೆಗಳು ಬತ್ತಿಹೋಗಿದ್ದವು. ಈ ಗ್ರಾಮದಲ್ಲಿನ ಜಾನುವಾರುಗಳಿಗೆ ಅನಿವಾರ್ಯವಾಗಿ ಖಾಸಗಿ ಬೋರ್‌ಗಳಿಂದ ನೀರನ್ನು ಒತ್ತುಹಾಕಿ ಕುರಿ/ಮೇಕೆ, ಜಾನುವಾರುಗಳಿಗೆ ನೀರು ಕುಡಿಸುವ ಪರಿಸ್ಥಿತಿ ಉಂಟಾಗಿತ್ತು. ಕೆಲವು ಸಮಯದಲ್ಲಿ ಖಾಸಗಿ



ಬೋರಿನ ಮಾಲೀಕರು ಕುರಿಗಾರರಿಗೆ ಬೈದ ಉದಾಹರಣೆಗಳಿವೆ. ಈ ತಾಪತ್ರಯದಿಂದಾಗಿ ಕೆಲವರು ಅರ್ಧದಷ್ಟು ಕುರಿಗಳನ್ನು ಮಾರಿಕೊಂಡಿತ್ತಾರೆ. ಇಂತಹ ಸಂದರ್ಭದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ "ನೆಲ ಜಲ ಸಂರಕ್ಷಣ" ದ ಚಟುವಟಿಕೆಗಳ ಕುರಿತು ಜಿಲ್ಲಾ ಪಂಚಾಯತಿ ಹಾಗೂ ಹೆಚ್‌ಯುಎಫ್ ಸಮೂಹ ಸಂಸ್ಥೆ ವತಿಯಿಂದ ಸಾರ್ವಜನಿಕರಿಗೆ ಅರಿವು ಮೂಡಿಸಿ, 2019-20ನೇ ಸಾಲಿನಲ್ಲಿ ಈ ಗ್ರಾಮದ ವ್ಯಾಪ್ತಿಗೊಳಪಡುವ ಒಟ್ಟು 4 ಕೆರೆಗಳನ್ನು ಅಲ್ಪ-ಸ್ವಲ್ಪ ಹೊಳೆತ್ತಲಾಗಿದೆ. ಈ ನಾಲ್ಕು ಕೆರೆಗಳ ಪೈಕಿ ಗೋಕುಂಟ ಕೆರೆ ಒಂದಾಗಿದೆ. ಈ ಕೆರೆಯು ಸುಮಾರು

16 ಎಕರೆ ವಿಸ್ತೀರ್ಣ ಹೊಂದಿದ್ದು, ಈ ವರ್ಷದಲ್ಲಿ ನೀರಿನ ಒಳ ಅರಿವು ಭಾಗದಲ್ಲಿ ಕೆರೆ ಹೊಳೆತ್ತಲಾಗಿದ್ದು, 1826 ಮಾನವ ದಿನಗಳನ್ನು ಸೃಜಿಸಿ, ಬೇಸಿಗೆ ಸಮಯದಲ್ಲಿ ಕೂಲಿಕಾರರಿಗೆ ಕೆಲಸ ಒದಗಿಸಿ ಜೀವನಾದರಕ್ಕಾಗಿ ಕೆಲಸ ಕಲ್ಪಿಸಿ ಕೊಡಲಾಗಿದೆ. ರೂ. 454674/– ಮೊತ್ತವನ್ನು ಕೂಲಿಕಾರರಿಗೆ ಪಾವತಿಯಾಗಿರುತ್ತದೆ. ಶ್ರೀಮತಿ.ನರಸಮ್ಮರವರು ನಮಗೆ ಬರಗಾಲದಲ್ಲಿ ನರೇಗಾ ಕೆಲಸ ಮಾಡಿರುವುದರಿಂದ ನನ್ನ ಕೈಗೆ ರೂ.7400/–ಗಳ ಕೂಲಿ ಮೊತ್ತ ಪಾವತಿಯಾಗಿರುವುದರಿಂದ ಜೀವನ ನಡೆಸಲು ಸಹಕಾರಿಯಾಗಿರುವ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಈ ಕೆರೆಯು ತಗ್ಗು ಪ್ರದೇಶದಲ್ಲಿರುವುದರಿಂದ 2019ರ ಜುಲೈ ಮೊದಲನೇ ವಾರದಲ್ಲಿ ಬಿದ್ದ ಅಲ್ಪ ಮಳೆಯ ಪರಿಣಾಮ ಸುಮಾರು ಎರಡು ತಿಂಗಳ ಕಾಲ ನೀರು ಸಂಗ್ರಹವಾಗಿವೆ. ಮತ್ತು ಸೆಪ್ಟಂಬರ್ ಕೊನೆಯ ವಾರದಲ್ಲಿ ಉತ್ತಮವಾಗಿ ಮಳೆ ಅಗಿರುವುದರಿಂದ ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹವಾಗಿರುವುದರಿಂದ ಸುಮಾರು 20 ಸಾವಿರ ಜಾನುವಾರುಗಳಿಗೆ ಜೀವ ಜಲವಾಗಿ ನಿಂತಿದೆ. ಈ ಕೆರೆ ಕೆಳಭಾಗದಲ್ಲಿರುವ ಮೂರು ಬತ್ತಿಹೊದ ಖಾಸಗಿ ಬೋರವೇಲ್‌ಗಳು ಮತ್ತೇ ಪುನಶ್ಚೇತನಗೊಂಡು ಅಂತರ್ಜಲ ಹೆಚ್ಚಾದ ಕಾರಣ ರೈತನ ಸಣ್ಣ ಕೃಷಿಗೆ ಸಹಾಯವಾಗಿದೆ.

ಈ ಮೂರು ಜನ ರೈತರ ಪೈಕಿ ಒಬ್ಬರಾದ ರಮೇಶ ನಮ್ಮೊಂದಿಗೆ ಹಂಚಿಕೊಂಡಿದ್ದು ನನ್ನ 4 ಎಕರೆ ಹೊಲದಲ್ಲಿ ಕಳೆದ ವರ್ಷ ನೀರಿಲ್ಲದೇ ಪೈರು ಒಣಗಿ ಹೋಗಿತ್ತು. ಈ ವರ್ಷ ಅದೇ ಹೊಲದಲ್ಲಿ ಹತ್ತಿ ಮತ್ತು ಈರುಳ್ಳಿ ಬೆಳೆಯನ್ನು ಬೆಳೆದಿದ್ದು, ಈ ಕೆರೆಯಲ್ಲಿ ನೀರು ಸಂಗ್ರಹವಾಗಿರುವುದರಿಂದ ನನ್ನ ಬೋರವೇಲ್‌ಗೆ ಅಂತರ್ಜಲ ಹೆಚ್ಚಾದ ಸಲುವಾಗಿ, ಬೆಳೆ ಚೆನ್ನಾಗಿ ಇದೆ ಮತ್ತು ಸುಮಾರು 60 ಕ್ವಿಂಟಲ್ ಈರುಳ್ಳಿ ಬೆಳೆಯಬಹುದೆಂದು ಅಂದಾಜಿಸಿದ್ದಾನೆ. ಇನ್ನೂ ಸಾಕಷ್ಟು ಅಭಿವೃದ್ಧಿಪಡಿಸಿದ್ದೇ ಅದರೆ ಇನ್ನುಳಿದ ರೈತರಿಗೆ ಅನುಕೂಲವಾಗಬಹುದು.

ಅದೇ ರೀತಿಯಾಗಿ ಕುರಿಗಾರರ ಪೈಕಿ ಶ್ರೀ. ದೊಡ್ಡ ಕರೆಯಪ್ಪ ಇವರು ಈ ವರ್ಷ ನೀರು ಇದ್ದಂತೆ, ಕಳೆದ ವರ್ಷ ಕೆರೆಯಲ್ಲಿ ನೀರಿದ್ದಿದ್ದರೆ ನಾನು 1500 ಕುರಿಗಳನ್ನು ಮಾರುತ್ತಿರಲ್ಲಿಲ್ಲ, ಏಕೆಂದರೆ ಕುರಿಗಳಿಗೆ ನೀರು ಉಣಿಸುವ ಸಲುವಾಗಿ ನಾವು ಬೈಸಿಕೊಂಡಿದ್ದೇವೆಂದು ತಮ್ಮ ಬೇಸರ ವ್ಯಕ್ತಪಡಿಸಿ, ಈ ಕೆರೆಯ ನೀರು ನಮ್ಮ ಊರಿಗೆ ಅಷ್ಟೇ ಅಲ್ಲದೇ ಪಕ್ಕದ ತೆಲಂಗಣ ರಾಜ್ಯದ ಸುಲ್ತಾನಪೂರು ಗ್ರಾಮದ ಸುಮಾರು ಸಾವಿರಾರು ಜಾನುವಾರುಗಳು ಪ್ರತಿ ದಿನ ಬಂದು ನೀರು ಕುಡಿದು ಹೋಗುತ್ತವೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.



ಜನರ ಹರ್ಷವನ್ನು ಆಲಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈ ವರ್ಷ ಇಲ್ಲಿಯವರೆಗೂ ಅದ ಮಳೆಯಿಂದಾಗಿ ಈ ರೀತಿಯಾಗಿ ಅನುಕೂಲವಾಗುತ್ತದೆಂದು ನೀರಿಕ್ಷಿಸಿರಲಿಲ್ಲ ಆದರೆ ಪ್ರಕೃತಿ ನಿಯಮಾನುಸಾರದಿಂದಾಗಿ ಒಳ್ಳೆದಾಗಿದೆ. ಮುಂಬರುವ ದಿನಗಳಲ್ಲಿ ಅದ್ಯತೆ ಮೇರೆಗೆ ಈ ಕೆರೆಯ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆ ಮಾಡಲಾಗುವುದು ಎಂದು ಉತ್ಸಕತೆಯನ್ನು ವ್ಯಕ್ತಪಡಿಸಿ, ಇದಕ್ಕೆಲ್ಲಾ ಸಹಕರಿಸಿದ ಗ್ರಾಮ ಪಂಚಾಯತಿ ಪ್ರತಿನಿಧಿಗಳು, ಸಿಬ್ಬಂದಿಗಳು, ಕಾರ್ಮಿಕರಿಗೂ ಮತ್ತು ಕಾರ್ಯನಿರ್ದೇಶನ ನೀಡಿರುವ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರ ನಿರಂತರ ಪ್ರೋತ್ಸಾಹದಿಂದಾಗಿ ಮತ್ತು ಹೆಚ್‌ಯುಎಫ್ ಸಮೂಹ ಸಂಸ್ಥೆಯವರು ಮತ್ತು ತಾಲ್ಲೂಕಿನ ಮಹಾತ್ಮ ಗಾಂಧಿ ನರೇಗಾ ಸಿಬ್ಬಂದಿಯವರ ಮಾರ್ಗದರ್ಶನದಿಂದಾಗಿ ಯಶಸ್ವಿಗೆ ಕಾರಣವಾಗಿದೆ ಎಂದು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

**ಯಶೋಗಾಥೆ**



**ಕೆ.ಜಿ. ಪ್ರಭುಸ್ವಾಮಿ**

ಯೋಜನಾ ನಿರ್ದೇಶಕರು,
ಜಿಲ್ಲಾ ಪಂಚಾಯತಿ,
ಚಾಮರಾಜನಗರ

# ಸಂಜೀವಿನಿ ಸ್ವ-ಸಹಾಯ ಸಂಘಗಳು

ಮಾನವ ಜೀವಿಯು ಪ್ರಕೃತಿಯ ವಿಶೇಷತೆಗಳಲ್ಲಿ ಒಂದಾಗಿದ್ದು ಪ್ರಾಣಿ ಪ್ರಭೇಧದಲ್ಲಿಯೂ ಹಲವು ವಿಶೇಷತೆಗಳನ್ನು ಹೊಂದಿರುವ ಏಕೈಕ ಜೀವಿಯಾಗಿರುತ್ತದೆ. ಮಾನವ ಜೀವಿಯು ಅಂಕುರಿಸಿದ ಪ್ರತಿ ಹಂತದಲ್ಲೂ ಅಂದರೆ ಗರ್ಭದಿಂದ ಗೋರಿಯವರೆಗಿನ ಪ್ರತಿ ಹಂತದಲ್ಲೂ ಮಾನವನಿಗೂ ಪರಿಸ್ಥಿತಿಗೂ ತಾಕಲಾಟ ನಡೆದು ಹಲವು ಏಳು-ಬೀಳುಗಳ ನಂತರ ಕಲಿಕೆಯ ಫಲವಾಗಿ ಮಾನವ ಸಾಧನೆಯ ಉತ್ತುಂಗವನ್ನೇರುವುದೇ ಜೀವನದ ಸಾರವಾಗಿರುತ್ತದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಮಧುವಿನಹಳ್ಳಿ ಎಂಬ ಗ್ರಾಮ ಪಂಚಾಯಿತಿಯ ನಿವಾಸಿಯಾದ ಪಂಕಜಾರವರು ತಮ್ಮ ಜೀವನವನ್ನು ಗ್ರಾಮೀಣ ಪ್ರದೇಶದ ವಾತಾವರಣದಲ್ಲಿ ಬೆಳೆದು, ಗಂಡ ತರುವ ಅಲ್ಪ ಕೂಲಿ ಹಣದಲ್ಲೇ ನೆಮ್ಮದಿಯ ಜೀವನ ಜೀವನ ನಡೆಯುತ್ತಿದ್ದು, ಇವರಿಗೆ ಮೂವರು ಹೆಣ್ಣು ಮಕ್ಕಳಿದ್ದಾರೆ. ಬರಬರುತ್ತಾ ಗಂಡ ತರುತ್ತಿದ್ದ ಕೂಲಿ ಹಣ ಜೀವನ ನಿರ್ವಹಣೆಗೆ ಸಾಕಾಗದೇ ತಮ್ಮ ತುತ್ತಿನ ಚೀಲದೊಂದಿಗೆ ಮಕ್ಕಳ ವಿದ್ಯಾಭ್ಯಾಸವನ್ನು ಸಹ ಮಾಡಬೇಕಾದ್ದರಿಂದ ತಮ್ಮ ಮನೆ ಕೆಲಸದಲ್ಲಿ ಮಾತ್ರ ಸೀಮಿತವಾಗಿದ್ದ ಪಂಕಜರವರು ಅನಿವಾರ್ಯವಾಗಿ ಹೊರಗಡೆ ಹೋಗಿ ಕೂಲಿ ಮಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಯಿತು. ಪ್ರತಿದಿನ ದಂಪತಿಗಳಿಬ್ಬರೂ ಕೂಲಿ ಮಾಡಿದರೂ ಸಹ ರೂ.200 ರಿಂದ 300 ರೂಪಾಯಿಗಳನ್ನು ಸಂಪಾದಿಸುವುದು ಕಷ್ಟಕರವಾಗಿತ್ತು. ಅರೆ ಹೊಟ್ಟೆಯಲ್ಲಿ ಜೀವಿಸುವ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ಸಂದರ್ಭದಲ್ಲಿ ನೆರೆ-ಹೊರೆಯವರು ತಾವು "ಅಪೂರ್ವ ಜ್ಯೋತಿ ಮಹಿಳಾ ಸ್ವ-ಸಹಾಯ ಸಂಘ"ಕ್ಕೆ ಸೇರಿಕೊಂಡಿದ್ದು ಅದರಲ್ಲಿ ತಮ್ಮನ್ನು ಸದಸ್ಯರಾಗುವಂತೆ ಒತ್ತಾಯಿಸಿದರು. ಅವರ ಬಲವಂತದಿಂದ ಒಲ್ಲದ ಮನಸ್ಸಿನಿಂದ ಸೇರಿಕೊಂಡಾಗ ಪ್ರತಿ ವಾರ ಸಭೆ ಸೇರುವುದು, ಉಳಿತಾಯ ಮಾಡುವುದು, ವಿವಿಧ ವಿಷಯಗಳ ಕುರಿತಂತೆ ಚರ್ಚಿಸುವುದು ಹೀಗೆ ಸ್ವ-ಸಹಾಯ ಸಂಘದಲ್ಲಿ ಹಲವಾರು ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು. ಮೊದಮೊದಲು ಉಳಿತಾಯ ಹಣವನ್ನು ನೀಡಲಾಗದೇ ಸಂಘದ ಸಭೆಗಳಿಗೆ ಗೈರು ಹಾಜರಾಗುತ್ತಿದ್ದೆ ಸಂಘದ ಇತರೇ ಸದಸ್ಯರುಗಳು ಮನೆಗೆ ಭೇಟಿ ನೀಡಿ ಸ್ವ-ಸಹಾಯ ಸಂಘಕ್ಕೆ ಗೈರು ಹಾಜರಾಗುವಂತಿಲ್ಲ ಎಂದು ಹೇಳಿ ಸಂಘದ ಪ್ರಾಮುಖ್ಯತೆಯನ್ನು ತಿಳಿಸಿದರು. ಅಂದಿನಿಂದ ಸಂಘದ ಸಭೆಗಳಿಗೆ ತಪ್ಪದೇ ಹಾಜರಾಗುವಂತಾಯಿತು.

**ಸ್ವ-ಸಹಾಯ ಸಂಘಕ್ಕೆ ಎನ್‌ಆರ್‌ಎಲ್‌ಎಂ ವತಿಯಿಂದ ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಭೇಟಿ ನೀಡಿ ಸಂಘದ ಸದಸ್ಯರು ಉಳಿತಾಯ ಮಾಡಿದ ಹಣವನ್ನು ಬ್ಯಾಂಕಿಗೆ ಕಟ್ಟುವುದು, ಬ್ಯಾಂಕಿನ ಮಹತ್ವ, ಸಾಲ ಸೌಲಭ್ಯಗಳನ್ನು ಪಡೆಯುವುದು**

ಅದೊಂದು ದಿನ ಸ್ವ-ಸಹಾಯ ಸಂಘಕ್ಕೆ ಎನ್‌ಆರ್‌ಎಲ್‌ಎಂ ವತಿಯಿಂದ ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಭೇಟಿ ನೀಡಿ ಸಂಘದ ಸದಸ್ಯರು ಉಳಿತಾಯ ಮಾಡಿದ ಹಣವನ್ನು ಬ್ಯಾಂಕಿಗೆ ಕಟ್ಟುವುದು, ಬ್ಯಾಂಕಿನ ಮಹತ್ವ, ಸಾಲ ಸೌಲಭ್ಯಗಳನ್ನು ಪಡೆಯುವುದು, ಬ್ಯಾಂಕಿನ ವ್ಯವಹರಣೆಯಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರ ಪಾತ್ರ ಮತ್ತು ಜವಾಬ್ದಾರಿಗಳ ಕುರಿತಂತೆ ವಿಸ್ತೃತವಾಗಿ ತಿಳಿಸಿಕೊಟ್ಟರು. ನಂತರ ಬ್ಯಾಂಕಿನಿಂದ ಸಾಲವನ್ನು ಪಡೆಯಲು ಮುಂದಾಗಿ ಈ ಸಾಲದ ಹಣದಿಂದ ಕುಟುಂಬದ ಸಂಕಷ್ಟ ಅಲ್ಪಪ್ರಮಾಣದಲ್ಲಿ

ಕಡಿಮೆಯಾಗಿತ್ತಾ ಬಂತು ಇದರಿಂದ ಸ್ವ-ಸಹಾಯ ಸಂಘದ ಮಹತ್ವವನ್ನು ಅರಿತರು.

ಸ್ವಲ್ಪ ದಿನಗಳ ನಂತರ ಎನ್.ಆರ್.ಎಲ್.ಎಂ ಸಂಜೀವಿನಿ ಯೋಜನೆಯ ಅಧಿಕಾರಿ/ಸಿಬ್ಬಂದಿಗಳು ನಮ್ಮ ಸ್ವ-ಸಹಾಯ ಸಂಘಕ್ಕೆ ಭೇಟಿ ನೀಡಿ ಎನ್.ಆರ್. ಎಲ್.ಎಂ ಯೋಜನೆಯಿಂದ ಸ್ವ-ಸಹಾಯ ಸಂಘಗಳಿಗೆ ಆಗುವ ಪ್ರಯೋಜನಗಳ ಬಗ್ಗೆ ವಿವರಿಸುತ್ತಾ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಎನ್.ಆರ್.ಎಲ್.ಎಂ ಯೋಜನೆ ಜಾರಿಗೆ ತಂದಿದ್ದು ಬಡತನ ನಿರ್ಮೂಲನೆ ಮೂಲ ಉದ್ದೇಶವಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಪ್ರತಿ ಕುಟುಂಬದಿಂದ




ಒಬ್ಬ ಮಹಿಳಾ ಸದಸ್ಯರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ, ಒಂದು ಸ್ವ-ಸಹಾಯ ಸಂಘದಿಂದ ಇಬ್ಬರು ಸದಸ್ಯರನ್ನು ಸ್ವತಃ ಸದಸ್ಯರೇ ಆಯ್ಕೆ ಮಾಡಿ ವಾರ್ಡ್ ಮಟ್ಟದ ಒಕ್ಕೂಟದ ರಚನೆ ಹಾಗೇ ಸದರಿ ವಾರ್ಡ್ ಮಟ್ಟದ ಒಕ್ಕೂಟದಿಂದ ಮೂವರು ಸದಸ್ಯರನ್ನು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಕ್ಕೂ ಆಯ್ಕೆ ಮಾಡಿ ಒಕ್ಕೂಟವನ್ನು ರಚಿಸಿ ಅವರಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುವುದು, ಸದರಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಕ್ಕೆ ಸಮುದಾಯ ಬಂಡವಾಳ ನಿಧಿಯನ್ನಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸ್ವ-ಸಹಾಯ ಸಂಘಗಳಿಗೆ ರೂ.1,25,000/-ಗಳನ್ನು ಮತ್ತು ಇತರೇ ಸಂಘಗಳಿಗೆ ರೂ.75,000/-ಗಳ ಅನುದಾನವನ್ನು ಕಿರು ಬಂಡವಾಳ ಯೋಜನೆ ಸಿದ್ದಪಡಿಸಿ ಆದ್ಯತೆಯ ಅನುಸಾರ ನೀಡಲಾಗುವುದು.

ಮೊದಮೊದಲು ಎನ್.ಆರ್.ಎಲ್.ಎಂ ಯೋಜನೆಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾದರೂ ಕಾಲ ಕ್ರಮೇಣ ನಿರಂತರವಾಗಿ ವಾರ್ಡ್ ಮಟ್ಟದ ಒಕ್ಕೂಟ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ಸಭೆಗಳಲ್ಲಿ ಭಾಗವಹಿಸುವ ಮೂಲಕ ವಿಷಯಗಳನ್ನು ಅರ್ಥಮಾಡಿಕೊಳ್ಳಲಾಯಲಿತು. ನಮ್ಮ ಸ್ವ-ಸಹಾಯ ಸಂಘವು "ನಿಧಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ"ವೆಂದು ನಾಮಕರಣ ಮಾಡಲಾಗಿದೆ.

2018-19ನೇ ಸಾಲಿನಲ್ಲಿ ನಿಧಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಕ್ಕೆ ಎನ್.ಆರ್.ಎಲ್. ಎಂ ಯೋಜನೆಯಿಂದ ಸಮುದಾಯ ಬಂಡವಾಳ ನಿಧಿಯನ್ನು ವಿತರಿಸಿರುವುದಾಗಿಯೂ ಅದಕ್ಕಾಗಿ ಕಿರು ಬಂಡವಾಳ ಯೋಜನೆಯನ್ನು ಸಿದ್ದಪಡಿಸಬೇಕೆಂದು ಆದ್ಯತಾನುಸಾರ ಸಮುದಾಯ ಬಂಡವಾಳ ನಿಧಿಯನ್ನು ವಿತರಿಸುವುದಾಗಿಯೂ, ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರು ತಿಳಿಸಿದ ಮೇರೆಗೆ ನಮ್ಮ ಸ್ವ-ಸಹಾಯ ಸಂಘದಿಂದಲೂ ಕಿರು ಬಂಡವಾಳ ನಿಧಿಯನ್ನು ತಯಾರಿಸಲಾಯಿತು, ಅದರಲ್ಲಿ ಸಂಘದ ಸದಸ್ಯರ ಆದಾಯದಿಂದ ಖರ್ಚು-ವೆಚ್ಚಗಳನ್ನು ಕಳೆದು ಉಳಿದ ಹಣದಿಂದ ಮರುಪಾವತಿ ಹಾಗೂ ಪಡೆಯುವ ಸಮುದಾಯ ಬಂಡವಾಳ ನಿಧಿಯಿಂದ ಕೈಗೊಳ್ಳುವ ಜೀವನೋಪಾಯ ಚಟುವಟಿಕೆಗಳ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

ಕಿರು ಬಂಡವಾಳ ಯೋಜನೆಯ ಆದ್ಯತಾನುಸಾರ ನನ್ನ ಸರದಿ ಬಂದಾಗ ಯಾವ ಜೀವನೋಪಾಯ ಚಟುವಟಿಕೆಯನ್ನು ಕೈಗೊಳ್ಳಬೇಕೆಂದು ಗೊಂದಲ ಮೂಡಿತು, ನಂತರ ಈ ಬಗ್ಗೆ ಕುಟುಂಬದವರೊಂದಿಗೆ, ನೆರೆ-ಹೊರೆಯವರೊಂದಿಗೆ ಚರ್ಚಿಸಿದರೂ ಸಹ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ, ಹೀಗೆ ಯೋಚಿಸುತ್ತಿರುವ ಸಂದರ್ಭದಲ್ಲಿ ಸ್ವ-ಸಹಾಯ ಸಂಘದ ಸದಸ್ಯರುಗಳು ಕೈಗೊಳ್ಳಬಹುದಾದ ಚಟುವಟಿಕೆಗಳ ಕುರಿತಂತೆ ಮ್ಯಾಟ್ ತಯಾರಿಕೆ, ಗಂಧದಕಡ್ಡಿ ತಯಾರಿಕೆ, ಮಸಾಲಾ ಪದಾರ್ಥಗಳ ತಯಾರಿಕೆ, ಅಣಬೆ ಬೇಸಾಯ ಹೀಗೆ ಹಲವಾರು ವಿವಿಧ ತರಬೇತಿಗಳಲ್ಲಿ ಆಸಕ್ತಿ ಇರುವವರಿಗೆ ತರಬೇತಿ ನೀಡುವುದಾಗಿ ಎನ್.ಆರ್. ಎಲ್.ಎಂ ಅಧಿಕಾರಿ/ಸಿಬ್ಬಂದಿಗಳು ಸಂಘದ ಸಭೆಗಳಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹೇಳಿದ ನೆನಪಾಗಿ

ಅವರೊಂದಿಗೆ ಅಣಬೆ ಬೇಸಾಯ ಮಾಡುವ ಬಗ್ಗೆ ಇಂಗಿತ ವ್ಯಕ್ತಪಡಿಸಿದಾಗ ಅವರು ಸಂತೋಷದಿಂದ ಅಣಬೆ ಬೇಸಾಯದ ಕುರಿತಂತೆ ತಮಿಳುನಾಡಿನ ಗೋಪಿಚಟ್ಟಿಯೂರಿನಲ್ಲಿ ಸಂಪನ್ಮೂಲ ವ್ಯಕ್ತಿಗಳು ಲಭ್ಯವಿದ್ದು ತರಬೇತಿಯನ್ನು ಆಯೋಜಿಸುವುದಾಗಿ ತಿಳಿಸಿದರು.

ಅದಮ್ಯ ಆಸಕ್ತಿ, ತಡೆಯಲಾಗದ ಕುತೂಹಲ ದಿಂದಾಗಿ ಗೋಪಿಚಟ್ಟಿಯೂರಿನಲ್ಲಿ ನನ್ನ ಸಂಬಂಧಿಕರಿರುವುದರಿಂದ ಅವರನ್ನು ವಿಚಾರಿಸಿಕೊಂಡು ಎನ್.ಆರ್.ಎಲ್.ಎಂ ಅಧಿಕಾರಿಗಳ ಸಹಾಯದಿಂದ ಸದರಿ ಸಂಸ್ಥೆಯಿಂದ 3 ದಿನಗಳ ತರಬೇತಿಯನ್ನು ಪಡೆದುಕೊಂಡು, ನಂತರ ಸಮುದಾಯ ಬಂಡವಾಳ ನಿಧಿಯನ್ನಾಗಿ ಸಂಜೀವಿನಿ ಯೋಜನೆಯಿಂದ ರೂ.50,000/- ಗಳನ್ನು ಪಡೆದು ಸಂಬಂಧಿಕರು ಬಳಸದಿರುವ 30X40 ಜಾಗದ ಕಚ್ಚಾಮನೆಯಲ್ಲಿ ಅಣಬೆ ಬೇಸಾಯವನ್ನು ಮಾಡಲು ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲಾಯಿತು.

ಡಾ॥ಹರೀಶ್‌ಕುಮಾರ್‌ರವರು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆರವರು ಅಣಬೆ ಬೇಸಾಯ ಘಟಕವನ್ನು ಉದ್ಘಾಟಿಸಿ ಸ್ವ-ಸಹಾಯ ಸಂಘದ ಮಹಿಳೆಯರು ಇಂತಹ ವಿನೂತನ ಜೀವನೋಪಾಯ ಚಟುವಟಿಕೆಗಳನ್ನು ಪ್ರಾರಂಭಿಸಬೇಕೆಂದು ಅದಕ್ಕಾಗಿ ಯಾವುದೇ ಸಹಾಯವನ್ನು ಸರ್ಕಾರಿ ಯೋಜನೆಗಳಿಂದ ದೊರಕಿಸಲು ಸಿದ್ದವೆಂದು ಹಿತನುಡಿದರು.

ಅಣಬೆ ಬೇಸಾಯವು 60 ರಿಂದ 65 ದಿನದಾಗಿದ್ದು, ಮೊದಲ 21 ದಿನಗಳ ಕಾಲ ಹಾರೈಕೆ ಮಾಡಬೇಕು ನಂತರ 22ನೇ ದಿನದಿಂದ ಅಣಬೆ ದೊರೆಯಲು ಪ್ರಾರಂಬಿಸುತ್ತದೆ. ಮೊದಲು ದಿನಕ್ಕೆ 3 ರಿಂದ 5 ಕೆ.ಜಿಯಷ್ಟು ಬೆಳೆ ಬರುತ್ತದೆ. ನಂತರದ ದಿನಗಳಲ್ಲಿ ಪ್ರತಿ ದಿನ 8 ರಿಂದ 10 ಕೆ.ಜಿಯಷ್ಟು ದೊರೆಯುತ್ತದೆ. ಪ್ರತಿ ಕೆ.ಜಿಗೂ ರೂ.150 ರಿಂದ 160 ರವರೆಗೆ ಮಾರಾಟ ಮಾಡುತ್ತಾರೆ. ಪ್ರತಿ ದಿನವು ಕೂಡ ರೂ.1300 ರಿಂದ 1400 ರವರೆಗೆ ಸಂಪಾದಿಸುತ್ತಾರೆ. ಪ್ರತಿ ಕೆ.ಜಿ ಅಣಬೆ ಬಿತ್ತನೆ ಬೀಜಕ್ಕೆ ರೂ.80/- ಗಳಾಗುತ್ತದೆ. ಒಂದು ಕೆ.ಜಿಗೆ 6 ರಿಂದ 8 ಕೆ.ಜಿ ಅಣಬೆ ದೊರೆಯುತ್ತದೆ. 45 ದಿನಗಳವರೆಗೂ ಅಂದಾಜು ರೂ.58,500/- ವರೆಗೂ ಸಂಪಾದಿಸಬಹುದು ಖರ್ಚು ಅಂದಾಜು



ರೂ15,000.00 ರಿಂದ 18000.00 ವರೆಗೂ ಇರುತ್ತದೆ. 2 ರಿಂದ 3 ತಿಂಗಳಿನಲ್ಲಿ ಅಂದಾಜು ರೂ.40,000/- ತನಕ ಸಂಪಾದಿಸಬಹುದು.

ಸಂಜಿವಿನಿ ಸಿಬ್ಬಂದಿಗಳ ಸಹಕಾರದಿಂದ ಕೊಳ್ಳೇಗಾಲ ಪಟ್ಟಣದಲ್ಲಿರುವ ಮೋರ್‌ಮಾಲ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಪ್ರತಿ ದಿನ ಅಣಬೆಯನ್ನು ಸದರಿ ಸಂಸ್ಥೆಗೆ ಮಾರಾಟ ಮಾಡಲಾಗುತ್ತಿದೆ. ಅಣಬೆ ಬೇಸಾಯದಿಂದ ಬರುವ ಆದಾಯದಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿದ್ದು ಇದರ ಪರಿಣಾಮ ನಮ್ಮ ಸಾಮಾಜಿಕ ಸ್ಥಿತಿ-ಗತಿಯಲ್ಲೂ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಎನ್.ಆರ್.ಎಲ್.ಎಂನಿಂದ ನೀಡುವ ಸಮುದಾಯ ಬಂಡವಾಳ ನಿಧಿಯನ್ನು ಸದ್ಬಳಕೆ ಮಾಡಿಕೊಂಡಿದ್ದು ತಮ್ಮಂತೆ ಇತರೇ ಮಹಿಳೆಯರು ವಿವಿಧ ಜೀವನೋಪಾಯ ಚಟುವಟಿಕೆಗಳನ್ನು ಪ್ರಾರಂಭಿಸುವ ಮೂಲಕ ಪ್ರತಿ ಸ್ವ-ಸಹಾಯ ಸಂಘದ ಮಹಿಳೆಯರು ಸಹ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳ ಬೇಕೆಂದು ಫಲಾನುಭವಿಗಳಾದ ಶ್ರೀಮತಿ.ಪಂಕಜರವರು ತಮ್ಮ ಮನದಾಳದ ಮಾತನ್ನು ವ್ಯಕ್ತಪಡಿಸಿದರು.

## ಬದುಕಲು ಆಧಾರವಾದ ತರಕಾರಿ ವ್ಯಾಪಾರ ಫಲಾನುಭವಿ ಕೈಗೊಂಡಿರುವ ಚಟುವಟಿಕೆ

ಪುಟ್ಟಮ್ಮರವರು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಿಂದ ಸುಮಾರು 15 ಕಿ.ಮೀ ದೂರವಿರುವ ಕಪಿಲಾ ನದಿಯ ದಡದಲ್ಲಿರುವ ಹುಲ್ಲಹಳ್ಳಿ ಗ್ರಾಮದವರಾಗಿದ್ದು, ಇವರು ಮೊದಲಿಗೆ ಗೃಹಿಣಿಯಾಗಿ ಮನೆ ಕೆಲಸ ನಿರ್ವಹಿಸುತ್ತಿದ್ದರು. ಶ್ರೀ.ಶಾರದ ಮಹಿಳಾ ಸ್ವ-ಸಹಾಯ ಸಂಘದ ಕ್ರಿಯಾಶೀಲ ಸದಸ್ಯರಾಗಿರುತ್ತಾರೆ. ಪುಟ್ಟಮ್ಮರವರ ಪತಿ

ಅಕಾಲಿಕ ಮರಣ ಹೊಂದಿದ ಕಾರಣ ಕುಟುಂಬದ ನಿರ್ವಹಣೆ ಅತ್ಯಂತ ಕಷ್ಟಕರವಾಗಿತ್ತು. ಕುಟುಂಬದ ಸಂಪೂರ್ಣ ಜವಾಬ್ದಾರಿ ಇವರ ಮೇಲೆ ಬಿದ್ದಿತ್ತು. ಆ ಸಮಯದಲ್ಲಿ ನಿಯಮಿತವಾಗಿ ಕೂಲಿಗೆ ಹೋಗಲಾಗದೆ ಮನೆಯಲ್ಲಿಯೇ ಇರಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು. ಇವರ ಕುಟುಂಬ ನಿರ್ವಹಣೆಯನ್ನು ಮಾಡುವುದಕ್ಕೆ ಯಾವುದಾದರು ಸ್ವ-ಉದ್ಯೋಗ ಮಾಡಬೇಕೆಂದು ಸ್ವ-ಸಹಾಯ ಸಂಘದ ವಾರದ ಸಭೆಯಲ್ಲಿ ಸಹ ಸದಸ್ಯರೊಂದಿಗೆ ಚರ್ಚಿಸಿ ತರಕಾರಿ ವ್ಯಾಪಾರವನ್ನು ಪ್ರಾರಂಭಿಸಲು ತೀರ್ಮಾನ ಕೈಗೊಂಡರು. ಅದೇ ಗ್ರಾಮದಲ್ಲಿ ನಡೆಯುವ ವಾರದ ಸಂತೆಯಲ್ಲಿ ತರಕಾರಿ ವ್ಯಾಪಾರ ಮಾಡಲು ತೀರ್ಮಾನಿಸಿ ಈ ಚಟುವಟಿಕೆಗೆ ಬೇಕಾದಂತಹ ಬಂಡವಾಳವನ್ನು ಯಾವ ರೀತಿ ಹೊಂದಿಸಬೇಕೆಂದು ಯೋಜನೆ ಮಾಡುವ ಸಂದರ್ಭದಲ್ಲಿ ಅವರ ಕಣ್ಣು ಮುಂದೆ ಬಂದಿದ್ದು ಸಂಜೀವಿನಿ ಯೋಜನೆ.

## ಬದುಕಲು ಆಧಾರವಾದ ಸಂಜೀವಿನಿ ಯೋಜನೆ

ಪುಟ್ಟಮ್ಮರವರು ಶ್ರೀ ಶಾರದ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು ಸ್ವ-ಉದ್ಯೂಗ ಮಾಡುವ ಸಲುವಾಗಿ ಬಂಡವಾಳ ಸಮಸ್ಯೆ ಎದುರಿಸಿದ ಇವರು ಸಂಜೀವಿನಿ ಯೋಜನೆಯ ಒಕ್ಕೂಟ್ಟದಲ್ಲಿ ಸದಸ್ಯರಾಗಿದ್ದು. ಶ್ರೀ ಶಾರದ ಮಹಿಳಾ ಸ್ವ-ಸಹಾಯ ಸಂಘದಲ್ಲಿ ಆಂತರಿಕ ಸಾಲವಾಗಿ ರೂ 25,000/- ಗಳನ್ನು ಪಡೆದು ತರಕಾರಿ ವ್ಯಾಪಾರವನ್ನು ಪ್ರಾರಂಭಿಸಿದ್ದು, ಪ್ರಾರಂಭದ ದಿನಗಳಲ್ಲಿ ವ್ಯಾಪಾರ ಸಾಧಾರಣವಾಗಿ ನಡೆಯುತಿತ್ತು. ದಿನಕ್ಕೆ ರೂ.200/- ರಿಂದ ರೂ.300/- ಗಳ ಆದಾಯವನ್ನು ಗಳಿಸುತ್ತಿದ್ದರು. ನಂತರದ ದಿನಗಳಲ್ಲಿ ವ್ಯಾಪಾರವನ್ನು ಇನ್ನಷ್ಟು ವಿಸ್ತರಿಸಲು ಹೆಚ್ಚಿನ ಬಂಡವಾಳದ ಅವಶ್ಯಕತೆ ಎದುರಾದ ಸಂದರ್ಭದಲ್ಲಿ



ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದಿಂದ ಶ್ರೀ.ಶಾರದ ಮಹಿಳಾ ಸ್ವ-ಸಹಾಯ ಸಂಘದಿಂದ ವಿತರಿಸಲಾದ ಸಮುದಾಯ ಬಂಡವಾಳ ನಿಧಿಯಿಂದ ರೂ.25,000/- ಗಳನ್ನು ಸಾಲದ ರೂಪದಲ್ಲಿ ಪಡೆದು ಅದನ್ನು ವ್ಯಾಪಾರಕ್ಕೆ ತೊಡಗಿಸಿ ಹೆಚ್ಚಿನ ಆಧಾಯ ಗಳಿಸುವ ಉದ್ದೇಶದಿಂದ ಹೆಚ್ಚಿನ ಆಸಕ್ತಿವಹಿಸಿ ವ್ಯಾಪಾರದಲ್ಲಿ ತೊಡಗಿಸಿಕೊಂಡರು. ಈ ವ್ಯಾಪಾರದಿಂದ ಪ್ರಸ್ತುತ ದಿನಕ್ಕೆ ರೂ.500/- ರಿಂದ 600/-ಗಳನ್ನು ಸಂಪಾದಿಸುತ್ತಿದ್ದು ಈ ಆದಾಯದಿಂದ ಕುಟುಂಬದ ನಿರ್ವಹಣೆ ಮತ್ತು ಸಾಲದ ಮರುಪಾವತಿಯನ್ನು ಮಾಡಲು ತುಂಬಾ ಅನುಕೂಲವಾಗಿದೆ ಎಂದರು. ಆರ್ಥಿಕವಾಗಿ ಹೇಳುವುದಾದರೆ ಪ್ರತಿ ತಿಂಗಳು ಪ್ರಸ್ತುತ ರೂ.18000/-ಗಳನ್ನು ಆದಾಯ ಹೊಂದಿದ್ದು. ತಮ್ಮನ್ನು ತಾವು ಪೂರ್ಣ ಪ್ರಮಾಣದಲ್ಲಿ ಈ ಕೆಲಸದಲ್ಲಿ ತೊಡಗಿಸಿಕೊಂಡು ಬೇಗನೆ ಸಾಲ ತೀರಿಸುವ ಗುರಿಯನ್ನು ಹೊಂದಿದ್ದಾರೆ ಹಾಗೂ ಸಾಮಾಜಿಕವಾಗಿ ಕಡು ಬಡವರಾಗಿದ್ದ ಇವರು ಈ ವ್ಯಾಪಾರದಿಂದ ಮಧ್ಯಮ ವರ್ಗಕ್ಕೆ ಬರಲು ಅನುಕೂಲವಾಗಿದೆ. ಅಲ್ಲದೆ ಸಮುದಾಯದಲ್ಲಿ ಇತರರಂತೆ ಕ್ರಿಯಾಶೀಲರಾಗಿರಲು ಸಹಕಾರಿಯಾಗಿದೆ ಮತ್ತು ಮಕ್ಕಳನ್ನು ಉನ್ನತ ವಿದ್ಯಾಭ್ಯಾಸ ಮಾಡಿಸುವ ಅಭಿಲಾಷೆಯನ್ನು ಹೊಂದಿದ್ದಾರೆ. ಒಟ್ಟಾರೆಯಾಗಿ ಶ್ರೀಮತಿ.ಪುಟ್ಟಮ್ಮರವರು ಶ್ರೀ.ಶಾರದ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು ಸಂಜೀವಿನಿ ಒಕ್ಕೂಟದ ಮೂಲಕ ಸಮುದಾಯ ಬಂಡವಾಳ ನಿಧಿಯಿಂದ ಸಾಲ ಪಡೆದು ವೈಯಕ್ತಿಕ ಜೀವನೋಪಾಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಪ್ರಸ್ತುತ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸುಧಾರಣೆಯನ್ನು ಕಂಡು ಸದೃಢವಾದ ಜೀವನವನ್ನು ನಡೆಸುತ್ತಿದ್ದಾರೆ.

## ಜೀವನಕ್ಕೆ ದಾರಿದೀಪವಾದ ಕುರಿ ಸಾಕಾಣಿಕೆ ಮತ್ತು ಅಂಗಡಿ

ಫಲಾನುಭವಿ ಕೈಗೊಂಡಿರುವ ಚಟುವಟಿಕೆ: ಹೆಚ್.ಡಿ.ಕೋಟೆ ತಾಲ್ಲೂಕಿನ ಚಿಕ್ಕೆರೆಯೂರು ಗ್ರಾಮ ಪಂಚಾಯಿತಿ ಮತ್ತು ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಸರೋಜಮ್ಮ ಕೋಂ ಮಾದೇಗೌಡರವರ ಕುಟುಂಬವು 3 ಜನರಿಂದ ಕೂಡಿದ ಚಿಕ್ಕ ಕುಟುಂಬವಾಗಿದ್ದು, ಮೂಲತಃ ಇವರು ಕೃಷಿ ಅವಲಂಬಿತರಾಗಿದ್ದು ಕೇವಲ ಒಂದು ಎಕರೆ ಜಮೀನು ಹೊಂದಿರುತ್ತಾರೆ.

ವಾರ್ಷಿಕವಾಗಿ ಕೇವಲ ರೂ.25000/–ಗಳನ್ನು ಮಾತ್ರ ಆದಾಯ ಪಡೆಯುತ್ತಿದ್ದು ಈ ಆದಾಯದಿಂದಲೇ ಜೀವನ ನಿರ್ವಹಣೆ ಹಾಗೂ ಮಕ್ಕಳ ವಿದ್ಯಾಭ್ಯಾಸ ನಡೆಯಬೇಕಾಗಿತ್ತು. ಆದರೆ ತಿಂಗಳ ಎಲ್ಲಾ ದಿನಗಳಲ್ಲಿ ಕೃಷಿಯಲ್ಲಿ ತೊಡಗಿಕೊಳ್ಳಲು ನೀರಾವರಿ ವ್ಯವಸ್ಥೆಯು ಇಲ್ಲದ ಕಾರಣ ಜೀವನ ನಿರ್ವಹಣೆಯು ಕಷ್ಟಕರವಾಗತೊಡಗಿತು. ಇಂತಹ ಸಂದರ್ಭದಲ್ಲಿ ಅವರಿಗೆ ಮೊದಲಿನಿಂದಲೂ ಕೂಡ ಸ್ವಂತ ಉದ್ಯೋಗವನ್ನು ಮಾಡಬೇಕೆಂಬ ಹಂಬಲ ಕಾಡುತ್ತಿತ್ತು.





ಅದರೆ ಚಿಕ್ಕರೆಯೂರು ಒಂದು ಗ್ರಾಮವಾಗಿದ್ದರಿಂದ ಈ ಪ್ರದೇಶದಲ್ಲಿ ಯಾವ ಚಟುವಟಿಕೆಯನ್ನು ಮಾಡಬಹುದು ಎಂದು ಆಲೋಚಿಸಿದರು. ನಂತರ ಸಂಘದ ಇತರ ಸದಸ್ಯರೊಂದಿಗೆ ಚರ್ಚಿಸಿದಾಗ ಚಿಲ್ಲರೆ ಅಂಗಡಿಯನ್ನು ತೆರೆಯುವ ಆಲೋಚನೆ ಶುರುವಾಯಿತು. ಆದರೆ ಯಾವುದೇ ರೀತಿಯ ಆರ್ಥಿಕ ಸಹಾಯ ದೊರೆಯದ ಅಸಹಾಯಕ ಸ್ಥಿತಿ ಇವರದ್ದಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರಿಗೆ ಆಸರೆಯಾಗಿ ಕಂಡು ಬಂದಿದ್ದು, 'ಸಂಜೀವಿನಿ ಯೋಜನೆ' "ಕಿರು ಬಂಡವಾಳ ಹೂಡಿಕೆ ಯೋಜನೆ'ಯ ತರಬೇತಿ ಪಡೆದ ಇವರು ಗ್ರಾಮೀಣ ಭಾಗದ ಪ್ರದೇಶದಲ್ಲಿ ಚಿಲ್ಲರೆ ಅಂಗಡಿಯ ಚಟುವಟಿಕೆಗೆ ಹೆಚ್ಚಿನ ಬೇಡಿಕೆ ಇರುವುದನ್ನು ಅರಿತು ಸಮುದಾಯ ಬಂಡವಾಳ ನಿಧಿಯ ರೂಪದಲ್ಲಿ "ಸಂಜೀವಿನಿ'ಯಿಂದ ರೂ.25000/–ಗಳನ್ನು ಸಾಲ ಪಡೆದು ಹಾಗೂ ಸ್ವ–ಸಹಾಯ ಸಂಘದ ಉಳಿತಾಯ ಮತ್ತು ಸ್ವಂತ ಬಂಡವಾಳದಿಂದ ಚಟುವಟಿಕೆಯನ್ನು ಕೈಗೊಂಡರು. ಶ್ರೀಮತಿ.ಸರೋಜಮ್ಮರವರು ಅಂಗಡಿಯ ಜೊತೆಗೆ ಮೇಕೆ ಸಾಕಾಣಿಕೆಯನ್ನು ಪ್ರಾರಂಭ ಮಾಡಿದ್ದು, ಈ ಕೆಲಸಕ್ಕೆ ಬೇಕಾದ ಬಂಡವಾಳವನ್ನು ಸಮುದಾಯ ಬಂಡವಾಳ ನಿಧಿಯಿಂದ ಮತ್ತೆ ರೂ.25000/–ಗಳನ್ನು ಹೊಂದಿಸಿ ಸಣ್ಣ ಮಟ್ಟದಲ್ಲಿ ಅಂಗಡಿಯನ್ನು ಹಾಗೂ 4 ಮೇಕೆಗಳನ್ನು ಖರೀದಿಸಿದರು. ಅಂಗಡಿಗೆ ಬೇಕಾದ ಸಾಮಗ್ರಿಗಳನ್ನು ಹೋಲ್‌ಸೇಲ್ ಆಗಿ ಖರೀದಿಸಿ ವ್ಯಾಪಾರವನ್ನು ಮಾಡುತ್ತಿದ್ದು ಜೊತೆಗೆ ಮೇಕೆ ಸಾಕಾಣಿಕೆಯನ್ನು ಸಹ ಮಾಡುತ್ತಿದ್ದಾರೆ. ಪ್ರಾರಂಭದ ಹಂತದಲ್ಲಿ ಸ್ವಲ್ಪ ಸಮಸ್ಯೆ ಅನುಭವಿಸಿದ್ದು ನಂತರದ ದಿನಗಳಲ್ಲಿ ಉತ್ತಮವಾಗಿ ಅಂಗಡಿ ವ್ಯಾಪಾರವನ್ನು ಹಾಗೂ ಮೇಕೆ ಸಾಕಾಣಿಕೆಯನ್ನು ನಿರ್ವಹಿಸಿ ಯಶಸ್ವಿಯಾಗಿದ್ದಾರೆ.

ಈ ರೀತಿಯಲ್ಲಿ ಜೀವನೋಪಾಯ ಚಟುವಟಿಕೆಗಳನ್ನು ಪ್ರಾರಂಭಿಸಿದ ನಂತರ ಇವರ ಆರ್ಥಿಕ ಸ್ಥಿತಿ ಉತ್ತಮವಾಗಿದ್ದು. "ಮಾಸಿಕವಾಗಿ ತಿಂಗಳಿಗೆ ರೂ.15000/–ಗಳನ್ನು ಗಳಿಸುತ್ತಿದ್ದಾರೆ". ಮೊದಲಿಗಿಂತಲೂ ಆರ್ಥಿಕವಾಗಿ ಚೇತರಿಕೆ ಕಂಡಿದ್ದಾರೆ. ಅಂಗಡಿ ವ್ಯಾಪಾರವು ಉತ್ತಮವಾಗಿದೆ ಹಾಗೂ ಮೇಕೆಗಳನ್ನು ಮಾರುಕಟ್ಟೆಗೆ ಕೊಂಡೋಯ್ದು ನೇರವಾಗಿ ವ್ಯಾಪಾರ ಮಾಡುತ್ತಿರುವುದರಿಂದ ಲಾಭವು ಉತ್ತಮವಾಗಿದೆ. ಈಗಿನ ಚಟುವಟಿಕೆಯಿಂದ ಇವರು ತಿಂಗಳ ಆದಾಯ ಹೆಚ್ಚಾಗಿದೆ. ಆರ್ಥಿಕವಾಗಿ ಬದಲಾವಣೆ ಕಂಡು ಬಂದಿದೆ. ಈ ಸಾಮಾಜಿಕವಾಗಿಯೂ ಸಹ ಬದಲಾವಣೆಗೊಂಡಿದ್ದು. ಇತರರಿಗೆ ಮಾರ್ಗದರ್ಶಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆರ್ಥಿಕವಾಗಿ ಸಾಮಾಜಿಕವಾಗಿ ಪ್ರಗತಿ ಸಾದಿಸಿ ಆದರ್ಶ ಮಹಿಳೆಯಾಗಿ ಯಶಸ್ವಿಯಾಗಿದ್ದಾರೆ. ಸಮಾಜದಲ್ಲಿ ಗೌರವದಿಂದ ಬದುಕು ಸಾಗಿಸುತ್ತಿದ್ದಾರೆ ಭಿನ್ನಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರಿಂದ ಯಾವ ರೀತಿಯಲ್ಲಿ ಆರ್ಥಿಕವಾಗಿ ಸದೃಡತೆ ಸಾಧ್ಯವೆಂದು ಶ್ರೀಮತಿ.ಸರೋಜಮ್ಮನವರು ತೋರಿಸಿಕೊಟ್ಟಿದ್ದು ಇತರರಿಗೂ ಮಾದರಿಯಾಗಿದ್ದಾರೆ.

ಕರ್ನಾಟಕ ಸರ್ಕಾರ

ಸಂ. ಗ್ರಾಅಪ 1061 ಗ್ರಾಪಂಅ 2019

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಬಹುಮಹಡಿ ಕಟ್ಟಡ,**
**ಬೆಂಗಳೂರು, ದಿನಾಂಕ: 11.12.2019**

# ಸುತ್ತೋಲೆ

**ವಿಷಯ:** ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿ ತರಲು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಮಾರ್ಗಸೂಚಿಗಳ ಬಗ್ಗೆ.

**ಉಲ್ಲೇಖ:** ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇವರ ಅ.ಸ. ಪತ್ರ ಸಂ. ಇಡಿ 05 ಮಾಹಿತಿ 2019, ದಿನಾಂಕ 10.12.2019.

ಸಂವಿಧಾನದ ಕಲಂ 23(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕು. ಸಂವಿಧಾನದ ಈ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ 8 ವರ್ಷಗಳ ಶಿಕ್ಷಣದ ಸಾರ್ವತ್ರೀಕರಣವು ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳ ಸಾಮೂಹಿಕ ಜವಾಬ್ದಾರಿಯಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣದ ಮುಖ್ಯ ವಾಹಿನಿಗೆ ತರುವುದು ಅತಿ ದೊಡ್ಡ ಸವಾಲಾಗಿರುತ್ತದೆ. ಪೋಷಕರ ಬಡತನ, ಅನಕ್ಷರತೆ, ಶಿಕ್ಷಣದ ಬಗ್ಗೆ ಅರಿವಿನ ಕೊರತೆ, ಸಾಮಾಜಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ಪರಿಸ್ಥಿತಿಗಳು ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ತೊಡಕಾಗಿರುತ್ತದೆ.

ಈ ಎಲ್ಲಾ ಅಂಶಗಳನ್ನು ಮೀರಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ಶಿಕ್ಷಣದ ಬಗ್ಗೆ ಸಂವಿಧಾನದ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ಹಲವು ಉಪಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇಂತಹ ಕ್ರಮಗಳಲ್ಲಿ ಒಂದು ವಿಭಿನ್ನ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿಗೆ ಕರೆ ತಂದು ಅವರೆಲ್ಲರಿಗೆ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ಲಭ್ಯವಾಗುವಂತೆ ನೋಡಿಕೊಳ್ಳುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೊಂದಿಗೆ ಸ್ಥಳೀಯ ಸರ್ಕಾರಗಳ ಜವಾಬ್ದಾರಿಯಾಗಿದೆ.

ಶಿಕ್ಷಣ ಹಕ್ಕು ಕಾಯ್ದೆ ಕಲಂ 32ರಲ್ಲಿನ ಉಪಬಂಧದಂತೆ ಸ್ಥಳೀಯ ಸರ್ಕಾರಗಳು ಶಾಲೆಯ ಮೂಲಭೂತ ಸೌಕರ್ಯ, ಮಕ್ಕಳ ದಾಖಲಾತಿ, ಹಾಜರಾತಿ ಹಾಗೂ ಶಾಲೆಯಿಂದ

ಹೊರಗುಳಿದ ಮಕ್ಕಳನ್ನು ಶಾಲಾ ಶಿಕ್ಷಣ ಮುಖ್ಯ ವಾಹಿನಿಗೆ ತರುವ ಕಾರ್ಯಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಮುಂದುವರೆದು, ಇದೇ ಕಾಯ್ದೆಯ ನಿಯಮ 9(ಡಿ)ಯಲ್ಲಿ ಸ್ಥಳೀಯ ಸರ್ಕಾರಗಳು ಅಂದರೆ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಮುನಿಸಿಪಲ್ ಸಂಸ್ಥೆಗಳು Village Education Register ಹಾಗೂ Ward Education Register ಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಜವಾಬ್ದಾರಿಗಳನ್ನು ನಿರ್ವಹಿಸದಿರುವ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂ. 15768/2013 ರಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ನೀಡಿರುವ ನಿರ್ದೇಶನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಅವುಗಳ ಜವಾಬ್ದಾರಿಗಳನ್ನು ನಿರ್ವಹಿಸಲು ನಿರ್ದೇಶನ ನೀಡುವಂತೆ ಸೂಚಿಸಿರುತ್ತದೆ.

ಈ ಎಲ್ಲಾ ಪ್ರಮುಖ ಅಂಶಗಳನ್ನಾಧರಿಸಿ ದಿನಾಂಕ 07.11.2019 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಕಾರ್ಮಿಕರೊಡನೆ ವಲಸೆ ಬಂದ ಮಕ್ಕಳ ಗಣತಿಯನ್ನು ನಡೆಸಿ ಅವರನ್ನು ಶಾಲೆಗೆ ದಾಖಲಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸಹ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಲಾಗಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳೊಡನೆ ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳೊಡನೆ ಚರ್ಚಿಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕ್ರಿಯಾತ್ಮಕವಾಗಿ ಕಾರ್ಯಕ್ರಮಗಳನ್ನು ರೂಪಿಸುವಂತೆ ಮತ್ತು ಅನುಷ್ಠಾನಗೊಳಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಸಹಿ/–

**(ಎಸ್.ಎ.ಅಶ್ರಫುಲ್ ಹಸನ್)**

ನಿರ್ದೇಶಕರು (ಪಂಚಾಯತ್ ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**
**ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ**
**ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ**
**2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.**
**ದೂ. 080-22372738** e-mail: karnregs@gmail.com

ಗ್ರಾಅಪ 272(1) ಉಖಾಯೋ 2018 ದಿನಾಂಕ: 20–12–2019

**ಇವರಿಗೆ**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ
ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ದಾವಣಗೆರೆ
ಬಳ್ಳಾರಿ, ಕಲಬುರಗಿ, ವಿಜಯಪುರ

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಬರಪೀಡಿತ ಪ್ರದೇಶಗಳಲ್ಲಿ ಕೂಲಿ ದಿನಗಳನ್ನು 100 ರಿಂದ 150 ದಿನಗಳಿಗೆ ಹೆಚ್ಚಿಸಿ ಅಕುಶಲ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರ ಸಂಖ್ಯೆ: ಎ–11019/02/2019–RE (IV) (368500) ದಿನಾಂಕ: 18–12–2019.

~~~~~~

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದಲ್ಲಿ 2019–20ನೇ ಸಾಲಿನ ಮುಂಗಾರು ಹಂಗಾಮಿಗೆ ತೀವ್ರ ಮಳೆ ಕೊರತೆಯಾದ ಹಿನ್ನೆಲೆಯಲ್ಲಿ ಅಕ್ಟೋಬರ್ ಮಾಹೆಯಲ್ಲಿ 18 ಜಿಲ್ಲೆಗಳ 49 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಕಂ.ಇ 117 ಟಿ. ಎನ್.ಆರ್ 2019 ದಿನಾಂಕ: 28–10–2019ರಲ್ಲಿ ಘೋಷಿಸಲಾಗಿರುವುದು ತಮಗೆ ತಿಳಿದ ವಿಷಯವೇ ಆಗಿರುತ್ತದೆ.
~~~~~~

ಸದರಿ 49 ತಾಲ್ಲೂಕುಗಳ ಪೈಕಿ 15 ತಾಲ್ಲೂಕುಗಳು ಈ ಹಿಂದೆ ಪ್ರವಾಹಕ್ಕೂ ತುತ್ತಾಗಿದ್ದು, ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಕೇಂದ್ರ ಸರ್ಕಾರವು ಪ್ರವಾಹ ಪೀಡಿತ ಪ್ರದೇಶಗಳೆಂದು ಗುರುತಿಸಿ 150 ದಿನಗಳ ಅನುಮೋದನೆಯನ್ನು ದಿನಾಂಕ: 31–10–2019ರಂದು ನೀಡಲಾಗಿರುತ್ತದೆ. ಉಳಿಕೆ 34 ತಾಲ್ಲೂಕುಗಳಿಗೆ ಹೆಚ್ಚುವರಿ 50 ಉದ್ಯೋಗದ ದಿನಗಳನ್ನು ಕೋರಲಾಗಿದ್ದು, ಉಲ್ಲೇಖಿತ ಪತ್ರದನ್ವಯ ಸದರಿ ಮನವಿಯನ್ನು ಅಂಗೀಕರಿಸಲಾಗಿದೆ ಎಂದು ತಿಳಿಯಬಯಸಲಾಗಿದೆ. ಕೇಂದ್ರ ಸರ್ಕಾರದ ಆದೇಶ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಹೀಗಾಗಿ ರಾಜ್ಯದ 11 ಜಿಲ್ಲೆಗಳ 34 ತಾಲ್ಲೂಕುಗಳಿಗೆ ಹೆಚ್ಚುವರಿ 50 ಉದ್ಯೋಗ ದಿನಗಳನ್ನು ಸೃಜಿಸಲು ಅನುಮೋದನೆ ನೀಡಲಾಗಿದ್ದು, ಈ ಕೂಡಲೇ ಸದರಿ ಆದೇಶವನ್ನು ಅನುಷ್ಠಾನಿಸಿ, ಗ್ರಾಮೀಣ ಅಕುಶಲ ಕೂಲಿ ಕಾರ್ಮಿಕರಿಗೆ 150 ದಿನಗಳ ಉದ್ಯೋಗವನ್ನು ನಿರ್ವಹಿಸಲು ಜರೂರು ಕ್ರಮ ತೆಗೆದುಕೊಂಡು ಸದರಿ ವಿವರಗಳನ್ನು ಒಋಖ ತಂತ್ರಾಂಶದಲ್ಲಿ ಆರೋಹಿಸಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ

ಸಹಿ/–

ಮುಖ್ಯ ಕಾರ್ಯಾಚರಣೆ ಅಧಿಕಾರಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ವಿಕಾಸ 2020 ಕ್ಯಾಲೆಂಡರ್

## ಜುಲೈ 2020

| | | | | | |
|---|---|---|---|---|---|
| ಭಾನು | | 5 ○ | 12 | 19 | 26 |
| ಸೋ | | 6 | 13 | 20 ● | 27 |
| ಮಂ | | 7 | 14 | 21 | 28 |
| ಬುಧ | 1 | 8 | 15 | 22 | 29 |
| ಗುರು | 2 | 9 | 16 | 23 | 30 |
| ಶುಕ್ರ | 3 | 10 | 17 | 24 | 31 |
| ಶನಿ | 4 | 11 | 18 | 25 | |

## ಆಗಸ್ಟ್ 2020

| | | | | | |
|---|---|---|---|---|---|
| ಭಾನು | 30 | 2 | 9 | 16 | 23 |
| ಸೋ | 31 | 3 ○ | 10 | 17 | 24 |
| ಮಂ | | 4 | 11 | 18 | 25 |
| ಬುಧ | | 5 | 12 | 19 ● | 26 |
| ಗುರು | | 6 | 13 | 20 | 27 |
| ಶುಕ್ರ | | 7 | 14 | 21 | 28 |
| ಶನಿ | 1 | 8 | 15 | 22 | 29 |

## ಸೆಪ್ಟೆಂಬರ್ 2020

| | | | | | |
|---|---|---|---|---|---|
| ಭಾನು | | 6 | 13 | 20 | 27 |
| ಸೋ | | 7 | 14 | 21 | 28 |
| ಮಂ | 1 | 8 | 15 | 22 | 29 |
| ಬುಧ | 2 ○ | 9 | 16 | 23 | 30 |
| ಗುರು | 3 | 10 | 17 ● | 24 | |
| ಶುಕ್ರ | 4 | 11 | 18 | 25 | |
| ಶನಿ | 5 | 12 | 19 | 26 | |

## ಅಕ್ಟೋಬರ್ 2020

| | | | | | |
|---|---|---|---|---|---|
| ಭಾನು | | 4 | 11 | 18 | 25 |
| ಸೋ | | 5 | 12 | 19 | 26 |
| ಮಂ | | 6 | 13 | 20 | 27 |
| ಬುಧ | | 7 | 14 | 21 | 28 |
| ಗುರು | 1 ○ | 8 | 15 | 22 | 29 |
| ಶುಕ್ರ | 2 | 9 | 16 ● | 23 | 30 |
| ಶನಿ | 3 | 10 | 17 | 24 | 31 ○ |

## ನವಂಬರ್ 2020

| | | | | | |
|---|---|---|---|---|---|
| ಭಾನು | 1 | 8 | 15 ● | 22 | 29 |
| ಸೋ | 2 | 9 | 16 | 23 | 30 ○ |
| ಮಂ | 3 | 10 | 17 | 24 | |
| ಬುಧ | 4 | 11 | 18 | 25 | |
| ಗುರು | 5 | 12 | 19 | 26 | |
| ಶುಕ್ರ | 6 | 13 | 20 | 27 | |
| ಶನಿ | 7 | 14 | 21 | 28 | |

## ಡಿಸೆಂಬರ್ 2020

| | | | | | |
|---|---|---|---|---|---|
| ಭಾನು | | 6 | 13 | 20 | 27 |
| ಸೋ | | 7 | 14 ● | 21 | 28 |
| ಮಂ | 1 | 8 | 15 | 22 | 29 |
| ಬುಧ | 2 | 9 | 16 | 23 | 30 ○ |
| ಗುರು | 3 | 10 | 17 | 24 | 31 |
| ಶುಕ್ರ | 4 | 11 | 18 | 25 | |
| ಶನಿ | 5 | 12 | 19 | 26 | |

**ಜುಲೈ**
11 – 2ನೇ ಶನಿವಾರ
25 – 4ನೇ ಶನಿವಾರ
31 –ಶ್ರೀ ವರಮಹಾಲಕ್ಷ್ಮಿ ವ್ರತ

**ಆಗಸ್ಟ್**
1– ಬಕ್ರೀದ್
8 –2ನೇ ಶನಿವಾರ
11 –ಶ್ರೀ ಕೃಷ್ಣ ಜನ್ಮಾಷ್ಟಮಿ
15 –ಸ್ವಾತಂತ್ರ್ಯ ದಿನಾಚರಣೆ
21 –ಸ್ವರ್ಣಗೌರಿ ವ್ರತ
22 – ವರಸಿದ್ದಿ ವಿನಾಯಕ ವ್ರತ/ 4ನೇ ಶನಿವಾರ
30–ಮೊಹರಂ ಕಡೇ ದಿನ
31 – ಅನಂತ ಪದ್ಮನಾಭ ವ್ರತ/ ಋಗ್–ಉಪಾಕರ್ಮ/ ತಿರುಓಣಂ

**ಸೆಪ್ಟೆಂಬರ್**
1 –ಯಜುರ್–ಉಪಾಕರ್ಮ
2 –ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ
08 –ಕನ್ಯಾಮರಿಯಮ್ಮ ಜಯಂತಿ
12–2ನೇ ಶನಿವಾರ
17– ಮಹಾಲಯ ಅಮಾವಾಸ್ಯೆ / ಶ್ರೀ ವಿಶ್ವಕರ್ಮ ಜಯಂತಿ
26 – 4ನೇ ಶನಿವಾರ

**ಅಕ್ಟೋಬರ್**
2–ಮಹಾತ್ಮ ಗಾಂಧಿ ಜಯಂತಿ
10–2ನೇ ಶನಿವಾರ
17–ತುಲ ಸಂಕ್ರಮಣ
24 – 4ನೇ ಶನಿವಾರ
25–ಮಹಾನವಮಿ / ಆಯುಧಪೂಜೆ
26–ವಿಜಯ ದಶಮಿ
30–ಈದ್–ಮಿಲಾದ್
31–ಮಹರ್ಷಿ ವಾಲ್ಮೀಕಿ ಜಯಂತಿ

**ನವೆಂಬರ್**
1–ಕನ್ನಡ ರಾಜ್ಯೋತ್ಸವ
14– ನರಕ ಚತುರ್ದಶಿ / 2ನೇ ಶನಿವಾರ
16–ಬಲಿಪಾಡ್ಯಮಿ/ದೀಪಾವಳಿ
28 – 4ನೇ ಶನಿವಾರ
30–ಶ್ರೀ ಗುರುನಾನಕ್ ಜಯಂತಿ

**ಡಿಸೆಂಬರ್**
1 –ಹುತ್ತರಿ ಹಬ್ಬ
3–ಕನಕದಾಸ ಜಯಂತಿ
12–2ನೇ ಶನಿವಾರ
24–ಕ್ರಿಸ್‌ಮಸ್ ಈವ್
25–ಕ್ರಿಸ್‌ಮಸ್
26 – 4ನೇ ಶನಿವಾರ

● ಅಮಾವಾಸ್ಯೆ
o ಹುಣ್ಣಿಮೆ
ನಿರ್ಬಂಧಿತ ರಜೆ
ಸಾರ್ವತ್ರಿಕ ರಜಾ
ವಿಶೇಷ ದಿನಾಚರಣೆ.

# KARNATAKA VIKAS: JANUARY 2020

**A Monthly Magazine for Rural Development and Panchayath Raj Department, Government of Karnataka**

**Regd. KA / BGGPO / 2531 / 2018-20, License of Post 'without Prepayment' WPP - 32**

**Date of Publication : 8th of Every Month.**

**RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru on 11th or 19th or 23rd of every month.**


# 2020

## ವರ್ಷದ ಶುಭಾಶಯಗಳು

**"ಬಲ್ಲವರು ನುಡಿದುದು**
**ಬದಲಾವಣೆಯೇ ಜಗದ ನಿಯಮ**
**ಮೋಡದಿ ಕಾಲೂರಿ ನಡೆಯುವುದೂ**
**ಇನ್ನೊಂದು ಆಯಾಮ"**

**ದೇಶದೆಲ್ಲೆಡೆ ಸ್ವಚ್ಛತೆಯ ಅಲೆ ಬೀಸುತ್ತಿದ್ದು,**
**ಈ ಹೊಸ ವರುಷದಂದು**
**ಸ್ವಚ್ಛತೆಯ ಬದುಕು ನಿಮ್ಮದಾಗಲಿ.**


Published & Owned by
**DIRECTOR**
**(PANCHAYATH RAJ)**
Rural Development and
Panchayath Raj Department

Chief Editor
**Gagan A.S**

Place & Publication
**Karnataka Vikas**
No. 309, 3rd Floor, Gate No. 1
M.S. Building, Dr. Ambedkar Veedhi,
Bengaluru - 560 001

Printed by
**LAVANYA MUDRANA**
No. 19, 15th Cross,
B.S.K. 1 Stage,
Bengaluru - 560 050
Mobile: 98450 63381

Price : ಬೆಲೆ : ₹ 10.00